ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 25 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 39 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆ

ನಾಳೆ ದೆಹಲಿಗೆ ಬರುವಂತೆ ಸಿಎಂಗೆ ಹೈಕಮಾಂಡ್ ಬುಲಾವ್

■ ನಾಯಕತ್ವ ಬದಲಾವಣೆ ಗೊಂದಲಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ಹೈಕಮಾಂಡ್ ದಿಟ್ಟ ಹೆಜ್ಜೆ? ■ ಕೇರಳ ಸರ್ಕಾರ ರಚನೆ ನಂತರ ಕರ್ನಾಟಕ ಸರ್ಕಾರ ಭದ್ರಗೊಳಿಸುವ ಕಸರತ್ತು



ಮೈಸೂರು, ಮೇ 24– ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆಯಾಗಿದ್ದು, 'ಮುಖ್ಯಮಂತ್ರಿ ಕುರ್ಚಿ' ಹಗ್ಗ–ಜಗ್ಗಾಟಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ಕಾಂಗ್ರೆಸ್ ಹೈಕಮಾಂಡ್ ಮುಂದಾಗಿದೆ ಎಂದು ಹೇಳಲಾಗುತ್ತಿದೆ.

ಇದಕ್ಕೆ ಪೂರಕವಾಗಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಮ್ಮುಖದಲ್ಲಿ ಎಸ್‌ಐಆರ್ ಸಂಬಂಧ ಚರ್ಚೆ ನಡೆಸುವ ಸಂದರ್ಭದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹೈಕಮಾಂಡ್ ನಾಯಕರು ಕರೆ ಮಾಡಿ, ಮೇ 26ಕ್ಕೆ ದೆಹಲಿಗೆ ಬರುವಂತೆ ಬುಲಾವ್ ನೀಡಿದ್ದಾರೆ ಎಂದು ತಿಳಿದುಬಂದಿದೆ. ನಂತರದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನೂ ಆಹ್ವಾನಿಸಲಾಗುವುದು ಎಂದು ತಿಳಿದು ಬಂದಿದೆ.

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ವಿಚಾರ ಬೂದಿ ಮುಚ್ಚಿದ ಕೆಂಡದಂತಿದೆ. ಅದು ಯಾವ ಸಂದರ್ಭದಲ್ಲಿ ಜ್ವಾಲೆಯಾಗಿ ಪರಿಣಮಿಸುವ ಸಾಧ್ಯತೆ ಇದೆ. ಕೆಲ ತಿಂಗಳ ಹಿಂದೆ ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿಗರು ಒಂದಿಲ್ಲೊಂದು ಹೇಳಿಕೆ ನೀಡುತ್ತಿದ್ದರು. ಆ ವೇಳೆ ಪಂಚ ರಾಜ್ಯ ಚುನಾವಣೆ ಇನ್ನಿತರ ವಿಚಾರಗಳನ್ನು ಮುಂದಿಟ್ಟುಕೊಂಡು ಹೈಕಮಾಂಡ್, ರಾಜ್ಯ ನಾಯಕರಿಗೆ ಬ್ರೇಕ್ ಹಾಕಿತ್ತು.

ಆದರೆ ಹೈಕಮಾಂಡ್ ಈ ಹಿಂದೆ ಹೇಳಿದಂತೆ ಪಂಚರಾಜ್ಯ ಚುನಾವಣೆ ಮುಗಿದು, ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ರಚನೆಯೂ ಆಗಿದ್ದಾಗಿದೆ. ಈ ಹಿನ್ನೆಲೆಯಲ್ಲಿ ಮತ್ತೆ ನಾಯಕತ್ವ ಬದಲಾವಣೆ ವಿಚಾರ ಸ್ಫೋಟಿಸಬಹುದು ಎಂಬ ಮುನ್ಸೂಚನೆ ಹಾಗೂ ಸುಮಾರು 25ಕ್ಕಿಂತ ಹೆಚ್ಚು ಶಾಸಕರು ದೆಹಲಿ ಪ್ರವಾಸಕ್ಕೆ ಸಿದ್ಧತೆ ನಡೆಸಿದ್ದನ್ನು ಗಮನಿಸಿದ ಹೈಕಮಾಂಡ್ 'ಮುಖ್ಯಮಂತ್ರಿ ಕುರ್ಚಿ' ವಿಚಾರಕ್ಕೆ ಸಂಬಂಧಿಸಿದಂತೆ ಸ್ಪಷ್ಟ ನಿರ್ಧಾರಕ್ಕೆ ಬರಲು ಮುಂದಾಗಿದೆ ಎನ್ನಲಾಗಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬುಲಾವ್ ನೀಡಿದ್ದು, ಅವರೊಂದಿಗೆ ಮಾತುಕತೆ ನಡೆಸಿದ ಬಳಿಕ ಡಿಸಿಎಂ ಡಿ.ಕೆ. ಶಿವಕುಮಾರ್ ಅವರೊಂದಿಗೂ ಚರ್ಚಿಸಿ ಸೂಕ್ತ ತೀರ್ಮಾನಕ್ಕೆ ಬರಲು ರಾಷ್ಟ್ರ ನಾಯಕರು ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಗೊಂದಲಕ್ಕೆ ತೆರೆ: ಕಾಂಗ್ರೆಸ್ 2023ರ ಚುನಾವಣೆಯಲ್ಲಿ ಬಹುಮತ ಪಡೆದು ಸರ್ಕಾರ ರಚಿಸುವ ■ 6ನೇ ಪುಟಕ್ಕೆ

ನನಗೆ ಗೊತ್ತಿಲ್ಲ: ಡಿಕೆಶಿ

ಬೆಂಗಳೂರು: ಹೈಕಮಾಂಡ್ ನಾಯಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ದೆಹಲಿಗೆ ಕರೆದಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸದಾಶಿವನಗರ ನಿವಾಸದ ಬಳಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ನಾನು ಈಗಷ್ಟೇ ಸಭೆ ಮುಗಿಸಿ ಕೊಂಡು ಬಂದಿದ್ದೇನೆ. ಈ ವಿಚಾರ ವಾಗಿ ನನಗೆ ಯಾವುದೇ ಮಾಹಿತಿ ಇಲ್ಲ ಎಂದರು. ಸಿಎಂ ಅವರನ್ನು ರಾಜ್ಯಸಭೆ ಚುನಾವಣೆ ಹಿನ್ನೆಲೆಯಲ್ಲಿ ಕರೆದಿದ್ದಾರಾ ಅಥವಾ ನಾಯಕತ್ವ ಬದಲಾವಣೆ ಹಿನ್ನೆಲೆಯಲ್ಲಿ ಕರೆದಿದ್ದಾರಾ ಎಂದು ಕೇಳಿದಾಗ, 'ನನಗೆ ಗೊತ್ತಿಲ್ಲ' ಎಂದು ಸ್ಪಷ್ಟಪಡಿಸಿದರು.

ಭಟ್ಕಳದಲ್ಲಿ ಘೋರ ಜಲ ದುರಂತ

ಕಪ್ಪೆ ಚಿಪ್ಪು ಸಂಗ್ರಹಿಸಲು ಹೋದ ಒಂದೇ ಕುಟುಂಬದ 11 ಮಂದಿ ದುರ್ಮರಣ

ಮೂವರು ಪಾರು, ಮುಗಿಲು ಮುಟ್ಟಿದ ಆಕ್ರಂದನ



ಭಟ್ಕಳ: ನದಿಯಲ್ಲಿ ಕಪ್ಪೆಚಿಪ್ಪು ಹೆಕ್ಕಲು ತೆರಳಿದ್ದ ಒಂದೇ ಕುಟುಂಬದ 11 ಮಂದಿ ನೀರಿನಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿರುವ ಘಟನೆ ಉತ್ತರ ಕನ್ನಡ ಜಿಲ್ಲೆ ಭಟ್ಕಳದಲ್ಲಿ ಸಂಭವಿಸಿದೆ.

ತಾಲೂಕಿನ ಶಿರಾಲಿಯ ಅಳ್ವೇಕೋಡಿ ಸಮೀಪದ ತಟ್ಟಿಹಕ್ಕಲ ಕಳಿನಟ್ಟಿ ನದಿಯಲ್ಲಿ ಈ ದುರಂತ ಸಂಭವಿಸಿದ್ದು, ಪಡುಶಿರಾಲಿ ಬೆಂಗ್ರೆಯ ಲಕ್ಷ್ಮೀ ಮಾದೇವ ನಾಯ್ಕ ಮಳುಮನೆ (38), ಶಾರದಾ ಹೊಳೆಯವರಾದ ಉಮೇಶ್ ನಾಯ್ಕ (30), ಲಕ್ಷ್ಮೀ ನಾಯ್ಕ(30), ಲಕ್ಷ್ಮೀ ಅಣ್ಣಪ್ಪ ನಾಯ್ಕ(44), ಲಕ್ಷ್ಮೀ ಶಿವರಾಮ ನಾಯ್ಕ (49), ಜ್ಯೋತಿ ನಾಗಪ್ಪ ನಾಯ್ಕ(37), ಮಾಲತಿ ನಾಯ್ಕ(38), ಶಿವರಾಮ ನಾಯ್ಕ (39), ನಾಗರತ್ನ ಪರಮೇಶ್ವರ ನಾಯ್ಕ (40) ಹಾಗೂ ಮಾಸ್ತಮ್ಮ ಮಂಜುನಾಥ ನಾಯ್ಕ(42), ಮಾದೇವ ಜಟ್ಟಪ್ಪನಾಯ್ಕ (52) ಅವರು ಸಾವನ್ನಪ್ಪಿದ್ದಾರೆ. ನಾಗರತ್ನ ಈಶ್ವರ್ ನಾಯ್ಕ (40), ಮಾದೇವಿ ಮಂಜುನಾಥ ನಾಯ್ಕ ಹಾಗೂ ಲಲಿತಾ ಜಗದೀಶ್ ತೀವ್ರವಾಗಿ ಅಸ್ವಸ್ಥರಾಗಿದ್ದು, ಅವರನ್ನು ಉಡುಪಿಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ನೀರಿನ ಹರಿವು ಹೆಚ್ಚಿದ್ದರೂ ಇಬ್ಬರು ಪುರುಷರು ಹಾಗೂ 11 ಮಹಿಳೆಯರು ಸೇರಿ ಒಟ್ಟು 14 ಮಂದಿ ಕಪ್ಪೆ ಚಿಪ್ಪು ಆರಿಸಲು ಇಂದು ನದಿಗೆ ಇಳಿದಿದ್ದರು. ಪರಸ್ಪರ ಕೈಹಿಡಿದು ಕಪ್ಪೆ ಚಿಪ್ಪು ಆರಿಸಲು ಮುಂದಾದಾಗ ನೀರಿನ ರಭಸಕ್ಕೆ ಸಿಲುಕಿ 11 ಮಂದಿ ಸಾವನ್ನಪ್ಪಿ, ಸದ್ಯ ಮೂವರು ಮಹಿಳೆಯರು ಪಾರಾಗಿದ್ದಾರೆ. ತಡರಾತ್ರಿ ಸುರಿದ ಭಾರೀ ಮಳೆಯಿಂದ ನೀರಿನ ಹರಿವು ಹೆಚ್ಚಾಗಿತ್ತು. ಅಲ್ಲದೆ, ಸಮುದ್ರದ ಅಲೆಗಳ ಅಬ್ಬರದಿಂದ ನೀರಿನ ಮಟ್ಟ ಮತ್ತಷ್ಟು ಏರಿಕೆಯಾಗಿ ಈ ದುರಂತ ಸಂಭವಿಸಿದೆ ಎಂದು ತಿಳಿದುಬಂದಿದೆ.

ಮುಗಿಲುಮುಟ್ಟಿದ ಆಕ್ರಂದನ: ನದಿ ಅಳಿವೆಯಲ್ಲಿ ಕೊಚ್ಚಿ ಹೋದವರ ಪೈಕಿ 6 ಮೃತದೇಹಗಳನ್ನು ಭಟ್ಕಳದ ಸರ್ಕಾರಿ ಆಸ್ಪತ್ರೆಗೆ ಹಾಗೂ ■ 6ನೇ ಪುಟಕ್ಕೆ

ಸಿಎಂ ಸಂತಾಪ; ತಲಾ 5 ಲಕ್ಷ ಪರಿಹಾರ ಘೋಷಣೆ




ಬೆಂಗಳೂರು: ಭಟ್ಕಳದಲ್ಲಿ ಸಂಭವಿಸಿದ ದುರಂತದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ ವ್ಯಕ್ತಪಡಿಸಿ, ಮೃತರ ಕುಟುಂಬಸ್ಥರಿಗೆ ಪರಿಹಾರ ಘೋಷಿಸಿದ್ದಾರೆ.

ಈ ಸಂಬಂಧ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅವರು, ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಸಮೀಪದ ತಟ್ಟಿಹಕ್ಕಲು ಕಡಲ ತೀರದಲ್ಲಿ ಕಪ್ಪೆಚಿಪ್ಪು ತರಲು ಹೋದವರ ಪೈಕಿ ಒಂದೇ ಕುಟುಂಬದ 11 ಮಂದಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ ಸುದ್ದಿ ತಿಳಿದು ಸಂಕಟವಾಯಿತು. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಇದೊಂದು ಅತ್ಯಂತ ದುರದೃಷ್ಟಕರ ಮತ್ತು ನೋವಿನ ಘಟನೆ. ದುರಂತದಲ್ಲಿ ಮಡಿದವರ ಕುಟುಂಬಕ್ಕೆ ಮಾನವೀಯ ನೆಲೆಯಲ್ಲಿ ರಾಜ್ಯ ಸರ್ಕಾರದಿಂದ ತಲಾ 5 ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು. ಇನ್ನೂ ಕೆಲವರು ಈ ದುರ್ಘಟನೆ ಯಲ್ಲಿ ಕಾಣೆಯಾಗಿರುವ ಮಾಹಿತಿಯಿದ್ದು, ಅವರಿಗಾಗಿ ತೀವ್ರ ಹುಡುಕಾಟ ನಡೆಸಲಾಗುತ್ತಿದೆ. ಕಾಣೆಯಾದವರು ಬದುಕಿ ಬಂದು ತಮ್ಮವರನ್ನು ಕೂಡಿಕೊಳ್ಳಲಿ ಎಂದು ನಾವೆಲ್ಲರೂ ದೇವರಲ್ಲಿ ಪ್ರಾರ್ಥಿಸೋಣ ಎಂದು ತಿಳಿಸಿದ್ದಾರೆ.

ನಾಗಮಲೆ ಪಾದಯಾತ್ರೆ ವೇಳೆ ಬಾಲಕನನ್ನು ಬಲಿ ಪಡೆದ ಪ್ರಕರಣ

14 ದಿನಗಳ ಬಳಿಕ ಬೋನಿಗೆ ಬಿದ್ದ ಚಿರತೆ

- ಆರೋಗ್ಯದಿಂದ ಕೂಡಿರುವ ಒಂದೂವರೆ ವರ್ಷದ ಹೆಣ್ಣು ಚಿರತೆ
- ಬನ್ನೇರುಘಟ್ಟ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರ
- ಪರೀಕ್ಷೆಗೆ ಸ್ಯಾಂಪಲ್ ರವಾನೆ



ನಾಗಮಲೆಯ ಪಾದಯಾತ್ರಿ ಬಾಲಕನ ಮೇಲೆ ದಾಳಿ ನಡೆಸಿದ ಸ್ಥಳದಲ್ಲಿ ಬೋನಿಗೆ ಬಿದ್ದು ಸೆರೆಯಾದ ಚಿರತೆ.

ಮಲೆಮಹದೇಶ್ವರ ಬೆಟ್ಟ, ಮೇ 24 (ಎಂಟಿವೈ)– ನಾಗಮಲೆಗೆ ಪೋಷಕರೊಂದಿಗೆ ಪಾದಯಾತ್ರೆ ತೆರಳುತ್ತಿದ್ದ ಬೆಂಗಳೂರಿನ 10 ವರ್ಷ ಬಾಲಕನ ಮೇಲೆ ದಾಳಿ ಮಾಡಿ ಕೊಂದು ಹಾಕಿದ್ದ ಚಿರತೆ 14 ದಿನಗಳ ಬಳಿಕ ಬೋನಿಗೆ ಬಿದ್ದಿದೆ. ಇದರಿಂದ ಸ್ಥಳೀಯರು ಹಾಗೂ ಭಕ್ತರು ನಿಟ್ಟುಸಿರು ಬಿಟ್ಟಿದ್ದಾರೆ.

ಮಲೆ ಮಹದೇಶ್ವರಬೆಟ್ಟದಿಂದ ನಾಗಮಲೆಗೆ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದ ವೇಳೆ ಇಂಡಿಗನತ್ತ ಗ್ರಾಮದ ಸಮೀಪ ಮೇ 10ರಂದು ಬೆಂಗಳೂರಿನ ಕಾಮಾಕ್ಷಿ ಪಾಳ್ಯದ ನಿವಾಸಿ ಸುರೇಶ್ ಮತ್ತು ಪವಿತ್ರ ದಂಪತಿ ಪುತ್ರ ಹರ್ಷಿತ್(10) ನನ್ನು ದಾಳಿ ನಡೆಸಿ ಕೊಂದು ಹಾಕಿದ್ದ ಚಿರತೆ ಕೊನೆಗೂ ಸೆರೆ ಸಿಕ್ಕಿದೆ. ಕಳೆದ 14 ದಿನಗಳಿಂದ ಅರಣ್ಯ ಇಲಾಖೆ ಸಿಬ್ಬಂದಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಚಿರತೆ ಸೆರೆ ಹಿಡಿಯುವುದೇ ಸವಾಲಾಗಿತ್ತು. ಗುಡ್ಡಗಾಡು ಪ್ರದೇಶವಾಗಿದ್ದರಿಂದ ಚಿರತೆ ಚಲನವಲನದ ಮೇಲೆ ನಿಗಾ ಇಡಲು ಸಾಧ್ಯವಾಗಿರಲಿಲ್ಲ. ಇದರಿಂದ ನಾಗಮಲೆಗೆ ಹೋಗಲು ಬಯಸುವ ಭಕ್ತರಿಗೆ ನಿರಾಸೆಯಾಗಿತ್ತು. ಅಲ್ಲದೆ, ಚಿರತೆ ಮತ್ತೆ ದಾಳಿ ಮಾಡಬಹುದೆಂಬ ಆತಂಕ ಸ್ಥಳೀಯ ಗ್ರಾಮಸ್ಥರಲ್ಲಿ ಮನೆ ಮಾಡಿತ್ತು.

ಮೇಕೆ ಕೂಗಿಗೆ ಬಂದು ಸೆರೆಯಾದ ಚಿರತೆ: ಹಸಿವಿನಿಂದ ಕಂಗೆಟ್ಟಿದ್ದ ಒಂದೂವರೆಯಿಂದ ಎರಡು ವರ್ಷದ ಹೆಣ್ಣು ಚಿರತೆ ತುಮಕೂರು ಮಾದರಿಯ ಬೋನಿನೊಳಗೆ ಕಟ್ಟಿಹಾಕಿದ್ದ ಮೇಕೆ ಕೂಗಿಗೆ ಬೇಟೆಯಾಡಲು ಬೋನ್ ಒಳಗೆ ಬಂದು ಸೆರೆ ಸಿಕ್ಕಿದೆ. ಸೆರೆ ಸಿಕ್ಕಿರುವ ಭಯದಲ್ಲಿ ಚಿರತೆ ಬೋನಿನಲ್ಲಿದ್ದ ಮೇಕೆ ಮೇಲೆ ದಾಳಿ ಮಾಡಿಲ್ಲ. ಅಲ್ಲದೆ ಬೋನಿನಿಂದ ತಪ್ಪಿಸಿಕೊಳ್ಳುವ ಪ್ರಯತ್ನದಿಂದ ಬೋನಿಗೆ ಗ್ರಿಲ್‌ಗೆ ಮುಖ ಬಡಿದುಕೊಂಡಿದ್ದರಿಂದ ಸಣ್ಣಪುಟ್ಟ ಗಾಯಗೊಂಡಿದೆ.

ಮೇ 10ರಂದು ಬೆಂಗಳೂರಿನ ಕಾಮಾಕ್ಷಿಪಾಳ್ಯದಿಂದ ಆಗಮಿಸಿದ್ದ ಮಹಿಳಾ ಭಕ್ತರಿದ್ದ ತಂಡ ಇಂಡಿಗನತ್ತ ಗ್ರಾಮದಿಂದ ನಾಗಮಲೆ ಹಾದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಏಕಾಏಕಿ ಚಿರತೆ ದಾಳಿ ಮಾಡಿ 10 ವರ್ಷದ ಬಾಲಕ ಹರ್ಷಿತ್‌ನನ್ನು ಅರಣ್ಯ ಪ್ರದೇಶಕ್ಕೆ ಎಳೆದು ಕೊಂಡು ಹೋಗಿತ್ತು. ಕೂಡಲೇ ಸ್ಥಳೀಯರು ಹಾಗೂ ಭಕ್ತರು ಅರಣ್ಯ ಸಿಬ್ಬಂದಿಯೊಂದಿಗೆ ■ 6ನೇ ಪುಟಕ್ಕೆ

ಡಿಜಿಟಲ್ ಅರೆಸ್ಟ್ ನೆಪದಲ್ಲಿ ವೃದ್ಧೆಯಿಂದ 24 ಕೋಟಿ ಸುಲಿಗೆ

■ ಚಿನ್ನ ಅಡವಿಟ್ಟು ಮತ್ತಷ್ಟು ಹಣ ವರ್ಗಾಯಿಸಲು ಮುಂದಾದಾಗ ಬ್ಯಾಂಕ್ ಅಧಿಕಾರಿಯಿಂದ ಪ್ರಕರಣ ಬಯಲು ■ ವಿವಿಧ ರಾಜ್ಯಗಳ ಖದೀಮರ ಬೆನ್ನತ್ತಿ ಐವರ ಹೆಡೆಮುರಿ ಕಟ್ಟಿದ ಪೊಲೀಸರು; ಸದ್ಯ 60 ಲಕ್ಷವಿದ್ದ ಖಾತೆ ಸೀಜ್



ಬೆಂಗಳೂರು: ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವೃದ್ಧೆಯೊಬ್ಬರನ್ನು ಬೆದರಿಸಿ ಬರೋಬ್ಬರಿ 24 ಕೋಟಿ ರೂ. ಸುಲಿಗೆ ಮಾಡಿದ್ದ ಅಂತರರಾಜ್ಯ ಖದೀಮರನ್ನು ಸಿಸಿಬಿ ಸೈಬರ್ ಕ್ರೈಮ್ ಪೊಲೀಸರು ಬಂಧಿಸಿದ್ದಾರೆ.

ವೃದ್ಧೆ ಮತ್ತಷ್ಟು ಹಣ ಕಳೆದುಕೊಳ್ಳುವುದನ್ನು ಸಮಯಪ್ರಜ್ಞೆಯಿಂದ ತಪ್ಪಿಸಿದ ಬ್ಯಾಂಕ್ ಮ್ಯಾನೇಜರ್ ಅವರಿಂದ ಈ ಭಾರೀ ವಂಚನೆ ಪ್ರಕರಣ ಬೆಳಕಿಗೆ ಬಂದಿದೆ.

ಶಿವಾಜಿನಗರದ ವೃದ್ಧೆಯೊಬ್ಬರು ಇತ್ತೀಚೆಗೆ ಆಸ್ತಿ ಮಾರಾಟದಿಂದ ಕೋಟ್ಯಂತರ ರೂ. ಹಣ ಹೊಂದಿದ್ದರು. ಸೈಬರ್ ವಂಚಕರು ವೃದ್ಧೆಯ ಬ್ಯಾಂಕ್ ವಹಿವಾಟಿನ ಸಂಪೂರ್ಣ ಮಾಹಿತಿ ಸಂಗ್ರಹಿಸಿ, ವಂಚನೆಗೆ ಜಾಲ ಬೀಸಿದ್ದರು. ವೃದ್ಧೆಗೆ ಕರೆಮಾಡಿ ಅಕ್ರಮ ಹಣ ವರ್ಗಾವಣೆ ಆರೋಪದಡಿ ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡಲಾಗಿದೆ ಎಂದು ಹೆದರಿಸಿದ್ದರು. ಇದರಿಂದ ಭಯಗೊಂಡ ವೃದ್ಧೆ, ಕಳೆದ ಜನವರಿಯಿಂದ ಮೇ ತಿಂಗಳವರೆಗೂ ಹಂತ ಹಂತವಾಗಿ ಒಟ್ಟು 24 ಕೋಟಿ ಹಣವನ್ನು ಖದೀಮರು ಸೂಚಿಸಿದ ಖಾತೆಗಳಿಗೆ ವರ್ಗಾವಣೆ ಮಾಡಿದ್ದಾರೆ. ■ 6ನೇ ಪುಟಕ್ಕೆ

ಶೀಘ್ರದಲ್ಲೇ ವಿಶ್ವಕ್ಕೆ 'ಒಳ್ಳೆಯ ಸುದ್ದಿ'

- ಮೂರು ತಿಂಗಳಿಂದ ಬಿಕ್ಕಟ್ಟು ಸೃಷ್ಟಿಸಿರುವ ಅಮೆರಿಕ–ಇರಾನ್ ಸಂಘರ್ಷ ಅಂತ್ಯ ಸಾಧ್ಯತೆ
- ಅಮೆರಿಕ ಅಧ್ಯಕ್ಷ ಟ್ರಂಪ್ ಪೋಸ್ಟ್ ಬೆನ್ನಲ್ಲೇ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಮಹತ್ವದ ಹೇಳಿಕೆ

ನವದೆಹಲಿ: ಅಮೆರಿಕ–ಇರಾನ್ ಯುದ್ಧ ಅಂತ್ಯಕ್ಕೆ ಶಾಂತಿ ಒಪ್ಪಂದ ಸಾಧ್ಯತೆ ಶೀಘ್ರದಲ್ಲೇ ಘೋಷಣೆಯಾಗ ಬಹುದು ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಅವರು ಹೇಳಿದ್ದು, ಮಧ್ಯಪ್ರಾಚ್ಯ ಸಂಘರ್ಷ ಅಂತ್ಯಗೊಳಿಸುವ ನಿಟ್ಟಿನಲ್ಲಿ ಮಹತ್ವದ ಬೆಳವಣಿಗೆಗಳು ನಡೆಯುತ್ತಿವೆ ಎಂದು ತಿಳಿಸಿದ್ದಾರೆ.



ಭಾರತದ ಮೊದಲ ಅಧಿಕೃತ ಭೇಟಿ ವೇಳೆ ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರುಬಿಯೋ, ಮುಂದಿನ ಕೆಲ ಗಂಟೆಗಳಲ್ಲಿ 'ಒಳ್ಳೆಯ ಸುದ್ದಿ' ಹೊರಬೀಳುವ ಸಾಧ್ಯತೆ ಇದೆ. ಈ ಒಪ್ಪಂದದಲ್ಲಿ ಪ್ರಮುಖವಾಗಿ ಹಾರ್ಮುಜ್ ಜಲಸಂಧಿಯನ್ನು ತೆರೆಯುವ ವಿಷಯ ಸೇರಿದ್ದು, ಇತ್ತೀಚಿನ ಸಂಘರ್ಷದಿಂದಾಗಿ ಉಂಟಾದ ಜಾಗತಿಕ ತೈಲ ಸಾಗಣೆ ಸಮಸ್ಯೆಗಳಿಗೆ ಪರಿಹಾರ ಸಿಗುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಮುಂದಿನ ಕೆಲವು ಗಂಟೆಗಳಲ್ಲಿ ಇಡೀ ■ 6ನೇ ಪುಟಕ್ಕೆ

ಅಮೆರಿಕ ಅಧ್ಯಕ್ಷ ಟ್ರಂಪ್ ಇರುವಾಗಲೇ ಶ್ವೇತಭವನದ ಮೇಲೆ ಗುಂಡಿನ ದಾಳಿ

ಭದ್ರತಾ ಪಡೆ ಪ್ರತಿದಾಳಿಗೆ ಶಂಕಿತ ಬಲಿ

ವಾಷಿಂಗ್ಟನ್: ಅಮೆರಿಕದ ಶ್ವೇತಭವನ ಸಂಕೀರ್ಣದ ಮೇಲೆ ಗುಂಡಿನ ದಾಳಿ ನಡೆದಿದ್ದು, ಗುಂಡಿನ ದಾಳಿ ನಡೆದಾಗ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶ್ವೇತಭವನದಲ್ಲೇ ಇದ್ದರು ಎನ್ನಲಾಗಿದೆ.



ಡೊನಾಲ್ಡ್ ಟ್ರಂಪ್

ಶ್ವೇತಭವನದ ಹೊರಗೆ ಶಂಕಿತ 36 ಸುತ್ತು ಗುಂಡು ಹಾರಿಸಿದ್ದು, ಅಮೆರಿಕ ಭದ್ರತಾ ಪಡೆ ಘಟನೆಯ ಬಗ್ಗೆ ತನಿಖೆ ನಡೆಸುತ್ತಿದೆ. ಅಮೆರಿಕದ ಸೀಕ್ರೆಟ್ ಸರ್ವಿಸ್ ನಿನ್ನೆ ಶನಿವಾರ ತಡರಾತ್ರಿ ಬಿಡುಗಡೆ ಮಾಡಿದ ಪ್ರಕಟಣೆಯ ಪ್ರಕಾರ, ಸಂಜೆ ಸುಮಾರು 6 ಗಂಟೆಯ ನಂತರ ವ್ಯಕ್ತಿಯೋರ್ವ ಭದ್ರತಾ ತಪಾಸಣಾ ಕೇಂದ್ರದತ್ತ ಬಂದು ತನ್ನ ಬ್ಯಾಗಿನಿಂದ ಗನ್ ತೆಗೆದು ಕರ್ತವ್ಯದಲ್ಲಿದ್ದ ಅಧಿಕಾರಿಗಳ ಮೇಲೆ ಗುಂಡಿನ ದಾಳಿ ಆರಂಭಿಸಿದ ಎನ್ನಲಾಗಿದೆ. ಭದ್ರತಾ ತಪಾಸಣಾ ಕೇಂದ್ರದ ಬಳಿ ಗುಂಡಿನ ದಾಳಿ ನಡೆಸಿದ ವ್ಯಕ್ತಿಯನ್ನು, ಪ್ರತಿಯಾಗಿ ಗುಂಡು ಹಾರಿಸಿದ ಅಧಿಕಾರಿಗಳು ಹೊಡೆದುರುಳಿಸಿದ್ದು, ಆತ ಮೃತಪಟ್ಟಿದ್ದಾನೆ ಎಂದು ಯುಎಸ್ ಸೀಕ್ರೆಟ್ ಸರ್ವಿಸ್ ತಿಳಿಸಿದೆ.

ಕಳೆದ ಒಂದು ತಿಂಗಳ ಅವಧಿಯಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುತ್ತಮುತ್ತ ನಡೆದ ಮೂರನೇ ಗುಂಡಿನ ದಾಳಿ ಘಟನೆ ಇದಾಗಿದೆ. ಕಾನೂನು ಜಾರಿಗೊಳಿಸುವ ಸಂಸ್ಥೆಯು ಎಕ್ಸ್ ಸೋಶಿಯಲ್ ಮೀಡಿಯಾದಲ್ಲಿ ಪ್ರಕಟಿಸಿದ ■ 6ನೇ ಪುಟಕ್ಕೆ

ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಗೋಡೆ ಕುಸಿದ ದುರಂತ ಮೈಸೂರಿನಲ್ಲೂ ಸಂಭವಿಸಬಹುದು ಎಚ್ಚರ

ಕುಸಿಯುವ ಭೀತಿಯಲ್ಲಿ ಮೈಸೂರಿನ ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡ

- ಬಿರುಕು ಬಿಟ್ಟಿರುವ ಭಾರೀ ಎತ್ತರದ ಗೋಡೆ
- ಅಪಾಯಕಾರಿ ಗೋಡೆ ಪಕ್ಕದಲ್ಲೆ ತರಕಾರಿ ಮಾರಾಟ
- ಅಧಿಕಾರಿಗಳಿಗೆ ಈ ಬಗ್ಗೆ ಮಾಹಿತಿ ಇದ್ದರೂ ಡೋಂಟ್ ಕೇರ್
- ಅವಘಡ ಸಂಭವಿಸಿದರೆ ಯಾರು ಹೊಣೆ?

ಮೈಸೂರು, ಮೇ 24(ಬಿಎಲ್‌ಯು)– ಸಿಲಿಕಾನ್ ಸಿಟಿ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಬಳಿಯ ಕಾಂಪೌಂಡ್ ಗೋಡೆ ಕುಸಿದು ಎಂಟು ಮಂದಿ ಅಮಾಯಕರು ದುರ್ಮರಣಕ್ಕೀಡಾದ ಘಟನೆಯಿಂದಲೂ ಅಧಿಕಾರಿಗಳು ಪಾಠ ಕಲಿತಂತಿಲ್ಲ ಎಂಬುದಕ್ಕೆ ಮೈಸೂರಿನ ಸರ್ಕಾರಿ ಕಟ್ಟಡವೊಂದು ನಿದರ್ಶನವಾಗಿದೆ.

ಮೈಸೂರಿನ ಬೆಂಕಿ ನವಾಬ ರಸ್ತೆಯ ಜಿಲ್ಲಾ ಕೈಗಾರಿಕಾ ಕೇಂದ್ರದ ಭಾರೀ ಎತ್ತರದ ಗೋಡೆ ಬಿರುಕು ಬಿಟ್ಟು ಧರಶಾಯಿ ಸ್ಥಿತಿಯಲ್ಲಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡಿಲ್ಲ. ನವೀಕರಣಕ್ಕೆ ಪ್ರಯತ್ನವನ್ನೂ ಮಾಡಿದಂತಿಲ್ಲ.

ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಕಚೇರಿಯ ಕಟ್ಟಡ ಮಹಾರಾಜರ ಕಾಲದಲ್ಲಿ ನಿರ್ಮಿಸಲಾಗಿದ್ದು, ಬೆಂಕಿ ನವಾಬ ರಸ್ತೆಗೆ ಹೊಂದಿಕೊಂಡಂತೆ ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡವನ್ನು ನಿರ್ಮಿಸಲಾಗಿದೆ. ಕಾಂಪೌಂಡ್ ಬದಲು ಹೆಂಚಿನ ಛಾವಣಿಯುಳ್ಳ ಕಟ್ಟಡವನ್ನೇ ನಿರ್ಮಿಸಲಾಗಿದೆ.

> ಗೋಡೆ ಬಿರುಕು ಬಿಟ್ಟಿರುವ ಬಗ್ಗೆ ಪರಿಶೀಲನೆ ನಡೆಸುವಂತೆ ಉಪ ನಿರ್ದೇಶಕರಿಗೆ ಸೂಚನೆ ನೀಡುತ್ತೇನೆ. ಅಲ್ಲದೆ ಗೋಡೆ ಬಿರುಕುಗೊಂಡಿರುವ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇನೆ.
> -ದಿನೇಶ್, ಜಂಟಿ ನಿರ್ದೇಶಕ, ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು.

ಅಪಾಯದಲ್ಲಿ ವ್ಯಾಪಾರಿಗಳು: ಈ ಕಟ್ಟಡ ಸುಮಾರು 25 ಅಡಿ ಎತ್ತರ ಹಾಗೂ ಸುಮಾರು 500 ಅಡಿಗೂ ಹೆಚ್ಚು ಉದ್ದವಿದೆ. ಈ ಕಟ್ಟಡದ ಪಕ್ಕದಲ್ಲಿ ಹಲವು ವರ್ಷಗಳ ಹಿಂದೆ ತಲೆ ಎತ್ತಿರುವ ಸಣ್ಣ ಮಾರುಕಟ್ಟೆಯಲ್ಲಿ ಅನೇಕ ವ್ಯಾಪಾರಿಗಳು ಪ್ರತಿ ದಿನ ತರಕಾರಿ ಮಾರಾಟ ಮಾಡುತ್ತಾರೆ. ಸೊಪ್ಪು, ತರಕಾರಿ, ಈರುಳ್ಳಿ, ತೆಂಗಿನಕಾಯಿ ಸೇರಿದಂತೆ ಇತರೆ ವಸ್ತುಗಳನ್ನು ಮಾರಾಟ ಮಾಡಿ ಜೀವನ ನಡೆಸುತ್ತಿದ್ದಾರೆ. ಆದರೆ ಯಾವ ಕ್ಷಣದಲ್ಲಿ ಗೋಡೆ ಕುಸಿದು ಅನಾಹುತ ಸಂಭವಿಸಬಹುದೋ ಎಂಬ ಆತಂಕದಲ್ಲೇ ವ್ಯಾಪಾರ ನಡೆಸುತ್ತಿದ್ದಾರೆ. ಭಾರೀ ಮಳೆ, ಗಾಳಿ ಬಂದಾಗ ಅವರ ದುಗುಡ ದುಪ್ಪಟ್ಟಾಗುತ್ತದೆ. ಹಲವು ವರ್ಷಗಳಿಂದ ವ್ಯಾಪಾರ ನಡೆಸಿಕೊಂಡು ಬಂದಿರುವ ಜಾಗ ಖಾಲಿ ಮಾಡಿದರೆ, ಮತ್ತೆ ಸ್ಥಳಾವಕಾಶ ಸಿಗುವುದಿಲ್ಲ ಎಂಬ ಕಾರಣಕ್ಕೆ ಅಪಾಯಕಾರಿ ಕಟ್ಟಡದ ಮಗ್ಗುಲಲ್ಲೇ ವ್ಯಾಪಾರ ಮಾಡುತ್ತಿದ್ದಾರೆ.





ಮೈಸೂರಿನ ಬೆಂಕಿ ನವಾಬ ರಸ್ತೆಯ ಜಿಲ್ಲಾ ಕೈಗಾರಿಕಾ ಕೇಂದ್ರದ ಗೋಡೆ ಬಿರುಕು ಬಿಟ್ಟಿರುವುದು(ಎಡಚಿತ್ರ) ಹಾಗೂ ಶಿಥಿಲಾವಸ್ಥೆಯಲ್ಲಿರುವ ಕಟ್ಟಡದ ಮಗ್ಗುಲಲ್ಲೇ ತರಕಾರಿ ವ್ಯಾಪಾರ ಮಾಡುತ್ತಿರುವುದನ್ನು(ಬಲಚಿತ್ರ) ಕಾಣಬಹುದು.

ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ: ಹೆಂಚಿನ ಛಾವಣಿಯಿಂದ ಗೋಡೆಯ ಮೇಲೆ ಮಳೆ ನೀರು ಹರಿದು, ಪಾಚಿ ಹಿಡಿದಿದೆ. ಅಲ್ಲದೆ ಒಂದೆರಡು ಕಡೆ ಗೋಡೆ ಬಿರುಕು ಬಿಟ್ಟಿದ್ದು, ಯಾವ ಕ್ಷಣದಲ್ಲಾದರೂ ಕುಸಿಯುವ ದುಃಸ್ಥಿತಿಯಲ್ಲಿದೆ. ಜಿಲ್ಲಾ ಕೈಗಾರಿಕಾ ಕೇಂದ್ರದ ಅಧಿಕಾರಿಗಳು ಆಗಾಗ್ಗೆ ದುರಸ್ತಿ ಮಾಡಿಸಿ ಸೂಕ್ತ ನಿರ್ವಹಣೆ ಮಾಡಿದ್ದರೆ ಪ್ರಾಯಶಃ ಈ ದುಸ್ಥಿತಿ ಬರುತ್ತಿರಲಿಲ್ಲ. ಆದರೆ, ಅಧಿಕಾರಿಗಳು ಮಾತ್ರ ಈ ತಮ್ಮ ಕಟ್ಟಡದ ಸ್ಥಿತಿಗತಿ ಬಗ್ಗೆ ತಲೆಕೆಡಿಸಿ ಕೊಂಡಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದಾಗಿ ಇಂತಹ ಅಪಾಯಕಾರಿ ಸ್ಥಿತಿ ನಿರ್ಮಾಣವಾಗಿದೆ. ಗೋಡೆ ಬಿರುಕು ಬಿಟ್ಟಿರುವ ಬಗ್ಗೆ ಜಿಲ್ಲಾ ಕೈಗಾರಿಕಾ ಕೇಂದ್ರದ ಅಧಿಕಾರಿಗಳಿಗೆ ಈಗಾಗಲೇ ತಿಳಿದಿದ್ದರೂ ಕ್ರಮ ವಹಿಸದೆ ನಿರ್ಲಕ್ಷಿಸಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

ಈಗಲಾದರೂ ಕ್ರಮ ವಹಿಸಿ: ಹಲವೆಡೆ ಬಿರುಗಾಳಿ ಸಹಿತ ಭಾರೀ ಮಳೆ ಸುರಿಯುತ್ತಿದೆ. ಮೈಸೂರಿನ ಕೆಲವೆಡೆ ಜೋರು ಮಳೆ ಸುರಿದಿದೆ. ಗಾಳಿ–ಮಳೆಗೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಕಾಂಪೌಂಡ್‌ನಂತೆ ಜಿಲ್ಲಾ ಕೈಗಾರಿಕಾ ಕೇಂದ್ರದ ಗೋಡೆಯೂ ಕುಸಿದರೆ ಅಪಾರ ಸಾವು–ನೋವು ಸಂಭವಿಸಬಹುದು. ಬೌರಿಂಗ್ ಆಸ್ಪತ್ರೆ ದುರಂತ ದಲ್ಲಿ ಎಂಟು ಮಂದಿ ಸಾವನ್ನಪ್ಪಿದ ಪ್ರಕರಣದಲ್ಲಿ ಎಇಇ ಸೇರಿದಂತೆ ಇಬ್ಬರು ಅಧಿಕಾರಿಗಳನ್ನು ಸರ್ಕಾರ ಅಮಾನತು ಮಾಡಿ, ಕುಟುಂಬಸ್ಥರಿಗೆ ಪರಿಹಾರ ಕೂಡ ನೀಡಿದೆ. ಆದರೆ ಹೋದ ಪ್ರಾಣ ಮತ್ತೆ ಬರುವುದಿಲ್ಲ. ಈಗಲಾದರೂ ಜಿಲ್ಲಾ ಕೈಗಾರಿಕಾ ಕೇಂದ್ರದ ಅಧಿಕಾರಿಗಳು ಎಚ್ಚೆತ್ತು ಕ್ರಮ ಕೈಗೊಳ್ಳಬೇಕಿದೆ.

> ಕಟ್ಟಡದ ಕೆಲವು ಕಡೆ ಬಿರುಕು ಬಿಟ್ಟಿದೆ. ಈ ಬಗ್ಗೆ ಪರಿಶೀಲನೆ ನಡೆಸಿ ನವೀಕರಣ ಮಾಡುವಂತೆ ಲೋಕೋಪಯೋಗಿ ಇಲಾಖೆಯವರಿಗೆ ತಿಳಿಸಿದ್ದೆವು. ಕಟ್ಟಡದ ನವೀಕರಣಕ್ಕಾಗಿ 48 ಲಕ್ಷ ವೆಚ್ಚವಾಗುತ್ತದೆ ಎಂದು ವರದಿ ನೀಡಿದ್ದಾರೆ. ಇದಕ್ಕೆ ಹಣ ಬಿಡುಗಡೆ ಮಾಡುವಂತೆ ಕೂಡಲೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಮನವಿ ಮಾಡುತ್ತೇನೆ.
> -ಸೈಯದ್ ನಾಜಿರ್ ಅಹಮ್ಮದ್, ಉಪ ನಿರ್ದೇಶಕ, ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು.

ಕ್ರೈಂ ಬಾಕ್ಸ್

ಹಿರಿಯ ನಾಗರಿಕರ ಮನೆ ದೋಚಿದ ಸಹಾಯಕಿ

5 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ನಗದು ಕಳವು



ಮೈಸೂರು, ಮೇ 24(ಜಿಎ)–ಸಹಾಯಕಿಯೊಬ್ಬಳು ಹಿರಿಯ ನಾಗರಿಕರ ಮನೆಯಲ್ಲಿ 5 ಲಕ್ಷ ರೂ ಮೌಲ್ಯದ ಚಿನ್ನಾಭರಣ ಹಾಗೂ ನಗದು ದೋಚಿರುವ ಘಟನೆ ವರದಿಯಾಗಿದ್ದು, ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಲ್ಯಾಣಗಿರಿಯ ನಿವಾಸಿ ಫಾತಿಮಾ ಕಳ್ಳತನ ಮಾಡಿ ರುವ ಸಹಾಯಕಿ. ಆಕೆ ವಿರುದ್ಧ ಎಫ್ಐಆರ್ ದಾಖಲಾಗಿದೆ.

80 ವರ್ಷದ ಸೈಯದ್ ರಾಹತ್ ಜಾನ್ ಅವರು ನಿವೃತ್ತ ಶಿಕ್ಷಕಿಯಾಗಿದ್ದು, ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದು, ಹಿನ್ನೆಲೆಯಲ್ಲಿ ತಮ್ಮ ಯೋಗಕ್ಷೇಮ ನೋಡಿಕೊಳ್ಳುವ ಜೊತೆಗೆ ಮನೆ ಕೆಲಸ ಮಾಡಲು ಸಹಾಯಕಿಗಾಗಿ ಫಾತಿಮಾ ಎಂಬಾಕೆಯನ್ನು ಕರಾರು ಒಪ್ಪಂದ ಮಾಡಿಕೊಂಡು 5 ಸಾವಿರ ರೂ. ಹಣವನ್ನು ಮುಂಗಡವಾಗಿ ನೀಡಿದ್ದು, ಮಾಸಿಕ 6 ಸಾವಿರ ರೂ. ನಿಗದಿ ಮಾಡಲಾಗಿತ್ತು ಎನ್ನಲಾಗಿದೆ.

2026ರ ಮೇ 5ರಂದು ಸೈಯದ್ ರಾಹತ್ ಜಾನ್ ಸಹಾಯಕಿ ಫಾತಿಮಾ ಜೊತೆ ಬ್ಯಾಂಕಿಗೆ ಹೋಗಿ ಲಾಕರ್‌ನಲ್ಲಿದ್ದ 5 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 25 ಸಾವಿರ ರೂ. ನಗದು ಡ್ರಾ ಮಾಡಿಕೊಂಡು ಬಂದು ಮನೆಯ ಬೀರುವಿನಲ್ಲಿಟ್ಟಿದ್ದರು. ಅದರ ಬೀಗವನ್ನು ತಮ್ಮ ತಲೆ ದಿಂಬಿನ ಕೆಳಗೆ ಇಡುತ್ತಿದ್ದರು. ಇದರ ಬಗ್ಗೆ ತಿಳಿದಿದ್ದ ಫಾತಿಮಾ ಮೇ 2ರಿಂದ 9ರವರೆಗೆ ಎರಡ್ಮೂರು ಬಾರಿ ಬೀರು ಬೀಗ ತೆಗೆದಿದ್ದು, ಅದನ್ನು ಗಮನಿಸಿ ಸೈಯದ್ ರಾಹತ್ ಜಾನ್ ಆಕೆಯನ್ನು ಪ್ರಶ್ನಿಸಿದ್ದಾಗ ಕ್ಲೀನ್ ಮಾಡುತ್ತಿದ್ದೆ ಎಂಬ ಸಬೂಬು ನೀಡಿದ್ದಾಳೆ. ನಂತರ ಬೀರುವಿನಲ್ಲಿ ಚಿನ್ನಾಭರಣ, ನಗದು ಕಳ್ಳತನವಾಗಿರುವುದು ಅರಿವಿಗೆ ಬಂದು ತಕ್ಷಣ ಲಷ್ಕರ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಲಷ್ಕರ್ ಪೊಲೀಸ್ ಠಾಣೆ ಪೊಲೀಸರು ಮುಂದಿನ ತನಿಖೆ ನಡೆಸುತ್ತಿದ್ದು, ನಾಪತ್ತೆಯಾಗಿರುವ ಸಹಾಯಕಿ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಇನ್ಸ್ಟಾಗ್ರಾಂ ಹೂಡಿಕೆ ಜಾಹೀರಾತು ನೋಡಿ ಲಕ್ಷಾಂತರ ರೂ. ಹಣ ಕಳೆದುಕೊಂಡ ವ್ಯಕ್ತಿ



ಮೈಸೂರು, ಮೇ 24(ಜಿಎ)–ಇನ್ಸ್ಟಾಗ್ರಾಂನ ಹೂಡಿಕೆ ಜಾಹೀರಾತಿನಿಂದ ವ್ಯಕ್ತಿಯೋರ್ವರು 63.56 ಲಕ್ಷ ರೂ ಕಳೆದುಕೊಂಡಿರುವ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಮೈಸೂರಿನ ಗೋಕುಲಂನ 53 ವರ್ಷದ ನಿವಾಸಿಯೋರ್ವರು ಫೆ.3ರಂದು ಇನ್ಸ್ಟಾಗ್ರಾಂನಲ್ಲಿ ಹೂಡಿಕೆ ಜಾಹೀರಾತು ನೋಡಿದ ಬಳಿಕ ಅವರಿಗೆ ಅನಾಮಧೆಯ ನಂಬರ್‌ನಿಂದ ಕರೆ ಮಾಡಿ ತಾನು ಅನ್ವಿಕ ಮೇಹೆರ ಕೋಟಾಕ್ ಸೆಕ್ಯೂರಿಟಿ ಕಂಪನಿಯಿಂದ ಎಂದು ಪರಿಚಯ ಮಾಡಿಕೊಂಡು ನಂತರ ಮಾ.6ರಂದು ಒಂದು ಲಿಂಕ್ ಕಳುಹಿಸಿದ ಆಕೆ ನೋಂದಣಿ ಪೂರ್ಣ ಮಾಡಿಸಿ, ಟ್ರೇಡಿಂಗ್ ಖಾತೆ ತೆರೆಸಿದ್ದಾಳೆ. ಮಾ.10ರಂದು 1 ಲಕ್ಷ ರೂ ಹಣವನ್ನು ಅನಾಮಾಧೇಯ ಖಾತೆಗೆ ವರ್ಗಾವಣೆ ಮಾಡಿದ್ದಾರೆ. ನಂತರ ಒಂದು ವಾಟ್ಸಾಪ್ ನಂಬರ್ ನೀಡಿ ಇದು ಕಸ್ಟಮರ್ ಕೇರ್ ನಂಬರ್ ಅವರಿಗೆ ಕರೆ ಮಾಡಿ ನಿಮಗೆ ಹೂಡಿಕೆ ಬಗ್ಗೆ ಮಾಹಿತಿ ನೀಡುತ್ತಾರೆ ಎಂದು ನಂಬಿಸಿದ್ದಾರೆ.

ಅವರ ವಂಚನೆ ಮಾತುಗಳನ್ನು ನಂಬಿದ ವ್ಯಕ್ತಿಯೂ ಮಾ.11ರಿಂದ ಮೇ 8ರವರೆಗೆ ಬರೋಬ್ಬರಿ 62,56,938 ರೂ. ಹಣವನ್ನು ಹೂಡಿಕೆ ಮಾಡಿದ್ದಾರೆ. ನಂತರ ಮತ್ತೊಂದು ನಂಬರ್‌ನಿಂದ ಕರೆ ಮಾಡಿ ನಾವು ಕಸ್ಟಮರ್ ಕೇರ್‌ನಿಂದ ನಿಮ್ಮ ಲಾಭಾಂಶದ ಹಣ ಪಡೆಯಲು ಶೇ.7.7ರಷ್ಟು ಟ್ಯಾಕ್ಸ್ ಪಾವತಿಸಿ ಎಂದು ಹೇಳುತ್ತಿದ್ದಂತೆ ವ್ಯಕ್ತಿಗೆ ತಾವು ಮೋಸ ಹೋಗಿರುವುದು ಅರಿವಿಗೆ ಬಂದು 1930ಗೆ ಕರೆ ಮಾಡಿ ಸೆನ್ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ರೈಲಿಗೆ ಸಿಲುಕಿ ಆಂಧ್ರದ ವ್ಯಕ್ತಿ ಆತ್ಮಹತ್ಯೆ

ಮೈಸೂರು,ಮೇ 24(ಎಂಕೆ)–ಆಂಧ್ರ ಮೂಲದ ವ್ಯಕ್ತಿಯೋರ್ವ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಮೇಟಗಳ್ಳಿ ಸಮೀಪ ನಡೆದಿದೆ. ಆಂಧ್ರಪ್ರದೇಶದ ಅನಂತಪುರ ಮೂಲದ ಸುಮಾರು 45–50 ವರ್ಷ ವಯೋಮಾನದ ಸೋಮಶೇಖರ್ ಎಂಬುವರು ಮೇಟಗಳ್ಳಿ ಸಮೀಪದ ರೈಲ್ವೆ ಟ್ರ್ಯಾಕ್‌ನಲ್ಲಿ ಭಾನುವಾರ ಮುಂಜಾನೆ 6 ಗಂಟೆಗೆ ಸುಮಾರಿಗೆ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತದೇಹವನ್ನು ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದ್ದು, ವ್ಯಕ್ತಿಯ ಸಂಬಂಧಿಕರಿಗೆ ಮಾಹಿತಿ ನೀಡಿಲಾಗಿದೆ ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾಜಿ ಕಾರ್ಪೋರೇಟರ್ ಸೋಮಸುಂದರ್‌ರನ್ನು ವಿಧಾನಪರಿಷತ್ ಸದಸ್ಯರಾಗಿ ನೇಮಕ ಮಾಡಿ

ದಲಿತ ಸಮುದಾಯಗಳ ಮಹಾ ಒಕ್ಕೂಟ ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ದಲಿತ ಸಮುದಾಯಗಳ ಮಹಾ ಒಕ್ಕೂಟದ ಸಂಚಾಲಕ ರೇವಣ್ಣ ಮಾತನಾಡಿದರು.

ಮೈಸೂರು, ಮೇ 24(ಜಿಎ)–ಪಾಲಿಕೆ ಮಾಜಿ ಸದಸ್ಯ ಆರ್.ಸೋಮಸುಂದರ್ ಅವರನ್ನು ವಿಧಾನಪರಿಷತ್ ಸದಸ್ಯರಾಗಿ ನೇಮಕ ಮಾಡುವಂತೆ ದಲಿತ ಸಮುದಾಯಗಳ ಮಹಾ ಒಕ್ಕೂಟ ಒತ್ತಾಯಿಸಿದೆ.

ಆರ್.ಸೋಮಸುಂದರ್ ಕಾಂಗ್ರೆಸ್ ಪರಿಶಿಷ್ಟ ಜಾತಿ, ಪಂಗಡ ಘಟಕದ ಅಧ್ಯಕ್ಷರಾಗಿ ಬಡವರು, ಶೋಷಿತರ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಪಕ್ಷಕ್ಕೂ ದುಡಿಯುತ್ತಿದ್ದಾರೆ. ಹೀಗಾಗಿ ಇವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಸಂಚಾಲಕ ರೇವಣ್ಣ ಆಗ್ರಹಿಸಿದರು.

ಕಳೆದ 30 ವರ್ಷಗಳಿಂದ ಸೋಮಸುಂದರ್ ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ, ಪಂಗಡದ ಘಟಕದ ಅಧ್ಯಕ್ಷರಾಗಿ ಬಡವರು, ದಲಿತರು ಹಾಗೂ ಶೋಷಿತರ ಪರವಾಗಿ ಸಾಮಾಜಿಕ ಹೋರಾಟ ಮಾಡಿದ್ದು, ಅವರು ಮೈಸೂರು ಪಾಲಿಕೆಯಲ್ಲಿ ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ, ಎನ್‌ಎಸ್‌ಯುಐ ಪ್ರಧಾನ ಕಾರ್ಯದರ್ಶಿಯಾಗಿ, ಯುವ ಕಾಂಗ್ರೆಸ್ ಉಪಾಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ. ಇದರೊಡನೆ ಮೈಸೂರು ಚಾಮರಾಜನಗರ ಅಂಬೇಡ್ಕರ್ ದಲಿತ ಸೇನಾ ಅಧ್ಯಕ್ಷರಾಗಿಯೂ ಸಮುದಾಯದ ಏಳಿಗೆಗಾಗಿ ದುಡಿದಿದ್ದಾರೆ ಎಂದರು.

ಭೋವಿ ಸಮುದಾಯದ ಎಲ್ಲಾ ಮುಖಂಡರೊಡನೆ ಉತ್ತಮ ಒಡನಾಟ ಹೊಂದಿದ್ದು, ಪಕ್ಷದ ಸಂಘಟನೆಗೆ ಇನ್ನಷ್ಟು ಅನುಕೂಲವಾಗುವ ನಿಟ್ಟಿನಲ್ಲಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ವರಿಷ್ಠರು ಸೋಮಶೇಖರ್ ಸೇವೆಯನ್ನು ಪರಿಗಣಿಸಿ, ವಿಧಾನಪರಿಷತ್‌ಗೆ ನೇಮಕ ಮಾಡಬೇಕೆಂದು ಕೋರಿದರು. ಗೋಷ್ಠಿಯಲ್ಲಿ ಟಿ.ರಾಮು, ರಾಮಯ್ಯ, ಕನಕಮೂರ್ತಿ, ಲಕ್ಷ್ಮಿ, ಶೈಲಾ ಇದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 24–ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀಕೃಷ್ಣ ಟ್ರಸ್ಟ್, ಶ್ರೀಕೃಷ್ಣಧಾಮ ವತಿಯಿಂದ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.95ಕ್ಕಿಂತ ಹೆಚ್ಚು ಅಂಕಗಳಿಸಿದ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಶ್ರೀಕೃಷ್ಣಧಾಮದಲ್ಲಿ ವಿತರಿಸಲಾಗುತ್ತದೆ. ಅರ್ಜಿ ಸಲ್ಲಿಸಲು ಮೇ 30 ಕಡೇ ದಿನ. ಹೆಚ್ಚಿನ ಮಾಹಿತಿಗೆ ಮೊ: ಶ್ರೀವತ್ಸರಾವ್ 9481322340, ಮಂಗಳಾ 8088755735 ಸಂಪರ್ಕಿಸಬಹುದು.

ಪಿ.ಡೊರೊಥಿಗೆ ಪಿಹೆಚ್.ಡಿ



ಮೈಸೂರು, ಮೇ 24–ಡಾ.ಎಂ.ಕೆ.ಮಹೇಶ್ ಅವರ ಮಾರ್ಗದರ್ಶನದಲ್ಲಿ ಡೊರೊಥಿ.ಪಿ.ಅವರು ಸಸ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

'ಸ್ವಾತಿಮುತ್ತು' ಕಥಾ ಸಂಕಲನ ಬಿಡುಗಡೆ



ಹಿರಿಯ ಲೇಖಕಿ ಪ್ರಭಾಶಾಸ್ತ್ರಿ ಜೋಶ್ಯುಲ ಅವರ ಅನುವಾದಿತ ಕೃತಿ 'ಸ್ವಾತಿಮುತ್ತು' ಕಥಾ ಸಂಕಲನವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಬಿಡುಗಡೆ ಮಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಸಾಹಿತ್ಯ ದಾಸೋಹದ ಸಂಸ್ಥಾಪಕ ಎಂ.ಆರ್. ಆನಂದ್, ಲೇಖಕಿ ಪ್ರಭಾಶಾಸ್ತ್ರಿ ಜೋಶ್ಯುಲ, ಪದ್ಮಾ ಆನಂದ್, ರಂಗನಾಥ್ ಉಪಸ್ಥಿತರಿದ್ದರು.

ಮೈಸೂರು,ಮೇ 24(ಎಂಕೆ)–ಹಿರಿಯ ಲೇಖಕಿ ಪ್ರಭಾಶಾಸ್ತ್ರಿ ಜೋಶ್ಯುಲ ಅವರ ಅನುವಾದಿತ ಕೃತಿ 'ಸ್ವಾತಿಮುತ್ತು' ಕಥಾ ಸಂಕಲನವನ್ನು ಬಿಡುಗಡೆ ಮಾಡಲಾಯಿತು.

ಮೈಸೂರಿನ ಕುವೆಂಪುನಗರದಲ್ಲಿರುವ ಶಾರದಾ ಕಲಾ ಕೇಂದ್ರದಲ್ಲಿ ಮೈಸೂರು ಸಾಹಿತ್ಯ ದಾಸೋಹ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕಥಾ ಸಂಕಲನ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಸಾಹಿತ್ಯಕ್ಕೆ ಯಾವುದೇ ಗಡಿರೇಖೆಗಳಿಲ್ಲ. ಇದರಿಂದಾಗಿಯೇ ಸಾಹಿತ್ಯ ಕೃತಿಗಳು ಆಯಾ ಭಾಷೆ ಗಡಿ ದಾಟಿ ಇತರ ಭಾಷಿಕರನ್ನು ತಲುಪುತ್ತಿವೆ. ಉತ್ತಮ ಕೃತಿಗಳು ಎಲ್ಲಾ ಭಾಷೆಯ ಓದುಗರನ್ನು ಸೆಳೆಯಲಿವೆ ಎಂಬುದಕ್ಕೆ ಈ ಕೃತಿಯೂ ಸಾಕ್ಷಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಕಥಾ ಸಂಕಲನದ ಮೂಲ ತೆಲುಗಿನ ಲೇಖಕರಾದ ಸಿ.ಎನ್.ಚಂದ್ರಶೇಖರ್ ಅವರು, ಪ್ರತಿ ಕಥೆಯ ಅಂತ್ಯದಲ್ಲೂ ಓದುಗರ ಕಲ್ಪನೆಗೆ ಮೀರಿ ಸಿನಿಮೀಯ ಮಾದರಿಯಲ್ಲಿ ತಿರುವು ನೀಡಿದ್ದಾರೆ. ಅದೇ ರೀತಿ ಚೇತೋಹಾರಿ ಜೀವನೋತ್ಸವ ಇರುವ ಪ್ರಭಾಶಾಸ್ತ್ರಿ ಜೋಶ್ಯುಲ ಅವರು, ಕಥೆಗೆ ಜೀವ ಕೊಡುವ ಕೆಲಸ ಮಾಡಿದ್ದಾರೆ. ಕಥೆಗಳನ್ನು ಓದಿದರೆ ಭಾಷಾಂತರ ಎನಿಸಲ್ಲ ಎಂದರು.

ಈ ಸಂಕಲನದಲ್ಲಿ ಕೆಲವೊಂದು ಪತ್ತೆದಾರಿ ಕಥೆಗಳೂ ಇವೆ. ಕಥೆಗಾರರ ವಸ್ತು ಆಯ್ಕೆಯಲ್ಲಿ ವಿಭಿನ್ನತೆ ಇದೆ. ವಿಶಿಷ್ಟ ಶೈಲಿ ಮತ್ತು ತಂತ್ರಗಾರಿಕೆಯಿಂದ ಕಥೆಗಳನ್ನು ಕಟ್ಟಿಕೊಟ್ಟಿದ್ದಾರೆ ಎಂದು ಅವರು ಶ್ಲಾಘಿಸಿದರು.

ಹೊಯ್ಸಳ ಕನ್ನಡ ಸಂಘದ ಕಾರ್ಯದರ್ಶಿ ರಂಗನಾಥ್ ಮೈಸೂರು ಕೃತಿ ಕುರಿತು ಮಾತನಾಡಿ, ಈ ಕಥಾ ಸಂಕಲನವನ್ನು ಓದಿದರೆ ಅನುವಾದ ಎನಿಸುವುದಿಲ್ಲ. ಆ ರೀತಿ ಪ್ರಭಾಶಾಸ್ತ್ರಿ ಅವರು ಕನ್ನಡ ನೆಲದ ಮಣ್ಣಿಗೆ ತಕ್ಕಂತೆ ಅನುವಾದಿಸಿದ್ದಾರೆ. ಇಲ್ಲಿ ಸರಳ, ಸುಂದರ ಕಥೆಗಳಿವೆ. ಕನ್ನಡ ಮತ್ತು ತೆಲುಗು ಸೋದರ ಭಾಷೆಗಳಿದ್ದಂತೆ. ಈ ರೀತಿಯ ಅನುವಾದದಿಂದ ಎರಡು ಭಾಷೆಗಳ ಸಂಸ್ಕೃತಿ ಪರಿಚಯವಾಗುತ್ತದೆ. ಭಾಷಾ ಬಾಂಧವ್ಯ ಬೆಳೆಯುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಸಾಹಿತ್ಯ ದಾಸೋಹ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಮೈಸೂರು ಸಾಹಿತ್ಯ ದಾಸೋಹದ ಸಂಸ್ಥಾಪಕ ಎಂ.ಆರ್. ಆನಂದ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಆರ್.ಎ.ಕುಮಾರ್, ಪ್ರೊ.ಎಂ.ವಿ.ಸುಧಾ, ಕೆರೋಡಿ ಲೋಲಾಕ್ಷಿ, ರಮೇಶ್, ನಾರಾಯಣರಾವ್, ಸಿ.ಎಸ್.ರಾಘವೇಂದ್ರ, ಕಾಳಿಹುಂಡಿ ಶಿವಕುಮಾರ್, ಪರಮೇಶ್ ಕೆ.ಉತ್ತನಹಳ್ಳಿ, ರಾಧಿಕಾ ಚಂದ್ರಶೇಖರ್, ಅಣ್ಣಾಮಲೈ, ಯಾಚೇನಹಳ್ಳಿ ನನ್ನಪ್ಪ ಸಾಂಸ್ಕೃತಿಕ ಕಲಾ ತಂಡದ ಸಂಸ್ಥಾಪಕ ವೈ.ಜಿ.ಮಹದೇವ್, ಹಿಮಬಿಂದು, ಪದ್ಮಾ ಆನಂದ್ ಮತ್ತಿತರರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್, ಹಂಪಿ ಕನ್ನಡ ವಿವಿ ವತಿಯಿಂದ ಪ್ರಸಕ್ತ ಸಾಲಿನ ಚಿತ್ರಕಲೆಯಲ್ಲಿ ದೃಶ್ಯಕಲಾಮೂಲ ಮತ್ತು ಬಿವಿಎ ಪದವಿ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಪೇಟಿಂಗ್‌ನಲ್ಲಿ ಶಿಕ್ಷಣ ಪಡೆಯಲು ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಇರುತ್ತದೆ. ಹೆಚ್ಚಿನ ಮಾಹಿತಿಗೆ ಪ್ರಾಚಾರ್ಯರು ಮೊ: 9844775238, 9742918181 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಪಿಜಿ ಸಿಇಟಿ ಕ್ರ್ಯಾಶ್ ಕೋರ್ಸ್

ಮೈಸೂರು: ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯಲ್ಲಿರುವ ಮೈಸೂರು ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಿಂದ ಎಂಬಿಎ ಓದುತ್ತಿರುವ ವಿದ್ಯಾರ್ಥಿಗಳಿಗೆ 2 ದಿನಗಳ ಪಿಜಿ ಸಿಇಟಿ ಅಥವಾ ಕೆ–ಮ್ಯಾಟ್ ಕ್ರ್ಯಾಶ್ ಕೋರ್ಸ್ ಹಾಗೂ ಮಾದರಿ ಪರೀಕ್ಷೆಯನ್ನು ಜೂನ್ 2 ಮತ್ತು 3ರಂದು ಬೆಳಗ್ಗೆ 9ರಿಂದ ಸಂಜೆ 4ವರೆಗೆ ಸಂಸ್ಥೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮಾಹಿತಿ, ನೋಂದಣಿಗಾಗಿ ಮೊ: 8310241916, 9008634963.

ಸುಲ್ತಾನ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ವಜ್ರಾಭರಣ ಪ್ರದರ್ಶನ



ಮೈಸೂರಿನ ಸುಲ್ತಾನ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂನಲ್ಲಿ ದಕ್ಷಿಣ ಭಾರತದ ವಜ್ರಾಭರಣ ಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಈ ವೇಳೆ ಮಾಲೀಕರಾದ ಮೇಘನಾ.ಪಿ, ದೆಹಲಿ ಪಬ್ಲಿಕ್ ಸ್ಕೂಲ್ ಆಡಳಿತಾಧಿಕಾರಿ ಕಲೀಮುಲ್ಲಾ, ಉಮ್ಮಿಯ್ ಸೀಮಾ, ಉದ್ಯಮಿ ಕುಶಿ ವಿನು, ಡಾ.ದಿವ್ಯಾ ಮಹೇಶ್, ಶಹಜಿನ್ ಅಬ್ದುಲ್ ಶಾಕುರ್, ಸಲ್ಮಾ ಕೌಸರ್ ಉಪಸ್ಥಿತರಿದ್ದರು.

ಮೈಸೂರು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್‌ರನ್ನು ವಿಧಾನಪರಿಷತ್‌ಗೆ ನಾಮನಿರ್ದೇಶನ ಮಾಡಲು ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಡಾ.ನಾಗರಾಜು ಮಾತನಾಡಿದರು.

ಮೈಸೂರು,ಮೇ24(ಜಿಎ)–ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಕಾಂಗ್ರೆಸ್ ಪಕ್ಷಕ್ಕಾಗಿ ಸತತವಾಗಿ ದುಡಿಯುತ್ತಿದ್ದು, ಅವರ ದುಡಿಮೆಗೆ ತಕ್ಕ ಸಂಬಳವಾಗಿ ವಿಧಾನಪರಿಷತ್ತಿಗೆ ನಾಮನಿರ್ದೇಶನ ಮಾಡುವಂತೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮುಂಚೂಣಿ ಘಟಕಗಳ ಅಧ್ಯಕ್ಷರ ಒಕ್ಕೂಟ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಸಂಶೋಧನಾ ವಿಭಾಗ ಹಾಗೂ ತರಬೇತಿ ವಿಭಾಗದ ಅಧ್ಯಕ್ಷ ಡಾ.ನಾಗರಾಜು ಮಾತನಾಡಿ, ಡಾ.ಬಿ.ಜೆ.ವಿಜಯಕುಮಾರ್ ಕಳೆದ 12 ವರ್ಷಗಳಿಂದ ಪಕ್ಷ ಸಂಘಟಿಸುತ್ತಿದ್ದಾರೆ. ಜೊತೆಗೆ ಅಧ್ಯಕ್ಷರಾಗುವ ಮುನ್ನವೂ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಉತ್ತಮ ಕೆಲಸ ಮಾಡಿದ್ದಾರೆ. ಅವರು ಸಂಘಟನಾ ಚತುರರಾಗಿದ್ದು, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದರು.

ಲೋಕಸಭೆ, ವಿಧಾನಸಭೆ ಹಾಗೂ ಜಿಲ್ಲೆಯಲ್ಲಿ ನಡೆದ ಹಲವಾರು ಉಪ ಚುನಾವಣೆ, ಸಾರ್ವತ್ರಿಕ ಚುನಾವಣೆಗಳಲ್ಲಿ ಶ್ರಮಿಸಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಪ್ರಮುಖ ಪಾತ್ರವಹಿಸಿದ್ದಾರೆ. ಹಾಗೇ ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಗೆಲುವಿಗೂ ದುಡಿದಿದ್ದಾರೆ. ಹೀಗಾಗಿ ಪಕ್ಷ ಇನ್ನಷ್ಟು ಬಲಗೊಳ್ಳುವ ಉದ್ದೇಶದಿಂದ ವಿಧಾನಪರಿಷತ್ ಸದಸ್ಯ ಸ್ಥಾನ ನೀಡಬೇಕೆಂದು ಆಗ್ರಹಿಸಿದರು.

ಪಕ್ಷದಲ್ಲಿ ಅವರಿಗೆ ಯಾವುದೇ ವಿರೋಧವಿಲ್ಲ. ಎಲ್ಲ ನಾಯಕರ ಪ್ರೀತಿ, ಗೌರವಕ್ಕೆ ಅರ್ಹರಾಗಿದ್ದಾರೆ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ವಿರೋಧ ಪಕ್ಷಗಳು ಇಲ್ಲಸಲ್ಲದ ಆರೋಪ ಮಾಡುತ್ತಿರುವುದನ್ನು ಖಂಡಿಸಿ ಧರಣಿ, ಪ್ರತಿಭಟನೆ, ಸಭೆಗಳನ್ನು ಆಯೋಜಿಸಿದ್ದಾರೆ. ಈ ಮೂಲಕ ಸರ್ಕಾರದ ಉಳಿವಿಗೆ ಶ್ರಮಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್‌ನಲ್ಲಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ 24 ಮುಂಚೂಣಿ ಘಟಕಗಳಿವೆ. ಅವುಗಳ ರಚನೆಗೆ ಡಾ.ಬಿ.ಜೆ.ವಿಜಯಕುಮಾರ್ ಅವರ ಕೊಡುಗೆ ಬಹಳ ಇದೆ. ರಾಜ್ಯದ ಯಾವ ಜಿಲ್ಲೆಯು ಇಷ್ಟೊಂದು ಘಟಕಗಳನ್ನು ಹೊಂದಿಲ್ಲ. ಇದರಿಂದ ಸಾವಿರಾರು ಕಾರ್ಯಕರ್ತರು, ವಿದ್ಯಾವಂತರು ಪಕ್ಷಕ್ಕೆ ಸೇರ್ಪಡೆಗೊಂಡಿದ್ದು ಪಕ್ಷಕ್ಕೆ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು. ವಿಜಯಕುಮಾರ್ ಅವರಿಗೆ ಯಾವುದೇ ಕಾರಣದಿಂದಲೂ ವಿಧಾನ ಪರಿಷತ್ತಿನ ಸ್ಥಾನ ನೀಡದೆ ವಂಚಿಸಬಾರದು. ಜಿಲ್ಲಾ ಕಾಂಗ್ರೆಸ್‌ನಲ್ಲಿನ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಎಲ್ಲ 24 ಮುಂಚೂಣಿ ಘಟಕಗಳ ಮುಖ್ಯಸ್ಥರು ಇವರಿಗೆ ವಿಧಾನಪರಿಷತ್ ಸ್ಥಾನ ನೀಡಬೇಕೆಂದು ಪಕ್ಷದ ವರಿಷ್ಠರು, ಸಿಎಂ, ಡಿಸಿಎಂ ಅವರಲ್ಲಿ ಕೋರುತ್ತಿರುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಪ್ರೇಮಾಶಂಕರ್, ಜವರೇಗೌಡ, ಕಮಲಾ ಆನಂದ್, ಕಾನೂನು ವಿಭಾಗದ ಅಧ್ಯಕ್ಷ ಎ.ಆರ್.ಕಾಂತರಾಜು, ಪ್ರವೀಣ್ ಸಿದ್ದಲಿಂಗಪುರ, ಜಯಲಕ್ಷ್ಮಮ್ಮ ಮತ್ತಿತರರಿದ್ದರು.

ಕೆಎಎಸ್ ಸ್ವಯಂ ನಿವೃತ್ತ ಅಧಿಕಾರಿ ಎಂದು ಹೇಳಿಕೊಂಡು ಅಕ್ರಮ ಕಾಲೇಜು ಆರಂಭ

ಮೈಸೂರು, ಮೇ 24(ಜಿಎ)–ಕೆಎಎಸ್ ಸ್ವಯಂ ನಿವೃತ್ತಿ ಪಡೆದ ಅಧಿಕಾರಿ ಎಂದು ಹೇಳಿಕೊಂಡು ಓರ್ವರು ಹಾಗೂ ಇವರೊಡನೆ ಮತ್ತೋರ್ವರು ಸೇರಿಕೊಂಡು ಹುಣಸೂರು ತಾಲೂಕಿನ ಮನುಗನಹಳ್ಳಿ ಬಳಿ ಒಂದು ಪದವಿ ಪೂರ್ವ ಕಾಲೇಜನ್ನು ಅಕ್ರಮವಾಗಿ ಆರಂಭಿಸಿ, ವಿದ್ಯಾರ್ಥಿಗಳು ಹಾಗೂ ಅಲ್ಲಿನ ಬೋಧಕ, ಬೋಧಕೇತರ ಸಿಬ್ಬಂದಿ ವಂಚಿಸುತ್ತಿದ್ದಾರೆ ಎಂದು ವಿದ್ಯಾರ್ಥಿಗಳ ಪೋಷಕರು ಹಾಗೂ ಸಿಬ್ಬಂದಿ ಪರವಾಗಿ ಆನಂದ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಂಸ್ಥೆಯಲ್ಲಿ ಆರರಿಂದ ಏಳು ಮಂದಿ ಬೋಧಕ ಸಿಬ್ಬಂದಿ ಇದ್ದಾರೆ. ಹಲವಾರು ಮಂದಿ ಬೋಧಕೇತರ ಸಿಬ್ಬಂದಿಯೂ ಇದ್ದಾರೆ. ವೇತನ ಕೇಳಿದರೆ ಇವರೆಲ್ಲರ ಮೇಲೆ ದಬ್ಬಾಳಿಕೆ ಮಾಡುತ್ತಾರೆ. ಕಾಲೇಜು ಕಟ್ಟಡ ನಿರ್ಮಾಣಕ್ಕೂ ಅನುಮತಿ ಪಡೆದಿಲ್ಲ ಎನ್ನಲಾಗಿದೆ. ಈಗಾಗಲೇ ಈ ಇಬ್ಬರು ವ್ಯಕ್ತಿಗಳ ವಿರುದ್ಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತಹಸೀಲ್ದಾರರಿಗೂ ಮನವಿಪತ್ರ ಕಳುಹಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ ಸಂಬಂಧಿಸಿದವರು ಇವರ ವಿರುದ್ಧ ಕ್ರಮ ಕೈಗೊಂಡು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಭವಿಷ್ಯ ಹಾಳಾಗದಂತೆ ನೋಡಿಕೊಳ್ಳಬೇಕೆಂದು ಕೋರಿದರು.

ಇಂದು ರಾಜ್ಯದ 8 ಮಂದಿ ಸೇರಿ 131 ಸಾಧಕರಿಗೆ ರಾಷ್ಟ್ರಪತಿಗಳಿಂದ ಪದ್ಮ ಪ್ರಶಸ್ತಿ ಪ್ರದಾನ



ನವದೆಹಲಿ: ಕರ್ನಾಟಕದ 8 ಸಾಧಕರು ಸೇರಿ 2026ನೇ ಸಾಲಿನ ಪದ್ಮ ಪ್ರಶಸ್ತಿಗೆ ಆಯ್ಕೆಯಾಗಿರುವ 131 ಮಂದಿಗೆ ಮೇ 25ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಅಂದು ರಾಷ್ಟ್ರಪತಿ ಭವನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ರಾಷ್ಟ್ರಪತಿಗಳು ದೇಶದ ಅತ್ಯುನ್ನತ ನಾಗರಿಕ ಸೇವಾ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮಭೂಷಣ ಹಾಗೂ ಪದ್ಮಶ್ರೀ ಪ್ರಶಸ್ತಿಯನ್ನ ಸಾಧಕರಿಗೆ ಪ್ರದಾನ ಮಾಡಿ, ಅಭಿನಂದಿಸಲಿದ್ದಾರೆ.

ಐದು ಮಂದಿಗೆ ಪದ್ಮವಿಭೂಷಣ, 13 ಮಂದಿಗೆ ಪದ್ಮಭೂಷಣ, 113 ಮಂದಿಗೆ ಪದ್ಮಶ್ರೀ ಸೇರಿದಂತೆ ಈ ವರ್ಷ ಒಟ್ಟು 131 ಸಾಧಕರು ಪದ್ಮ ಪ್ರಶಸ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ. ಇದರಲ್ಲಿ ಕರ್ನಾಟಕದ 8 ಸಾಧಕರು ನಾಗರಿಕ ಗೌರವಕ್ಕೆ ಪಾತ್ರರಾಗುತ್ತಿದ್ದಾರೆ. ಪ್ರಶಸ್ತಿ ಪುರಸ್ಕೃತರಲ್ಲಿ 19 ಮಹಿಳೆಯರು ಮತ್ತು 16 ದಿವಂಗತ ಗಣ್ಯರಿಗೆ ಮರಣೋತ್ತರ ಗೌರವ ನೀಡಲಾಗುತ್ತಿದೆ.

ಪದ್ಮ ಪ್ರಶಸ್ತಿಗೆ ಆಯ್ಕೆಯಾದ ಕನ್ನಡಿಗರು: ಪುಸ್ತಕ ಪ್ರೇಮಿ ಮಂಡ್ಯದ ಅಂಕೇಗೌಡ (ಸಮಾಜ ಸೇವೆ), ಅಲರ್ಜಿ ತಜ್ಞೆ ಡಾ.ಶುಭ ವೆಂಕಟೇಶ ಅಯ್ಯಂಗಾರ್ (ವಿಜ್ಞಾನ), ಟಿಟಿ ಜಗನ್ನಾಥನ್ (ಕೈಗಾರಿಕೆ), ಪ್ರಭಾಕರ ಕೋರೆ (ಶಿಕ್ಷಣ), ಎಸ್.ಜಿ.ಸುಶೀಲಮ್ಮ(ಸಮಾಜ ಸೇವೆ), ಶಶಿ ಶೇಖರ್ ವೆಂಪತಿ (ಶಿಕ್ಷಣ), ಸುರೇಶ್ ಹನಗವಾಡಿ (ವೈದ್ಯಕೀಯ) ಅವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ. ಶತಾವಧಾನಿ ಆರ್.ಗಣೇಶ್ (ಕಲೆ ವಿಭಾಗ) ಪದ್ಮಭೂಷಣ ಗೌರವಕ್ಕೆ ಪಾತ್ರರಾಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.5.2026 ಸೋಮವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಉತ್ತರ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಬೆಳಗ್ಗೆ 9.30 ರಿಂದ ಕಣ್ಣಿನ ದೃಷ್ಟಿ ಸಮಸ್ಯೆಗಳಿಗೆ ವಿಶೇಷ ಬೇಸಿಗೆ ಶಿಬಿರ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲುನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ತಲೆನೋವು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ, ಪಿಎಂಎಸ್ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ಮೋಹನ್.ಎಸ್.ನೆಲ್ಲೋಲ್ ಅವರಿಂದ ಯುವ ವೇದಿಕೆ ಸತ್ಯಾತ್ಮ ಬ್ಯಾಂಡ್, ವಿದ್ವಾನ್ ಶ್ರೀ ವಾದಿರಾಜ ಕಾಖಂಡಕಿ ಅವರಿಂದ ದಾಸವಾಣಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ,ಅಗ್ರಹಾರ, ಸಂಜೆ 5.30ಕ್ಕೆ.
- **ಶಾರದ ವಿಲಾಸ್ ಕಾಲೇಜು:** ರಸಾಯನಶಾಸ್ತ್ರ ಸ್ನಾತಕೋತ್ತರ ವಿಭಾಗ ಮತ್ತು ಐಕ್ಯೂಎಸಿ ವತಿಯಿಂದ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರ, ಉದ್ಘಾಟನೆ: ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ.ಗಿರಿಧರ್ ಪರ್ವತಂ, ಅಧ್ಯಕ್ಷತೆ: ಶಾರದ ವಿಲಾಸ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ದೇವಿಕ, ಸ್ಥಳ: ಸೆನೆಟ್ರಿ ಹಾಲ್, ಶಾರದ ವಿಲಾಸ್ ಶಿಕ್ಷಣ ಸಂಸ್ಥೆ, ಮೈಸೂರು, ಬೆಳಗ್ಗೆ 10ರಿಂದ
- **ಮೈಸೂರು ವಿಶ್ವವಿದ್ಯಾನಿಲಯ:** ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವಿದ್ಯಾರ್ಥಿ ಸಂಘದ ಸಮಾರೋಪ ಕಾರ್ಯಕ್ರಮ, ಸಮಾರೋಪ ಭಾಷಣ: ಬೆಂಗಳೂರಿನ ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಮಾಜಿ ಗ್ರಂಥಪಾಲಕಿ ಡಾ.ಬಿ.ಎಂ.ಮೀರಾ, ಅಧ್ಯಕ್ಷತೆ: ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಎನ್.ಎಸ್.ಹರಿನಾರಾಯಣ್, ಸ್ಥಳ: ಡಾ.ಎಸ್‌ಆರ್ ರಂಗನಾಥನ್ ಹಾಲ್, ಗ್ರಂಥಾಲಯ–ಮಾಹಿತಿ ವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮಧ್ಯಾಹ್ನ 3.30ರಿಂದ
- **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾನಿಲಯ:** 'ಭವಿಷ್ಯದ ಉದ್ಯೋಗಗಳಲ್ಲಿ ಎಐ' ವಿಚಾರ ಸಂಕಿರಣ, ದಿವ್ಯಸಾನ್ನಿಧ್ಯ: ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಮುಖ್ಯ ಅತಿಥಿ: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಉಪ ಕುಲಪತಿಗಳಾದ ಡಾ.ಬಿ.ಸುರೇಶ್, ಅಧ್ಯಕ್ಷತೆ: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾನಿಲಯದ ಉಪ ಕುಲಪತಿ ಡಾ.ಎ.ಎನ್.ಸಂತೋಷ್‌ಕುಮಾರ್, ಸ್ಥಳ: ಐಎಸ್ ಸೆಮಿನಾರ್ ಹಾಲ್, ಗೋಲ್ಡನ್ ಜ್ಯುಬಿಲಿ ಹಾಲ್, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾನಿಲಯ, ಮೈಸೂರು, ಬೆಳಗ್ಗೆ 11.30ರಿಂದ.
- **ಭಾರತೀಯ ಜನಕಲಾ ಸಮಿತಿ (ಇಪ್ಟಾ), ಮೈಸೂರು ಜಿಲ್ಲಾ ಸಮಿತಿ:** ಇಪ್ಟಾ 84ನೇ ಸಂಸ್ಥಾಪನ ದಿನಾಚರಣೆ, ಧ್ವಜಾರೋಹಣ: ಆಕಾಶವಾಣಿಯ ವಿಶ್ರಾಂತ ಹಿರಿಯ ಉದ್ಘೋಷಕರಾದ ರಂಗಕರ್ಮಿ ಪ್ರಭುಸ್ವಾಮಿ ಮಳಿಮಠ, ಸ್ಥಳ: ಕೆ.ವಿ ಭವನ ಸರಸ್ವತಿಪುರಂ, ಬೆಳಗ್ಗೆ 10.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಗೀತಾರಾಧನ, 6.30 ಚಿಂತನ–ಡಾ.ರಂಜಾನ್ ದರ್ಗಾ, 6.35 ಮತ್ತು ಸಂಜೆ 6.10: ಸಸ್ಯ ಸಿರಿ–ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ನಾ ಕಸ್ತೂರಿ ಅವರ ಪಾತಳದಲ್ಲಿ ಪಾಪಚ್ಚಿ–ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.45 ಚಿತ್ರಗೀತೆಗಳು, 9.00 ನೆನಪಿನಂಗಳ –ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ–ಹಿರಿಯ ಅನುವಾದಕರು ಹಾಗೂ ಬಹುಭಾಷಾ ವಿದ್ವಾಂಸರಾದ ಪ್ರೊ.ಆರ್.ವಿ.ಎಸ್.ಸುಂದರಂ ಅವರೊಂದಿಗೆ ಜಿ.ಕೆ.ರವೀಂದ್ರಕುಮಾರ್ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಿ.ಎಸ್.ವಿಜಯರಾಘವನ್–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ. ಪ್ರಸ್ತುತಿ–ದಿಗ್ವಿಜಯ್.ಬಿ, **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ಎನ್.ಶ್ರೀನಾಥ್, 12.45 ನಮ್ಮ ಆರೋಗ್ಯ–ವಿಶ್ವಥೈರಾಯ್ಡ್ ದಿನದ ಸಂದರ್ಭದಲ್ಲಿ ಮಕ್ಕಳಲ್ಲಿ ಥೈರಾಯ್ಡ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಎಂಡೋಕ್ರೈನಾಲಜಿಸ್ಟ್ ಡಾ.ತೃಪ್ತಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ತೋಟಗಾರಿಕಾ ಅಭಿವೃದ್ಧಿ ಅಭಿಯಾನ ಕುರಿತು ಮಾಹಿತಿ. 1.20 ಭಾವಗೀತೆಗಳು, ಡಾ.ಶಿಲ್ಪ ಹೆಗಡೆ, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಶ್ರೀನಿವಾಸಮೂರ್ತಿ–ವೀಣಾವಾದನ, 4.00 ಮಹಿಳಾರಂಗ–ಡಾಕ್ಟರ್ ಸಮಯ–ಮಹಿಳಾ ಆರೋಗ್ಯ ಕಾರ್ಯಕ್ರಮ–ವಿಶ್ವ ಥೈರಾಯ್ಡ್ ದಿನದ ಸಂದರ್ಭದಲ್ಲಿ ಮಹಿಳೆಯರಲ್ಲಿ ಥೈರಾಯ್ಡ್ ಸಮಸ್ಯೆ ಕುರಿತು Endocrinologist ಡಾ.ಲಕ್ಷ್ಮೀ ನಾಗೇಂದ್ರ ಅವರೊಂದಿಗೆ ಸಂದರ್ಶನ. ಸಂದರ್ಶಕರು –ಕೀರ್ತನಾ.ವಿ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ: ಕಿಶೋರ್.ಎಂ.ಕಾಕಡೆ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಜಿಲ್ಲಾ ವಾರ್ತಾ ಪತ್ರ, 6.50 ಕೃಷಿರಂಗ: ಕೃಷಿ ದೀವಿಗೆ–ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಮುಸುಕಿನ ಜೋಳದ ಉತ್ಪಾದನಾ ತಾಂತ್ರಿಕತೆಗಳನ್ನ ಕುರಿತ ಸಂವಾದ. ಭಾಗವಹಿಸುತ್ತಾರೆ–ಮಂಡ್ಯ ತಾಲೂಕು, ವಿ.ಸಿ.ಫಾರಂ, ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ಪಿ.ಮಹದೇವು ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ.ಎಸ್.ಎಂ.ಮನು. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ : ಯುವ ಸೆಲೆಬ್ರಿಟಿ–ಚಲನಚಿತ್ರನಟಿ ಹಾಗೂ ರಂಗಭೂಮಿ ಕಲಾವಿದೆ ದಿಶಾ ರಮೇಶ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಆಲತ್ತೂರು ಸಹೋದರರ ಯುಗಳ ಹಾಡುಗಾರಿಕೆ. 10.00 'ಶ್ರೀ ವಿದ್ಯಾವಿಶಾರದ' ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಸವಿನೆನಪು

ಮೈಸೂರು ಮಿತ್ರ

ಮಲ್ಟಿ-ಮಾಡಲ್ ಲಾಜಿಸ್ಟಿಕ್ ಪಾರ್ಕ್‌ನಿಂದ ಬೃಹತ್ ಪ್ರಮಾಣದ ಖನಿಜ ಸಾಗಣೆಗೆ ಚಾಲನೆ

ಮೈಸೂರಿನಿಂದ ಒಡಿಶಾದ ಜಿಂದಾಲ್‌ಗೆ 2,200 ಮೆಟ್ರಿಕ್ ಟನ್ ಡ್ಯುನೈಟ್ ರವಾನೆ

ಮೈಸೂರಿನ ಕಡಕೊಳ ಬಳಿಯ



ಡ್ಯುನೈಟ್ ಖನಿಜ

- ಖನಿಜ ಸಾಗಾಣಿಕೆಯಲ್ಲಿ ಹೊಸ ಮೈಲಿಗಲ್ಲು
- ಮೈಸೂರು ಕೈಗಾರಿಕಾ ವಲಯದಲ್ಲಿ ನವ ಅಧ್ಯಾಯ ಆರಂಭ
- ಮೈಸೂರು, ಪೂರ್ವ ಭಾರತದ ನಡುವಿನ ಬಹು ಮಾದರಿ ಸಂಪರ್ಕಕ್ಕೆ ನಾಂದಿ
- ರಫ್ತು, ಆಮದುದಾರರಿಗೆ ವೆಚ್ಚ, ಸಮಯ ಉಳಿತಾಯ

ಮೈಸೂರು, ಮೇ24(ಬಿಎಲ್‌ಯು, ಬಿಸಿಟಿ)– ಮೈಸೂರಿನ ಕಡಕೊಳ ಬಳಿಯ ತಾಂಡವಪುರ ಕೈಗಾರಿಕಾ ಪ್ರದೇಶದಲ್ಲಿರುವ ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯಾ (CONCOR) ದ ಮಲ್ಟಿ-ಮಾಡಲ್ ಲಾಜಿಸ್ಟಿಕ್ಸ್ ಪಾರ್ಕ್ ಖನಿಜ ರವಾನೆಯಲ್ಲಿ ಹೊಸ ಭಾಷ್ಯ ಬರೆದಿದೆ. ಈ ಮೂಲಕ ಮೈಸೂರು ಹಾಗೂ ಚಾಮರಾಜನಗರದ ಕೈಗಾರಿಕಾ ವಲಯದಲ್ಲಿ ಲಾಜಿಸ್ಟಿಕ್ ಪಾರ್ಕ್ ಹೊಸ ಅಧ್ಯಾಯ ಆರಂಭಿಸಿದೆ.

ಮೈಸೂರಿನ ಹುಲ್ಲಹಳ್ಳಿಯ ಕಾರ್ಯದ ಸಮೃದ್ಧ ಖನಿಜ ಸಂಪತ್ತಿನ ಗಣಿಯನ್ನು ಒಡಿಸ್ಸಾದ ಉಕ್ಕಿನ ಕೇಂದ್ರಗಳೊಂದಿಗೆ ಸಂಪರ್ಕಿಸುವ ತನ್ನ ಮೊದಲ ಔಟ್ ಬೌಂಡ್ ಕಂಟೇನರ್ ರೇಕ್‌ಗೆ ಈಗ ಚಾಲನೆ ನೀಡಲಾಗಿದೆ. ಮೈಸೂರಿನ ಹುಲ್ಲಹಳ್ಳಿ ಬಳಿಯ ಕಾರ್ಯ ಮ್ಯಾಗ್ನೇಸೈಟ್ ಮೈನ್ಸ್‌ನಿಂದ ಸಂಸ್ಕರಿಸಿರುವ ಸುಮಾರು 2,200 ಮೆಟ್ರಿಕ್ ಟನ್ ಡ್ಯುನೈಟ್ ಅನ್ನು ಮಲ್ಟಿ- ಮಾಡಲ್ ಲಾಜಿಸ್ಟಿಕ್ ಪಾರ್ಕ್‌ನಿಂದ ರೈಲು ಕಂಟೈನರ್ ಮೂಲಕ ಒಡಿಶಾದ ಜಿಂದಾಲ್ ಸ್ಟೇನ್ ಲೆಸ್ ಲಿಮಿಟೆಡ್‌ಗೆ ಸಾಗಣೆ ಮಾಡಲಾಯಿತು.

ಮೈಸೂರಿನಿಂದ ಡ್ಯುನೈಟ್ ಹೊತ್ತ ರೈಲು ಒಡಿಶಾದ ಜಾಜ್‌ಪುರ ಜಿಲ್ಲೆ ದುಬುರಿಯ ಕಳಿಂಗ ನಗರ ಕೈಗಾರಿಕಾ ಸಂಕೀರ್ಣದ ಜಿಂದಾಲ್ ಸ್ಟೇನ್‌ಲೆಸ್ ಲಿಮಿಟೆಡ್‌ಗೆ 1,750 ಕಿಲೋ ಮೀಟರ್ ಕ್ರಮಿಸಿ ತಲುಪಲಿದೆ. ಇದು ಮೈಸೂರಿನ ಕಡಕೊಳದಿಂದ ಕೈಗೊಂಡಿರುವ ಅತೀ ಉದ್ದದ ದೇಶಿಯ ಪೂರೈಕೆಯ ಮಾರ್ಗವಾಗಿದೆ.

ತಾಂಡವಪುರ ಕೈಗಾರಿಕಾ ಪ್ರದೇಶದ ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯಾದ ಸ್ವಾಮ್ಯಕ್ಕೊಳಪಟ್ಟಿರುವ ಇದನ್ನು ಮಲ್ಟಿ-ಮಾಡಲ್ ಲಾಜಿಸ್ಟಿಕ್ ಪಾರ್ಕ್, ಗ್ರೀನ್ ಫೀಲ್ಡ್ ಟರ್ಮಿನಲ್, ಒಳನಾಡಿನ ಕಂಟೇನರ್ ಡಿಪೋ ಎಂಬ ಹೆಸರಿನಿಂದ ಕರೆಯಲಾಗುತ್ತದೆ.

ತಾಂಡವಪುರದ ಮಲ್ಟಿ-ಮಾಡಲ್ ಲಾಜಿಸ್ಟಿಕ್ ಪಾರ್ಕ್‌ನಿಂದ ಮೋಟಾರ್ ಸೈಕಲ್‌ಗಳು, ವಾಣಿಜ್ಯ ಸರಕುಗಳನ್ನು ಕೂಡ ಈಗಾಗಲೇ ಸಾಗಾಣಿಕೆ ಮಾಡಲಾಗುತ್ತಿದೆ ಎಂದು ತಾಂಡವಪುರದ ಮಲ್ಟಿ-ಮಾಡೆಲ್ ಲಾಜಿಸ್ಟಿಕ್ ಪಾರ್ಕ್‌ನ ಜನರಲ್ ಮ್ಯಾನೇಜರ್ ಎಂ.ಪಿ.ವಿಜಯ ಕುಮಾರ್ ಅವರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಈಗ ಆರಂಭವಾಗಿರುವ ಖನಿಜ ಸಾಗಾಣಿಕೆಯಿಂದ ಸಮೂಹ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಪ್ರಾಯೋಗಿಕ ಕಾರ್ಯಕ್ಕೆ ಚಾಲನೆ ದೊರೆತಿದ್ದು, ಇದರ ಯಶಸ್ಸು ನಿಯಮಿತ ಸರಕು ಸೇವೆಗಳಿಗೆ ದಾರಿ ಮಾಡಿಕೊಡುತ್ತದೆ. ಈ ಮೂಲಕ ದಕ್ಷಿಣ ಮತ್ತು ಪೂರ್ವ ಭಾರತದ ನಡುವಿನ ಬಹು ಮಾದರಿ ಸಂಪರ್ಕವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಕಡಕೊಳ ಬಳಿಯ ತಾಂಡವಪುರ ಕೈಗಾರಿಕಾ ಪ್ರದೇಶದ ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯಾದ ಮಲ್ಟಿ-ಮಾಡಲ್ ಲಾಜಿಸ್ಟಿಕ್ ಪಾರ್ಕ್‌ನಿಂದ ಒಡಿಶಾಗೆ ಸಾಗಾಣಿಕೆಯಾದ ಡ್ಯುನೈಟ್ ಹೊತ್ತ ಕಂಟೈನರ್‌ಗಳ ಜೊತೆ ಸಿಬ್ಬಂದಿಗಳು.

ಮೈಸೂರಿನಿಂದ ಒಡಿಶಾಗೆ ಡ್ಯುನೈಟ್ ಸಾಗಣೆ ಆಗಿರುವುದು ಮೈಸೂರಿನ ಲಾಜಿಸ್ಟಿಕ್ ವಲಯ ಹಾಗೂ ಇಲ್ಲಿನ ಗಣಿಗಾರಿಕೆ ಅಭಿವೃದ್ಧಿಗೆ ಮೈಲಿಗಲ್ಲಾಗಿದೆ. ಇದು ಕಂಟೈನರೀಕೃತ ರೈಲು ಸೇವೆಗಳ ಮೂಲಕ ಬೃಹತ್ ಪ್ರಮಾಣದ ಕೈಗಾರಿಕಾ ಖನಿಜವನ್ನು ಸಾಗಿಸುವ ಕಾರ್ಯಕ್ಷಮತೆಯನ್ನು ಪ್ರದರ್ಶಿಸುತ್ತದೆ ಎಂದು ತಿಳಿಸಿದರು.

ರೈಲು ಕಂಟೈನರ್ ಮೂಲಕ ಹಲವು ವಸ್ತುಗಳ ಸಾಗಾಣಿಕೆಯ ಕ್ರಮದಿಂದ ರಸ್ತೆ ಸಾರಿಗೆ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ. ಅಲ್ಲದೆ ಹೆಚ್ಚು ಸುಸ್ಥಿರ ಮತ್ತು ಪರಿಣಾಮಕಾರಿ ಲಾಜಿಸ್ಟಿಕ್ ಪರಿಹಾರವನ್ನು ಒದಗಿಸುತ್ತದೆ ಎಂದು ವಿಜಯಕುಮಾರ್ ಅವರು ಹೇಳಿದರು.

ಮೈಸೂರಿನ ತಾಂಡವಪುರದಲ್ಲಿರುವ ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯಾದ ಮಲ್ಟಿ-ಮಾಡಲ್ ಲಾಜಿಸ್ಟಿಕ್ ಪಾರ್ಕ್ ಅನ್ನು ಕೇಂದ್ರ ಸರ್ಕಾರ ನಿರ್ಮಿಸಿದ್ದು, ಮಾರ್ಚ್ 12, 2024 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇದನ್ನು ಉದ್ಘಾಟಿಸಿದ್ದರು.

ಈ ಮೊದಲು ಚೆನ್ನೈ ಬಂದರಿಗೆ ಮೈಸೂರಿನಿಂದ ರಫ್ತಾಗುವ ವಸ್ತುಗಳನ್ನು ರಸ್ತೆ ಸಾರಿಗೆ ಮೂಲಕ ಸಾಗಣೆ ಮಾಡಲಾಗುತ್ತಿತ್ತು. ಇದರಿಂದ ವೆಚ್ಚ, ಸಾಗಣೆ ಸಮಯ ಹೆಚ್ಚಾಗುತ್ತಿತ್ತು. ಆದರೆ ಈಗ ಮಲ್ಟಿ-ಮಾಡಲ್ ಲಾಜಿಸ್ಟಿಕ್ ಪಾರ್ಕ್‌ನಿಂದ ಸುರಕ್ಷಿತ, ವೇಗ ಹಾಗೂ ವಿಶ್ವಾಸಾರ್ಹವಾಗಿ ವಸ್ತುಗಳನ್ನು ರೈಲುಗಳ ಸಾಗಾಣಿಕೆ ಆಗುತ್ತಿದೆ. ಇದರಿಂದ ರಫ್ತುದಾರರಿಗೆ ಸಾಗಾಣಿಕೆ ವೆಚ್ಚ ಕಡಿಮೆಯಾಗುವುದರ ಜೊತೆಗೆ ಸಮಯ ಕೂಡ ಉಳಿಯಲಿದೆ.

ಇಂಜಿನಿಯರಿಂಗ್ ಸರಕುಗಳು, ಕಾಫಿ, ಎಲೆಕ್ಟ್ರಾನಿಕ್ ವಸ್ತುಗಳು, ಕೃಷಿ ಆಧಾರಿತ ಉತ್ಪನ್ನ ಸೇರಿದಂತೆ ಹಲವು ರೀತಿ ವಸ್ತುಗಳು ಮಲ್ಟಿ-ಮಾಡೆಲ್ ಲಾಜಿಸ್ಟಿಕ್ ಪಾರ್ಕ್‌ನಿಂದ ಸಾಗಾಣಿಕೆಯಾಗುತ್ತಿದೆ ಈಗ ಖನಿಜ ಸಂಪತ್ತು ಸಾಗಾಣಿಕೆಗೆ ಚಾಲನೆ ದೊರೆತ್ತಿದ್ದು, ಇನ್ನು ಮುಂದೆ ದೇಶಾದ್ಯಾಂತ ಕಂಟೈನರೀಕೃತ ರೈಲು ಸೇವೆಗಳಿಗೆ ಸಂಪರ್ಕ ದೊರೆಯಲಿದೆ.

ಮೈಸೂರಿನಲ್ಲಿರುವ ಈ ಪಾರ್ಕ್ ಬೆಂಗಳೂರಿನ ವೈಟ್‌ಫೀಲ್ಡ್ ನಂತರದ ಕರ್ನಾಟಕದ ಮೂರನೆ ಪಾರ್ಕ್ ಆಗಿದೆ. ಈ ಪಾರ್ಕ್ ಕಾರ್ಯ ನಿರ್ವಹಣೆಯಿಂದ ಮೈಸೂರಿನಲ್ಲಿರುವ ಆಮದು ಹಾಗೂ ರಫ್ತು ಮಾಡುವರಿಗೆ ಬಹುಪಯೋಗಿಯಾಗಿದೆ.

ಮೈಸೂರಿನ ಹುಲ್ಲಹಳ್ಳಿ ಬಳಿ ಅಪರೂಪದ ಖನಿಜ ನಿಕ್ಷೇಪವಿದೆ

ಮೈಸೂರು ಜಿಲ್ಲೆಯಲ್ಲಿ ಅಪರೂಪದ ಖನಿಜ ನಿಕ್ಷೇಪ ಇರುವುದು ಬಹಳಷ್ಟು ಜನರಿಗೆ ತಿಳಿದಿಲ್ಲ. ಮೈಸೂರಿನ ನಂಜನಗೂಡು ತಾಲೂಕು ಹುಲ್ಲಹಳ್ಳಿ ಬಳಿಯ ಕಾರ್ಯದಲ್ಲಿ ಸಮೃದ್ಧ ಡ್ಯುನೈಟ್ ಹಾಗೂ ಮ್ಯಾಗ್ನಸೈಟ್ ಖನಿಜವಿದೆ.

ಡ್ಯುನೈಟ್ ಎಂಬುದು ಮೆಗ್ನೀಸಿಯಮ್ ಮತ್ತು ಕಬ್ಬಿಣದಿಂದ ಸಮೃದ್ಧವಾಗಿರುವ ಒಂದು ನೈಸರ್ಗಿಕ ಕಲ್ಲು ಅಥವಾ ಅಗ್ನಿ ಶಿಲೆ. ಇದು ಹೆಚ್ಚಿನ ತಾಪಮಾನ ತಡೆದುಕೊಳ್ಳುವ ಅಪರೂಪದ ಗುಣ ಹೊಂದಿದೆ.

ಉಕ್ಕು ಮತ್ತು ಕಬ್ಬಿಣ ತಯಾರಿಕೆಯ ಬೃಹತ್ ಕೈಗಾರಿಕೆಗಳಲ್ಲಿ ಇದನ್ನು ಬಳಸಲಾಗುತ್ತದೆ. ಕಬ್ಬಿಣವನ್ನು ಕರಗುವಿಕೆಯನ್ನು ಸುಲಭಗೊಳಿಸಲು ಡ್ಯುನೈಟ್ ಬಳಲಾಗುತ್ತದೆ. ಇದು ಡೊಲೊಮೈಟ್‌ಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿದ್ದು, ಇಂಧನ ಅಥವಾ ಕಲ್ಲಿದ್ದಲು ಉಳಿಸಲು ಸಹಾಯವಾಗುತ್ತದೆ.

ಡ್ಯುನೈಟ್ ಎಂಬುದು ಮುಖ್ಯವಾಗಿ ಆಲಿವೈನ್ ಎಂಬ ಖನಿಜದಿಂದ ಕೂಡಿರುವ ವಿಶಿಷ್ಟವಾದ ಅಲ್ಟ್ರಾಮಾಫಿಕ್ ಮತ್ತು ಅಗ್ನೇಯ ಶಿಲೆಯಾಗಿದೆ. ಇದನ್ನು ಒಲಿವಿನೈಟ್ ಎಂಬ ಹೆಸರಿನಿಂದ ಕೂಡ ಕರೆಯಲಾಗುತ್ತದೆ. ಡ್ಯುನೈಟ್ ಭೂಮಿಯ ಒಳ ಪದರದ ಕೆಳಗಿರುವ ಮ್ಯಾಂಟಲ್‌ನಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

ಭಾರತದಲ್ಲಿ ತಮಿಳುನಾಡು, ಕರ್ನಾಟಕ, ಜಾರ್ಖಂಡ್, ಒಡಿಶಾ ಮತ್ತು ನಾಗಾಲ್ಯಾಂಡ್‌ನಲ್ಲಿ ಡ್ಯುನೈಟ್ ನಿಕ್ಷೇಪವಿದೆ. ಇಂತಹ ಅಪರೂಪದ ಖನಿಜ ನಿಕ್ಷೇಪ ಮೈಸೂರಿನ ಹುಲ್ಲಹಳ್ಳಿ ಬಳಿ ಇರುವ ವಿಚಾರ ಬಹಳಷ್ಟು ಜನರ ತಿಳಿದಿಲ್ಲ.

ಜಮೀನು ವಿಚಾರಕ್ಕೆ ಹಲ್ಲೆ ಆರೋಪ ; ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿ ಏಳು ಮಂದಿ ವಿರುದ್ಧ ಪ್ರಕರಣ ದಾಖಲು

ಮೈಸೂರು,ಮೇ 24(ಪಿಎಂ)– ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಕೆ.ಸಾಲುಂಡಿ ಗ್ರಾಮದ ಇಬ್ಬರ ಮೇಲೆ ಹಲ್ಲೆ ನಡೆಸಿರುವ ಆರೋಪದಡಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಒಟ್ಟು ಏಳು ಮಂದಿ ವಿರುದ್ಧ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ತಾಲೂಕಿನ ಜಯಪುರ ಹೋಬಳಿಯ ಕೆ.ಸಾಲುಂಡಿ ಗ್ರಾಮದ ಚಿಕ್ಕೇಗೌಡ ಎಂಬುವವರು ತಮ್ಮ ಮೇಲೆ ಹಾಗೂ ತಮ್ಮ ಪುತ್ರ ಚಂದ್ರಶೇಖರ್ ಮೇಲೆ ಹೆಚ್.ವಿ.ರಾಜೀವ್ ಅವರ ಸಹಚರರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಾಗಿದೆ.

ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಹಲ್ಲೆ ನಡೆಸಿ ಜಮೀನಿನಲ್ಲಿದ್ದ ಕಲ್ಲು ಕಂಬಗಳನ್ನು ಒಡೆದು ಹಾಕಿದ್ದಾರೆ ಎಂದು ಚಿಕ್ಕೇಗೌಡ ಆರೋಪಿಸಿದ್ದಾರೆ. ಈ ಸಂಬಂಧ ಹೆಚ್.ವಿ.ರಾಜೀವ್, ಅಶೋಕ ಪುರಂ ನಿವಾಸಿಗಳಾದ ಅಂಜು, ಅನಂತ ನಾಗ್, ತ್ರಿಶೂಲ ಮುನ್ನ, ಶಂಕರ್, ಲೈಟಿಂಗ್ ಕುಮಾರ್, ಆದರ್ಶ್ ಎಂಬವರ ವಿರುದ್ಧ ಪ್ರಕರಣ ದಾಖಲಾಗಿದೆ.

ತನಿಖೆ ನಡೆಯುತ್ತಿದೆ...

ಜಯಪುರ ಪೊಲೀಸ್ ಠಾಣೆಯಲ್ಲಿ ಭಾನುವಾರ ಸಂಜೆಯಷ್ಟೇ ಎಫ್‌ಐಆರ್ ಆಗಿದೆ. ಹೆಚ್.ವಿ.ರಾಜೀವ್ ಅವರ ಕುಮ್ಮಕ್ಕಿನಿಂದ ಗುಂಪೊಂದು ಬಂದು ಹಲ್ಲೆ ನಡೆಸಿತು ಎಂದು ದೂರು ನೀಡಲಾಗಿದೆ. ಈ ಕುರಿತಂತೆ ತನಿಖೆ ನಡೆಯುತ್ತಿದೆ.

–ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಮೈಸೂರು.

ಸಂಪರ್ಕಕ್ಕೆ ಸಿಗದ ರಾಜೀವ್

ಮುಡಾ ಮಾಜಿ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ಹೆಚ್.ವಿ.ರಾಜೀವ್ ಅವರ ವಿರುದ್ಧ ಗಂಭೀರ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಈ ಸಂಬಂಧ ಪ್ರತಿಕ್ರಿಯೆ ಪಡೆಯುವ ಸಲುವಾಗಿ ಅವರ ಸಂಪರ್ಕಿಸಲು ಕರೆ ಮಾಡಲಾಯಿತು. ಆದರೆ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ನಮ್ಮ ತಂದೆ ದಿವಂಗತ ಸಣ್ಣಮರಿಗೌಡ ಅವರ ಹೆಸರಿನಲ್ಲಿ ಬಲ್ಲಹಳ್ಳಿ ಗ್ರಾಮದ ಸರ್ವೇ ನಂಬರ್ 103/2ರಲ್ಲಿ 2 ಎಕರೆ 32 ಗುಂಟೆ ಜಮೀನು ಇದ್ದು, ಈ ಪೈಕಿ 1 ಎಕರೆ 31 ಗುಂಟೆ ಜಮೀನನ್ನು ಅಧಿತ್ಯ ಬಿರ್ಲಾ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ಕೊಟ್ಟಿದ್ದು, ಉಳಿದ ಜಮೀನನ್ನು ಬಿ.ಎನ್.ನಾರಾಯಣ ಎಂಬುವವರು ನಮಗೆ ಗೊತ್ತಿಲ್ಲದಂತೆ ಅವರ ಹೆಸರಿಗೆ ಮಾಡಿಸಿಕೊಂಡಿದ್ದು, ಈ ಬಗ್ಗೆ ನಾವು ಮೈಸೂರಿನ ಸಿವಿಲ್ ಕೋರ್ಟ್‌ನಲ್ಲಿ ದಾವೆ ಹೂಡಿದ್ದೇವೆ ಎಂದು ಚಿಕ್ಕೇಗೌಡ ದೂರಿನಲ್ಲಿ ತಿಳಿಸಿದ್ದಾರೆ.

ಈ ಜಮೀನಿನಲ್ಲಿ ಈ ಹಿಂದಿನಿಂದಲೂ ನಾವೇ ಅನುಭವದಲ್ಲಿದ್ದು, ಈ ಜಮೀನಿನ ಸುತ್ತಲೂ ಮುಳ್ಳುತಂತಿ ಎಳೆಸಲು ಕಲ್ಲು ಕಂಬಗಳನ್ನು ನೆಡಿಸಿದ್ದೆವು. ಹೀಗಿರುವಾಗ ಭಾನುವಾರ ಬೆಳಗ್ಗೆ 10.30ರ ಸಮಯದಲ್ಲಿ ನಾನು ಮತ್ತು ನಮ್ಮ ಮಗ ಚಂದ್ರಶೇಖರ ಸದರಿ ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಮೈಸೂರು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರ ಕುಮ್ಮಕ್ಕಿನಿಂದ ಅಶೋಕಪುರಂ ನಿವಾಸಿಗಳಾದ ಅಂಜು, ಅನಂತನಾಗ್, ತ್ರಿಶುಲ ಮುನ್ನ, ಶಂಕರ್, ಲೈಟಿಂಗ್ ಕುಮಾರ, ಆದರ್ಶ್ ಎಂಬುವವರು ಏಕಾಏಕಿ ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ನಾವು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರ ಕಡೆಯವರೆಂದು ನಮ್ಮನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಈ ಜಮೀನು ನಮ್ಮ ಬಾಸ್‌ಗೆ ಸೇರಬೇಕು. ಬಿಟ್ಟು ಹೋದರೆ ಸರಿ ಎಂದು ಈ ಗುಂಪು ಬೆದರಿಕೆ ಹಾಕಿತು. ಅಲ್ಲದೆ, ಅಂಜು ಎಂಬುವವನು ನನಗೆ ಡಿಚ್ಚಿ ಹೊಡೆದು, ಕೈಯಿಂದಲೂ ಹಲ್ಲೆ ಮಾಡಿದ. ಬಿಡಿಸಲು ಬಂದ ನನ್ನ ಮಗ ಚಂದ್ರಶೇಖರನಿಗೆ ಅಂಜು ಹಾಗೂ ತ್ರಿಶುಲ ಮುನ್ನ ಇಬ್ಬರು ಕಲ್ಲಿನಿಂದ ಹಲ್ಲೆ ನಡೆಸಿದರು. ಜೊತೆಗೆ ಈ ಗುಂಪು ನಮ್ಮ ಜಮೀನಿನಲ್ಲಿದ್ದ ಕಲ್ಲು ಕಂಬಗಳನ್ನೆಲ್ಲಾ ಒಡೆದು ಹಾಕುತ್ತಿದ್ದಾಗ, ತಡೆಯಲು ಹೋದ ನನ್ನ ಮಗನನ್ನು ಚರಂಡಿಗೆ ಹಾಕಿಕೊಂಡು ಕಾಲುಗಳಿಂದ ಒದ್ದು ಹಲ್ಲೆ ಮಾಡಿದರು. ಅಷ್ಟರಲ್ಲಿ ನಾನು ಜೋರಾಗಿ ಕಿರುಚಿಕೊಂಡಾಗ, ನಮ್ಮೂರಿನ ಚಿಕ್ಕಣ್ಣ, ನನ್ನ ಬಾಮೈದ ಸೇರಿದಂತೆ ಮೊದಲಾದವರು ಸ್ಥಳಕ್ಕೆ ಬರುತ್ತಿದ್ದಂತೆ ಈ ಗುಂಪು ಕೊಲೆ ಬೆದರಿಕೆ ಹಾಕಿ ಹೊರಟು ಹೋಯಿತು ಎಂದು ಚಿಕ್ಕೇಗೌಡ ದೂರಿನಲ್ಲಿ ಆರೋಪಿಸಿದ್ದಾರೆ.

ಮೇ 26ರಿಂದ ಬೆಂಗಳೂರಲ್ಲಿ ಅಂತಾರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್

ಬೆಂಗಳೂರು, ಮೇ 24– ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ(ಪಿಸಿಐ) ಆಯೋಜಿಸುವ 8ನೇ ಆವೃತ್ತಿಯ ಭಾರತೀಯ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಅಂತಾರಾಷ್ಟ್ರೀಯ ಚಾಂಪಿಯನ್‌ಶಿಪ್ ಮೇ 26ರಿಂದ 28ರವರೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಈ ಚಾಂಪಿಯನ್‌ಶಿಪ್‌ನಲ್ಲಿ ಭಾರತ ಸೇರಿ ಒಟ್ಟು 5 ರಾಷ್ಟ್ರಗಳ ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ ಅಧ್ಯಕ್ಷ ದೇವೇಂದ್ರ ಝಝಾರಿಯಾ ಅವರು ಚಾಂಪಿಯನ್‌ಶಿಪ್ ಬಗ್ಗೆ ಮಾಹಿತಿ ನೀಡಿ, ಈ ಚಾಂಪಿಯನ್‌ಶಿಪ್, ಅಕ್ಟೋಬರ್ 18ರಿಂದ 24ರವರೆಗೆ ಜಪಾನ್‌ನಲ್ಲಿ ನಡೆಯಲಿರುವ 5ನೇ ಆವೃತ್ತಿಯ ಏಷ್ಯನ್ ಪ್ಯಾರಾ ಗೇಮ್ಸ್‌ಗೆ ಆಯ್ಕೆ ಟ್ರಯಲ್ಸ್ ಆಗಿರಲಿದೆ ಎಂದು ತಿಳಿಸಿದರು.

ಚಾಂಪಿಯನ್‌ಶಿಪ್‌ನಲ್ಲಿ ಭಾರತದ 341 ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಪ್ಯಾರಾಲಿಂಪಿಕ್ಸ್, ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್, ಏಷ್ಯನ್ ಪ್ಯಾರಾ ಗೇಮ್ಸ್ ಪದಕ ವಿಜೇತರು ಕೂಟದಲ್ಲಿ ಭಾಗವಹಿಸಲಿದ್ದಾರೆ. ಎರಡು ಬಾರಿ ಪ್ಯಾರಾಲಿಂಪಿಕ್ಸ್ ಹಾಗೂ ಮೂರು ಬಾರಿ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಚಿನ್ನ ವಿಜೇತ ಜಾವೆಲಿನ್ ಪಟು ಸುಮಿತ್ ಅಂಟಿಲ್ ಚಾಂಪಿಯನ್‌ಶಿಪ್‌ನ ಪ್ರಮುಖ ಆಕರ್ಷಣೆ ಎನಿಸಿಕೊಳ್ಳಲಿದ್ದಾರೆ. ಇದರ ಜೊತೆಗೆ ಕಿರ್ಗಿಸ್ತಾನ, ಫಿಲಿಪೈನ್ಸ್, ಶ್ರೀಲಂಕಾ, ಥಾಯ್ಲೆಂಡ್‌ನ ಸ್ಪರ್ಧಿಗಳೂ ಭಾಗವಹಿಸಲಿದ್ದಾರೆ. ಅಫ್ಘಾನಿಸ್ತಾನದ ಕೆಲ ಸ್ಪರ್ಧಿಗಳೂ ಕೂಟದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು.

ಚಾಂಪಿಯನ್‌ಶಿಪ್‌ನಲ್ಲಿ 100 ಮೀಟರ್, 200 ಮೀಟರ್, 400 ಮೀಟರ್, 800 ಮೀಟರ್, 1500 ಮೀಟರ್, ಹೈಜಂಪ್, ಲಾಂಗ್ ಜಂಪ್, ಡಿಸ್ಕಸ್ ಎಸೆತ, ಶಾಟ್‌ಪುಟ್, ಜಾವೆಲಿನ್ ಥ್ರೋ, ಕ್ಲಬ್ ಥ್ರೋ ಸೇರಿದಂತೆ ಪುರುಷ ಹಾಗೂ ಮಹಿಳೆಯರ ಒಟ್ಟು 155 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಅವರು ಮಾಹಿತಿ ನೀಡಿದರು.

ಕರ್ನಾಟಕದ ಕ್ರೀಡಾಪಟುಗಳು: ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ 15 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಮಂಜುಳಾ, ಭಾರತಿ ಭಾರತೇಶ್, ಗಂಗವ್ವ ನೀಲಪ್ಪ, ಹರ್ಷಿತಾ, ಶೈಲಾ ಶಿಲ್ಪಾ, ಮೇಧಾ ಜಯಂತ್, ರಾಧಾ ವೆಂಕಟೇಶ್, ರಕ್ಷಿತಾ ರಾಜು, ಸೌಮ್ಯ, ಬಸವರಾಜ ಕುರುಬ, ಸಚ್ಚಿದಾನಂದ ದೇವಾಡಿಗ, ಗುರುರಾಜು, ಶಂಕರಪ್ಪ ಶರತ್, ರಕ್ಷಿತ್ ಹೊಸನಗರ ಸೋಮಶೇಖರ, ಸಿದ್ದಾರ್ಥ್ ಮಂಜುನಾಥ್ ಸ್ಪರ್ಧಿಸಲಿದ್ದಾರೆ.

ಮುಂಬೈ ವಿರುದ್ಧ ಗೆದ್ದು ಪ್ಲೇ-ಆಫ್‌ಗೆ ರಾಯಲ್ ಎಂಟ್ರಿಕೊಟ್ಟ ರಾಜಸ್ಥಾನ್

ಮುಂಬೈ, ಮೇ 24(ವಿವಿಹೆಚ್)– ನಿರ್ಣಾಯಕ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಅವರ ತವರಿನಂಗಳದಲ್ಲೇ 30 ರನ್‌ಗಳಿಂದ ಬಗ್ಗು ಬಡಿಯುವ ಮೂಲಕ ರಾಜಸ್ಥಾನ್ ರಾಯಲ್ಸ್ ತಂಡವು ಪ್ಲೇ-ಆಫ್‌ಗೆ ಕೊನೆಯ ತಂಡವಾಗಿ ಎಂಟ್ರಿ ಕೊಟ್ಟಿದೆ.

ಪ್ರಸಕ್ತ ಟೂರ್ನಿಯಲ್ಲಿ 16 ಅಂಕಗಳನ್ನು ಪಡೆದ ರಾಜಸ್ಥಾನ್ ರಾಯಲ್ಸ್ ನೇರವಾಗಿ ಪ್ಲೇ-ಆಫ್ ತಲುಪಿದ್ದು 15 ಅಂಕದೊಂದಿಗೆ ಮುಂಬೈ ಗೆಲುವಿಗೆ ಕಾಯುತ್ತಾ ಪ್ಲೇಆಫ್ ಕನಸು ಕಾಣುತ್ತಿದ್ದ ಪಂಜಾಬ್ ಕಿಂಗ್‌ಗೆ ಭಾರೀ ನಿರಾಸೆಯಾಗಿದೆ. ಇತ್ತ ಅದೇ ರೀತಿ ಪ್ಲೇ-ಆಫ್ ಚಿತ್ತ ನೆಟ್ಟಿದ್ದ ಕೆಕೆಆರ್‌ಗೆ ಡೆಲ್ಲಿಯೊಂದಿಗಿನ ಪಂದ್ಯ ಔಪಚಾರಿಕ ಪಂದ್ಯವಾಗಿ ಪರಿಣಮಿಸಿದೆ.

ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಆರ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 205 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತುವಲ್ಲಿ ವಿಫಲವಾದ ಮುಂಬೈ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿ, ಸೋಲೊಪ್ಪಿಕೊಂಡಿತು.

ಆರ್‌ಆರ್ ಇನ್ನಿಂಗ್ಸ್: ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ ಪರ ಜೈಸ್ವಾಲ್ 27 ರನ್, ಜುರೆಲ್ 38 ರನ್ ಉತ್ತಮ ಆರಂಭ ಒದಗಿಸಿ ಕೊಟ್ಟರು. ಮಧ್ಯಮ ಕ್ರಮಾಂಕದಲ್ಲಿ ದಸುನ್ ಶನಾಕ 29 ರನ್, ಫೆರೆರಾ 18 ರನ್ ಅಲ್ಪ ಹೋರಾಟ ಮಾಡಿದರೆ, ಕೊನೆಯಲ್ಲಿ ಅಬ್ಬರಿಸಿದ ಜೋಫ್ರಾ ಆರ್ಚರ್ 15 ಎಸೆತಗಳಲ್ಲಿ ಸ್ಫೋಟಕ 32 ರನ್ ಚಚ್ಚಿದರು.

ಉಳಿದಂತೆ ಜಡೇಜಾ 19 ರನ್, ರಿಯಾನ್ ಪರಾಗ್ 14 ರನ್, ಬರ್ಗರ್ 10 ರನ್, ಸೂರ್ಯವಂಶಿ 4 ರನ್, ಶುಭಂ ದುಬೆ 5 ರನ್ ಕೊಡುಗೆ ನೀಡಿದರು. ಮುಂಬೈ ಪರ ದೀಪಕ್ ಚಾಹರ್ ಹಾಗೂ ಶಾರ್ದುಲ್ ಠಾಕೂರ್ ತಲಾ 2 ವಿಕೆಟ್, ವಿಲ್ ಜಾಕ್ಸ್, ಘಜನ್ಫರ್ ಹಾಗೂ ಕಾರ್ಬಿನ್ ಬಾಷ್ ತಲಾ ಒಂದೊಂದು ವಿಕೆಟ್ ಪಡೆದರು.



ತಿಲಕ್ ವರ್ಮಾ ವಿಕೆಟ್ ಪಡೆದ ಬ್ರಿಜೇಶ್ ಶರ್ಮಾ ಅವರನ್ನು ಸಹಾ ಆಟಗಾರರು ಅಭಿನಂದಿಸಿದರು.

ಮುಂಬೈ ಇನ್ನಿಂಗ್ಸ್: ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಮುಂಬೈ ಪರ ಸೂರ್ಯಕುಮಾರ್ 60(42) ಏಕಾಂಗಿ ಹೋರಾಟ ನಡೆಸಿದರು. ಇವರಿಗೆ ವಿಲ್ ಜಾಕ್ಸ್ 33(18), ನಾಯಕ ಹಾರ್ದಿಕ್ ಪಾಂಡ್ಯ 34(15) ಹೊರತುಪಡಿಸಿ ಮತ್ಯಾರಿಂದಲೂ ನಿರೀಕ್ಷಿತ ಪ್ರದರ್ಶನ ಕಾಣಲಿಲ್ಲ. ಆರಂಭಿಕ ಬ್ಯಾಟರ್‌ಗಳು ಮುಗ್ಗರಿಸಿದ್ದರಿಂದ ಅಂತಿಮ ಪಂದ್ಯದಲ್ಲಿಯೂ ಮುಂಬೈ ಸೋಲೊಪ್ಪಿಕೊಂಡಿತು.

ಉಳಿದಂತೆ ರೋಹಿತ್ ಶರ್ಮಾ ಡಕ್‌ಔಟ್, ರಿಕೆಲ್ಟನ್ 12(7), ನಮನ್ ಧಿರ್ 6(5), ತಿಲಕ್ ವರ್ಮಾ 3(7), ಕಾರ್ಬಿನ್ ಬಾಷ್ 2(4), ದೀಪ್ ಚಾಹರ್ 8(5), ಶಾರ್ದುಲ್ ಠಾಕೂರ್ ಅಜೇಯ 10(11), ಘಹನ್ಫರ್ ಅಜೇಯ 2(3) ರನ್ ಗಳಿಸಿದರು.

ಆರ್‌ಆರ್ ಪರ ಜೋಫ್ರಾ ಆರ್ಚರ್ 3 ವಿಕೆಟ್, ನಾಂಡ್ರೆ ಬರ್ಗರ್, ಬ್ರಿಜೇಶ್ ಶರ್ಮಾ ಹಾಗೂ ಯಶ್‌ರಾಜ್ ಪುಂಜಾ ತಲಾ 2 ವಿಕೆಟ್ ಪಡೆದರು.

40 ರನ್‌ಗಳಿಂದ ಸೋತ ಕೋಲ್ಕತ್ತಾ ನೈಟ್‌ರೈಡರ್ಸ್

ಕೋಲ್ಕತ್ತಾ, ಮೇ 24(ವಿವಿಹೆಚ್)– ಲುಂಗಿ ಎನ್‌ಗಿಡಿ ಹಾಗೂ ಮಿಚೆಲ್ ಸ್ಟಾರ್ಕ್ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಅತಿಥೇಯ ಕೋಲ್ಕತ್ತಾ ನೈಟ್‌ರೈಡರ್ಸ್ ತಂಡವನ್ನು ಡೆಲ್ಲಿ ಕ್ಯಾಪಿಟಲ್ಸ್ 40 ರನ್‌ಗಳಿಂದ ಮಣಿಸಿತು.

ಕೋಲ್ಕತ್ತದ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್–2026) ಟಿ20 ಕ್ರಿಕೆಟ್ ಟೂರ್ನಿಯ ಲೀಗ್ ಹಂತದ ಅಂತಿಮ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ, ಕೆ.ಎಲ್.ರಾಹುಲ್ 60(30), ಅಕ್ಷರ್ ಪಟೇಲ್ 39(25) ಬ್ಯಾಟಿಂಗ್ ಬಲದಿಂದ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 203 ರನ್ ಗಳಿಸಿತು.

ಲುಂಗಿ ಎನ್‌ಗಿಡಿ 27ಕ್ಕೆ3 ಹಾಗೂ ಮಿಚೆಲ್ ಸ್ಟಾರ್ಕ್ 26ಕ್ಕೆ2 ಕರಾರುವಕ್ಕಾದ ಬೌಲಿಂಗ್ ದಾಳಿಗೆ ನಲುಗಿ ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಕೋಲ್ಕತ್ತಾ ನೈಟ್‌ರೈಡರ್ಸ್ ನಾಯಕ ಅಜಿಂಕ್ಯಾ ರಹಾನೆ 63(39) ಹೊರತಾಗಿಯೂ 18.4 ಓವರ್‌ಗಳಲ್ಲಿ 163ರನ್‌ಗಳಿಗೆ ಸರ್ವಪತನ ಕಾಣುವ ಮೂಲಕ ಸೋಲೊಪ್ಪಿಕೊಂಡರು.



3 ದಿನಗಳ ಗ್ರೀಷ್ಮ ರಂಗೋತ್ಸವ ಸಮಾರೋಪ

ನಾನೇ ಸರ್ವಶ್ರೇಷ್ಠ ಎಂಬ ಅಹಂ ಇಲ್ಲವಾದರೆ ಮಾತ್ರ ಸಾಧನೆ ಸಾಧ್ಯ

ಪದ್ಮಶ್ರೀ ಪುರಸ್ಕೃತ ಡಾ.ಹಾಸನ ರಘು ಅಭಿಮತ

ಮೈಸೂರು,ಮೇ 24(ಪಿಎಂ)– ಕಲಾವಿದರೇ ಆಗಲಿ ಮತ್ಯಾರೇ ಆಗಲಿ. ನಾನೇ ಸರ್ವಶ್ರೇಷ್ಠ ಎಂಬ ಅಹಂ ಇಲ್ಲವಾದರೆ ಮಾತ್ರ ಸಾಧನೆ ಸಾಧ್ಯ ಎಂದು ಸಾಂಪ್ರದಾಯಿಕ ಸಮರ ಕಲೆಗಳ ತಜ್ಞ ಹಾಗೂ ಮಾಜಿ ಯೋಧರೂ ಆದ ಪದ್ಮಶ್ರೀ ಪುರಸ್ಕೃತ ಡಾ.ಹಾಸನ ರಘು ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಉದ್ಭವ ಕಲಾವಿದರು ಬೆಂಗಳೂರು, ಸಂಚಲನ ಮೈಸೂರು ಜಂಟಿ ಆಶ್ರಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ತಸ್ಮಿ ಮೈಸೂರು ಸಹಕಾರದಲ್ಲಿ ಮೂರು ದಿನಗಳ ಕಾಲ ನಡೆದ ಗ್ರೀಷ್ಮ ರಂಗೋತ್ಸವದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಅವರು ಮಾತನಾಡಿದರು.

ನಾನೇ ಸರ್ವಶ್ರೇಷ್ಠ ಎಂಬ ಭಾವನೆ ಇರಬಾರದು. ಏಕೆಂದರೆ ಕಲಿಕೆ ಎಂಬುದು ನಿರಂತರ. ಹಾಗಾಗಿ ಕಲಾವಿದರು ಕಲೆಯಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳಬೇಕು. ಅಹಂ ಇಲ್ಲದೆ, ಗುರುಗಳಲ್ಲಿ ಭಕ್ತಿ ಹೊಂದಬೇಕು. ಆಗ ಸಾಧನೆ ಎಂಬುದು ಇಂದಲ್ಲಾ ನಾಳೆ ಸಾಧ್ಯವಾಗಲಿದೆ ಎಂದರು.

ರಂಗಭೂಮಿಯಲ್ಲಿ ಬಿ.ವಿ.ಕಾರಂತರಿಂದ ನಾನು ಸಾಕಷ್ಟು ಕಲಿತೆ. ಹಾಗಾಗಿ ಅವರ ಹೆಸರಿನಲ್ಲಿ ಒಂದು ಥೀಯೇಟರ್ ಸಹ ನಿರ್ಮಿಸಿದ್ದೇನೆ. ಬಿವಿ ಕಾರಂತರು ಸಿನಿಮಾದಲ್ಲಿ ಕೆಲಸ ಮಾಡಿದ್ದು ಸಾಕೆಂದು ನನ್ನನ್ನು ನಾಟಕಕ್ಕೆ ಕರೆತಂದು ಅವಕಾಶ ನೀಡಿದರು. ನನಗೆ ತಿಳಿದ ಹಾಗೆ ನಾಟಕದಿಂದ ಸಿನಿಮಾಗೆ ಬಹಳ ಮಂದಿ ಪ್ರವೇಶ ಪಡೆದಿದ್ದಾರೆ. ಆದರೆ ಸಿನಿಮಾದಿಂದ ನಾಟಕಕ್ಕೆ ಬಂದವನು ನಾನೊಬ್ಬನೇ ಇರಬೇಕು ಎಂದು ಹೇಳಿದರು.



ಗ್ರೀಷ್ಮ ರಂಗೋತ್ಸವದ ಸಮಾರೋಪ ಸಮಾರಂಭದಲ್ಲಿ ಡಾ.ಹಾಸನ ರಘು ಮಾತನಾಡಿದರು.

90ರ ದಶಕದಲ್ಲಿ ರಾಷ್ಟ್ರೀಯ ನಾಟಕ ಶಾಲೆ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ನಂತರ ನಾಟಕ ಶಾಲೆ ನನನ್ನೂ ಬಿಡಲಿಲ್ಲ. ರಂಗಭೂಮಿಯಲ್ಲಿ ಸಾಕಷ್ಟು ಕೆಲಸ ಮಾಡಿದೆ. ಎಲ್ಲಾ ಭಾಷೆಯ ಚಿತ್ರಗಳಲ್ಲಿ ನನ್ನ ಶಿಷ್ಯರು ಇದ್ದಾರೆ. ಕನ್ನಡ ಸಿನಿಮಾರಂಗಕ್ಕೆ 80ರಲ್ಲಿ ಪ್ರವೇಶ ಪಡೆದೆ. ಪಟ್ಟಣ್ಣ ಕಣಗಾಲ್ ಅವರು 'ರಂಗ ನಾಯಕಿ' ಚಿತ್ರದ ಮೂಲಕ ಸಾಹಸ ಕಲಾವಿದನಾಗಿ ನನ್ನನ್ನು ಪರಿಚಯಿಸಿದರು. ಆ ಮೂಲಕ ಕನ್ನಡ ಚಿತ್ರರಂಗದ ಸಂಘಟನೆಯಲ್ಲೂ ಕೆಲಸ ಮಾಡಲು ಸಾಧ್ಯವಾಯಿತು. ಹೊರ ನಾಡಿನವರ ಪ್ರಭಾವದಿಂದ ನಾನು ಸೇರಿದಂತೆ ನಾಡಿನ ಕಲಾವಿದರಿಗೆ ಅವಕಾಶ ಕಡಿಮೆ ಇದ್ದವು. ಅಂತಹ ಪ್ರಭಾವ ಹೊಗಲಾಡಿಸಲು ಸಮಯ ಬೇಕಾಯಿತು. ಆ ಬಳಿಕ ನಾಡಿನ ಕಲಾವಿದರು ಬೆಳೆದರು. ಎಲ್ಲಾ ಬೆಳೆದ ಮೇಲೆ ನಾವೇ ಈಗ ಇಲ್ಲ ಎಂದು ತಿಳಿಸಿದರು.

ಜನಪದ ಕ್ಷೇತ್ರದಲ್ಲೂ ಕೆಲಸ ಮಾಡಿದ್ದೇನೆ. ಬುಡಕಟ್ಟು ಅಧ್ಯಯನ ಸಂಸ್ಥೆ ಪ್ರಧಾನ ಕಾರ್ಯದರ್ಶಿಯಾಗಿ ಸಹ ಕೆಲಸ ಮಾಡಿದ್ದೇನೆ. ಈಗ ನನ್ನಂದೇ ಗುರುಕುಲವಿದ್ದು, 60 ಮಕ್ಕಳು ಸಾಂಪ್ರದಾಯಕ ಸಮರ ಕಲೆಗಳನ್ನು ಕಲಿಯುತ್ತಿದ್ದಾರೆ. ನಾನು ಮೂಲತಃ ರಾಷ್ಟ್ರ ಮಟ್ಟದ ಕ್ರೀಡಾಪಟು. ಸೇನೆಯಲ್ಲಿ ಇದ್ದಾಗ ನಾನು ಜಿಮ್ನಾಸ್ಟಿಕ್ ಪಟು ಆಗಿದ್ದೆ. ಇಂದು ನನಗೆ ಗುರು ಸ್ಥಾನ ನೀಡಿದ್ದಾರೆ. ಆ ಸ್ಥಾನ ಅಷ್ಟು ಸುಲಭವಾಗಿ ದೊರೆಯುವುದಿಲ್ಲ. ಗುರುಗಳಾಗಲು ತಪಸ್ಸನ್ನೇ ಮಾಡಬೇಕು ಎಂದರು.

ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರ ಮೋದಿಯರವರು ನನ್ನನ್ನು ಗುರುತಿಸಿ ಒಬ್ಬ ಸಾಹಸ ಕಲಾವಿದನಾದ ನನಗೆ ಪದ್ಮಶ್ರೀ ಪುರಸ್ಕಾರ ನೀಡಿದ್ದಾರೆ. ನಾಡಿಗೆ ಹಾಗೂ ನನ್ನ ಎಲ್ಲಾ ಸಾಹಸ ಕಲಾವಿದರು, ಗುರುಗಳಿಗೆ ಅದರ ಶ್ರೇಯಸ್ಸು ಸಲ್ಲಬೇಕು ಎಂದು ಹೇಳಿದರು.

ಬಳಿಕ ಸಂಚಲನ ಮೈಸೂರು ರಂಗ ತಂಡದ 'ಎರಡೆರಡ್ಲಾ ಐದು' ನಾಟಕ ಪ್ರದರ್ಶನ ಕಂಡಿತು. ಕೆಪಿಸಿಸಿ ರಾಜ್ಯ ಸಂಚಾಲಕ ಹಾಗೂ ನಿರ್ಮಾಪಕ ಎ.ಎಂ.ಬಾಬು, ನಿವೃತ್ತ ವಿಜ್ಞಾನಿ ಡಾ.ಬಿ.ಎಸ್.ಚನ್ನಕೇಶವ ಮೂರ್ತಿ, ಉದ್ಭವ ಕಲಾವಿದರ ಸಂಸ್ಥೆಯ ನಾಗೇಂದ್ರ ಪ್ರಸಾದ್, ನಟ ನಿರ್ದೇಶಕ ದೀಪಕ್ ಮೈಸೂರು ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ರೆಸ್ಟೋರೆಂಟ್‌ನಲ್ಲಿ ಭೋಜನವನ್ನು ಮುಗಿಸಿದ ನಂತರ ಹೆಂಡತಿ ತನ್ನ ಗಂಡನಿಗೆ 'ಮಾಣಿಗೆ ಟಿಪ್ಸ್ ಕೊಟ್ಟು ಬನ್ನಿ' ಎಂದು ಹೇಳಿದಳು.
ಪತಿ ಮಾಣಿಯನ್ನು ಕರೆದು: ಜೀವನದಲ್ಲಿ ಯಾವತ್ತು ಮದುವೆಯಾಗಬೇಡ. ಹೆಂಡತಿಯನ್ನು ಸಂಭಾಳಿಸುವುದು ಕಷ್ಟ.

ಮೈಸೂರು ಮಿತ್ರ

ಸೋಮವಾರ, ಮೇ 25, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಶಬ್ಧ ಮಾಡಿ ಅಳುವವರಿಗಿಂತ, ಮನಸ್ಸಿನಲ್ಲೇ
ಅತ್ತು ಮೌನವಾಗುವವರ ನೋವು ದೊಡ್ಡದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಅಜ್ಜಿ ಇಲ್ಲದ ಮನೆ, ಮಜ್ಜಿಗೆ ಇಲ್ಲದ ಊಟ ಎರಡೂ ಒಂದೇ

ನಿಮ್ಮ ಪತ್ರಗಳು

ಸರ್ಕಾರಿ ಶಾಲೆಗಳ ದತ್ತು ತೆಗೆದುಕೊಳ್ಳಲಿ...

ಮಾನ್ಯರೆ,

ರಾಜ್ಯಾದ್ಯಂತ ಸರ್ಕಾರಿ ಶಾಲೆಗಳು ಇದೆ ಮೇ 29ರಿಂದ ಪ್ರಾರಂಭವಾಗುತ್ತಿವೆ. ಸರ್ಕಾರಿ ಶಾಲೆಗಳಲ್ಲಿ ರಾಜ್ಯಸರ್ಕಾರ ಪ್ರತಿ ವರ್ಷ ಮಕ್ಕಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ಕ್ಷೀರಭಾಗ್ಯ, ಮಧ್ಯಾಹ್ನದ ಬಿಸಿಊಟ ಹೀಗೆ ಹಲವು ಸೌಲಭ್ಯಗಳನ್ನು ಸರ್ಕಾರದ ವಿವಿಧ ಯೋಜನೆಗಳಡಿ ನೀಡುತ್ತಿದ್ದು, ಹೀಗಿದ್ದರೂ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕುಸಿಯುತ್ತಿರುವುದು ಆತಂಕದ ಸಂಗತಿ.

ಸರ್ಕಾರಿ ಶಾಲೆಗಳು ಭಾರತದ ಶೈಕ್ಷಣಿಕ ವ್ಯವಸ್ಥೆಯ ಪ್ರಮುಖ ಅಂಶವಾಗಿದೆ. ಗ್ರಾಮೀಣ, ನಗರ ಪ್ರದೇಶಗಳಲ್ಲಿರುವ ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಸರ್ಕಾರಿ ಶಾಲೆಗಳ ಪಾತ್ರ ಅಮೂಲ್ಯ. ರಾಜ್ಯದ ಬಹುತೇಕ ಸರ್ಕಾರಿ ಶಾಲೆಗಳು ಮೂಲ ಸೌಲಭ್ಯಗಳ ಕೊರತೆ ಅನುಭವಿಸುತ್ತಿವೆ. ಕುಡಿಯುವ ನೀರು ಸೇರಿದಂತೆ ಶೌಚಾಲಯ, ಆಸನ ವ್ಯವಸ್ಥೆ, ಆಟದ ಮೈದಾನ, ಉತ್ತಮ ಕಟ್ಟಡ, ಶೈಕ್ಷಣಿಕ ಉಪಕರಣಗಳು ಮತ್ತು ಶಿಕ್ಷಕರ ಕೊರತೆ ಮುಂತಾದವುಗಳು ಶಾಲೆಯಲ್ಲಿನ ಶಿಕ್ಷಣದ ಮಟ್ಟ ಕುಗ್ಗಿಸುತ್ತಿವೆ. ಅಲ್ಲದೆ ಈ ಕಾರಣಗಳಿಂದಲೇ ನಮ್ಮ ಸರ್ಕಾರಿ ಶಾಲೆಗಳು, ವಿದ್ಯಾರ್ಥಿಗಳು ಹಾಗೂ ಪಾಲಕರನ್ನು ಸೆಳೆಯುವಲ್ಲಿ ವಿಫಲವಾಗುತ್ತಿವೆ.

ಇಷ್ಟಕ್ಕೂ ಸರ್ಕಾರಿ ಶಾಲಾ ಸಮಸ್ಯೆಗಳನ್ನು ಸರ್ಕಾರವೇ ನಿವಾರಣೆ ಮಾಡಲಿ ಎಂಬ ಧೋರಣೆ ತಪ್ಪಬೇಕಿದೆ. ನಮ್ಮ ಸರ್ಕಾರಿ ಶಾಲಾ ಮಕ್ಕಳ ಬಗ್ಗೆ ಕಾಳಜಿ ವಹಿಸಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಮಾಜದ ಪ್ರತಿಯೊಬ್ಬರು ಸರ್ಕಾರದೊಂದಿಗೆ ಕೈಜೋಡಿಸುವುದು ಅಗತ್ಯವಾಗಿದೆ. ರಾಜ್ಯದ ಪ್ರತಿಯೊಂದು ಹಳ್ಳಿಗಳಲ್ಲಿರುವ ಸರ್ಕಾರಿ ಶಾಲೆಗಳನ್ನು ಪ್ರತಿಷ್ಠಿತ ವ್ಯಕ್ತಿಗಳು ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳು ದತ್ತು ಪಡೆದು ಶಾಲೆಗಳನ್ನು ಮುನ್ನಡೆಸುವ ಜವಾಬ್ದಾರಿ ತೆಗೆದುಕೊಂಡಾಗ ಸರ್ಕಾರಿ ಶಾಲೆಗಳ ಸಬಲೀಕರಣ ಮತ್ತಷ್ಟು ಹೆಚ್ಚಾಗಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹಾಗೂ ಹಾಜರಾತಿ ಇನ್ನಷ್ಟು ವೃದ್ಧಿಸುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವು ಸೇರಿದಂತೆ ಪ್ರತಿಯೊಬ್ಬರು ಆಲೋಚಿಸಿ ರಾಜ್ಯಾದ್ಯಂತ ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ಅಭಿಯಾನ ಪ್ರಾರಂಭಿಸಿ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಸದೃಢ ಶಿಕ್ಷಣ ಸಿಗಲು ಎಲ್ಲರೂ ಕಾರ್ಯೋನ್ಮುಖರಾಗಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಸರ್ಕಾರಿ ಶಾಲೆಗಳ ನವೀಕರಣಕ್ಕೆ ಸರ್ಕಾರ ಕ್ರಮ ಕೈಗೊಳ್ಳಲಿ...

ಮಾನ್ಯರೇ,

ಶತಮಾನದ ಹಳೆಯದಾದ, ಮೈಸೂರಿನ ತಿಲಕ್‌ನಗರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಕಳೆದ ಆರು ವರ್ಷಗಳ ಹಿಂದೆ ಆಕಸ್ಮಿಕವಾಗಿ ಬೆಂಕಿ ತಗುಲಿ ಅವಘಡ ಸಂಭವಿಸಿ ಶಿಥಿಲಾವಸ್ಥೆ ತಲುಪಿತ್ತು. ಈ ಶಾಲೆ ಸಂಪೂರ್ಣವಾಗಿ ಮುಚ್ಚಿ ಇತಿಹಾಸದ ಪುಟಗಳಲ್ಲಿ ಸೇರುವ ಸಂದರ್ಭದಲ್ಲಿ, ಉತ್ತರ ವಲಯದ ಬಿಇಒ ಅವರ ಪ್ರಾಮಾಣಿಕ ಪ್ರಯತ್ನದಿಂದ ಹಾಗೂ ತಿಲಕ್‌ನಗರದಲ್ಲಿರುವ ದಾನಿಗಳ ಸಹಾಯದಿಂದ ಈ ಶಾಲೆಯನ್ನು ನಳನಳಿಸುವಂತೆ ನವೀಕರಣ ಮಾಡಿರುವುದು ಶ್ಲಾಘನೀಯ ಸಂಗತಿ. ಈ ಶಾಲೆಗೆ ದೇಣಿಗೆ ನೀಡಿದವರು ಅಭಿನಂದನಾರ್ಹರು. ಈ ಶಾಲೆಯ ನವೀಕರಣಕ್ಕಾಗಿ ಸುಮಾರು 15 ಲಕ್ಷ ರೂ. ವೆಚ್ಚವಾಗಿದೆ ಎಂದು ಹೇಳಲಾಗುತ್ತಿದೆ. ಇವರು ಇತರರಿಗೂ ಮಾದರಿಯಾಗಿದ್ದಾರೆ. ರಾಜ್ಯದಲ್ಲಿ ಸುಮಾರು 3 ಸಾವಿರ ಸರ್ಕಾರಿ ಶಾಲೆಗಳು ಶಿಥಿಲಗೊಂಡಿವೆ ಎಂದು ಸರ್ಕಾರವೇ ಹೇಳಿದೆ. ಶಿಥಿಲಗೊಂಡಿರುವ ರಾಜ್ಯದ ಸರ್ಕಾರಿ ಶಾಲೆಗಳನ್ನು ಸ್ಥಳೀಯರ ಸಹಕಾರ, ದಾನಿಗಳ ನೆರವಿನಿಂದ ನವೀಕರಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

ನಗ್ನ ಸತ್ಯ!

ಮಾನ್ಯರೇ,

ರಾಜ್ಯದ ಪ್ರತಿ ಇಲಾಖೆಯಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಭ್ರಷ್ಟಾಚಾರದ ಪಟ್ಟಿಯಲ್ಲಿ ಕರ್ನಾಟಕ ಐದನೇ ಸ್ಥಾನದಲ್ಲಿದೆ. ಈ ಪಿಡುಗನ್ನು ತಡೆಯದಿದ್ದರೆ ಭವಿಷ್ಯದಲ್ಲಿ ಭೀಕರ ಅಪಾಯ ಕಟ್ಟಿಟ್ಟ ಬುತ್ತಿ. ಬ್ರಿಟಿಷರ ಆಡಳಿತಾವಧಿಯಲ್ಲಿನ ಸ್ಥಿತಿ ಮರುಕಳಿಸಲಿದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ ರಾಜ್ಯ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ.

ಅಷ್ಟೇ ಅಲ್ಲ.. ರಾಯಚೂರಿಗೆ ಭೇಟಿ ನೀಡಿದ್ದಾಗ ದುಷ್ಕರ್ಮಿಗಳು ಗುಂಪು ಕಟ್ಟಿಕೊಂಡು ನನ್ನ ಮೇಲೆ ರೌಡಿಸಂ ಮಾಡಲು ಬಂದಿದ್ದರು. ಇತ್ತೀಚೆಗೆ ಬೆದರಿಕೆ ಕರೆಗಳು ಬರುತ್ತಿವೆ.ಆತ್ಮರಕ್ಷಣೆಗಾಗಿ ಪಿಸ್ತೂಲ್ ಜತೆಯಲ್ಲಿಟ್ಟುಕೊಂಡು ಓಡಾಡುತ್ತಿದ್ದೇನೆ' ಎಂದೂ ಉಪಲೋಕಾಯುಕ್ತರು ಹೇಳಿದ್ದಾರೆ.

ಉಪಲೋಕಾಯುಕ್ತರ ಮಾತಿನ ಅರ್ಥ ಇಷ್ಟೇ....

ಭ್ರಷ್ಟರಿಗೆ ಲೋಕಾಯುಕ್ತರನ್ನು ಕಂಡರೆ ಯಾವುದೇ ಭಯ ಇಲ್ಲ.

ಲೋಕಾಯುಕ್ತರಿಗೆ ಭ್ರಷ್ಟರನ್ನು ಕಂಡರೆ ಭಯ ಇದೆ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಿ...

ಮಾನ್ಯರೇ,

ಮೈಸೂರು–ಹುಣಸೂರು ಮುಖ್ಯ ರಸ್ತೆಯ ಹಿನಕಲ್ ಫ್ಲೈಓವರ್‌ನ ತುಸು ಹಿಂದೆ ರಸ್ತೆಯ ಮಧ್ಯ ಭಾಗದಲ್ಲಿ ದೊಡ್ಡ ಗುಂಡಿಗಳು ನಿರ್ಮಾಣವಾಗಿವೆ. ಪ್ರತಿದಿನ ಸಾವಿರಾರು ವಾಹನಗಳು ಇದೇ ರಸ್ತೆಯಲ್ಲಿ ಹಾದು ಹೋಗುತ್ತವೆ. ಈ ದೊಡ್ಡ ಗುಂಡಿಗಳ ಹತ್ತಿರ ವಾಹನ ಚಲಾಯಿಸುವುದೇ ಕಷ್ಟ ಸಾಧ್ಯ. ಸ್ವಲ್ಪ ಆಯತಪ್ಪಿದರು ಅಪಘಾತ ಸಂಭವಿಸುವುದು ನಿಶ್ಚಿತ. ಇಲ್ಲಿನ ಸ್ಥಳೀಯ ಅಧಿಕಾರಿ ವರ್ಗಕ್ಕೆ ದೊಡ್ಡ ಗುಂಡಿಗಳು ಇನ್ನು ಕಣ್ಣಿಗೆ ಕಾಣದಿರುವುದು ದುರುದೃಷ್ಟಕರ. ಸ್ಥಳೀಯ ಅಧಿಕಾರಿ ವರ್ಗ ಇನ್ನಾದರೂ ಎಚ್ಚೆತ್ತು ಗುಂಡಿಗಳನ್ನ ಮುಚ್ಚಿ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಿ. **–ಮಂಜೇಶ್ ದೇವಗಳ್ಳಿ, ಮೈಸೂರು.**

ಕೆ.ಆರ್.ಆಸ್ಪತ್ರೆ ಪಾರ್ಕಿಂಗ್‌ನಲ್ಲಿ ಅನ್ಯಾಯ

ಮಾನ್ಯರೇ,

ಇದೇ ಮೇ 19ರಂದು ನಾನು ಆರೋಗ್ಯ ತಪಾಸಣೆಗಾಗಿ ನಗರದ ಕೆಆರ್ ಆಸ್ಪತ್ರೆಗೆ ನನ್ನ ದ್ವಿಚಕ್ರ ವಾಹನದಲ್ಲಿ ತೆರಳಿದ್ದೆ. ಆಸ್ಪತ್ರೆ ಆವರಣದಲ್ಲಿ ದ್ವಿಚಕ್ರ ವಾಹನ ನಿಲ್ಲಿಸಲು ಪಾರ್ಕಿಂಗ್ ಶುಲ್ಕವಾಗಿ 10 ರೂ. ತೆಗೆದುಕೊಳ್ಳುತ್ತಿದ್ದಾರೆ. ನಾನು 10 ರೂ.ಗೆ ಪಾರ್ಕಿಂಗ್ ಚೀಟಿ ನೀಡಿ, ಎಂದರೆ ಅವರು ಹತ್ತು ರೂ. ಜೆರಾಕ್ಸ್ ಪ್ರತಿಯ ಚೀಟಿ ನೀಡಿರುತ್ತಾರೆ. ಮೂಲ ಪ್ರತಿ ನೀಡಿಲಿಲ್ಲ. ಇದೇ ರೀತಿ ಅನೇಕ ಜನರಿಗೆ ಮೋಸವಾಗುತ್ತಿದೆ. ಸೂಕ್ತ ಮೂಲ ಚೀಟಿಯನ್ನು ನೀಡದೆ ಟೆಂಡರ್ ತೆಗೆದುಕೊಂಡವರಿಗೂ ನಷ್ಟ ಮಾಡುತ್ತಿದ್ದಾರೆ. ಅನೇಕ ಬಾರಿ ಪಾರ್ಕಿಂಗ್ ಶುಲ್ಕ ತೆಗೆದುಕೊಂಡು ಯಾವುದೇ ಚೀಟಿ ಕೂಡ ನೀಡುವುದಿಲ್ಲ. ಸಂಬಂಧಪಟ್ಟವರು ಇದರ ಬಗ್ಗೆ ಗಮನಹರಿಸಬೇಕೆಂದು ತಮ್ಮಲ್ಲಿ ಕೋರಿಕೆ. **–ನೊಂದ ಗ್ರಾಹಕ, ಮೈಸೂರು.**

ಈ ಜೀವನ



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಆಲಸ್ಯ ಮನುಷ್ಯನ ಶತ್ರು, ಪರಿಶ್ರಮ ಯಶಸ್ಸಿನ ಮಿತ್ರ...

ಮಾನವ ಜೀವನವು ಸಾಧನೆ ಮತ್ತು ಸೋಮಾರಿತನ ಎಂಬ ಎರಡು ವಿರುದ್ಧ ದಿಕ್ಕುಗಳ ನಡುವಿನ ಪಯಣ. ಪರಿಶ್ರಮ, ಶಿಸ್ತು, ಧೈರ್ಯ ಮತ್ತು ಗುರಿಯೊಂದಿಗೆ ಬದುಕುವವರು ಸಾಧಕರಾಗುತ್ತಾರೆ; ಆದರೆ ಆಲಸ್ಯ, ನಿರ್ಲಕ್ಷ್ಯ ಮತ್ತು ಕಾಲಹರಣಕ್ಕೆ ಒಳಗಾಗುವವರು ಸೋಮಾರಿಗಳಾಗಿ ಉಳಿದುಕೊಳ್ಳುತ್ತಾರೆ. ಸಾಧಕರು ತಮ್ಮ ಕನಸುಗಳನ್ನು ನಿಜಗೊಳಿಸಲು ಪ್ರತಿಯೊಂದು ಕ್ಷಣವನ್ನೂ ಸದುಪಯೋಗಪಡಿಸಿಕೊಳ್ಳುತ್ತಾರೆ. ಅವರು ವಿಫಲತೆಗೆ ಹೆದರದೆ, ಅದನ್ನೇ ಯಶಸ್ಸಿನ ಮೆಟ್ಟಿಲಾಗಿ ಪರಿವರ್ತಿಸಿಕೊಳ್ಳುತ್ತಾರೆ. ಮತ್ತೊಂದೆಡೆ, ಸೋಮಾರಿಗಳು ಅವಕಾಶಗಳನ್ನು ಕೈಚೆಲ್ಲುತ್ತಾ, ಕೆಲಸವನ್ನು ಮುಂದೂಡುತ್ತಾ ತಮ್ಮ ಸಾಮರ್ಥ್ಯವನ್ನೇ ಕುಗ್ಗಿಸಿಕೊಳ್ಳುತ್ತಾರೆ.

ಸಮಾಜದ ಪ್ರಗತಿ ಸಾಧಕರ ಪರಿಶ್ರಮದ ಫಲವಾಗಿದ್ದು, ಇತಿಹಾಸದಲ್ಲಿ ಗುರುತಿಸಿಕೊಂಡ ಮಹನೀಯರೆಲ್ಲರೂ ತಮ್ಮ ಕಠಿಣ ಪರಿಶ್ರಮ ಮತ್ತು ದೃಢ ಸಂಕಲ್ಪದಿಂದಲೇ ಶ್ರೇಷ್ಠ ಸ್ಥಾನವನ್ನು ಪಡೆದಿದ್ದಾರೆ. ಆದ್ದರಿಂದ ಸಾಧಕರ ಜೀವನಶೈಲಿ ಪ್ರತಿಯೊಬ್ಬರಿಗೂ ಆದರ್ಶವಾಗಬೇಕಾದರೆ, ಸೋಮಾರಿತನವು ಜೀವನದ ದೊಡ್ಡ ಶತ್ರುವೆಂಬ ಅರಿವು ಮೂಡಬೇಕು. ಈ ಹಿನ್ನೆಲೆಯಲ್ಲೇ 'ಸಾಧಕರು–ಸೋಮಾರಿಗಳು' ವಿಷಯವು ಮಾನವ ಜೀವನದ ಮೌಲ್ಯ, ಪರಿಶ್ರಮದ ಮಹತ್ವ ಮತ್ತು ಆಲಸ್ಯದ ದುಷ್ಪರಿಣಾಮಗಳನ್ನು ತಿಳಿಸುವ ಮಹತ್ವದ ಚಿಂತನೆಯಾಗಿದೆ.

ಬದುಕಿನುದ್ದಕ್ಕೂ ಸಿಕ್ಕ ಅವಕಾಶಗಳನ್ನು ಸದಾವಕಾಶಗಳನ್ನಾಗಿ ಮಾರ್ಪಡಿಸಿಕೊಂಡು ಮುನ್ನುಗ್ಗುವವರು, ಅವಕಾಶಗಳ ನಿರ್ಮಿಸಿಕೊಂಡು ಸಾಧನೆ ಹಾದಿ ಹಿಡಿದವರು ಸಾಧಕರೆನಿಸಿಕೊಳ್ಳುತ್ತಾರೆ. ಅವಕಾಶಗಳ ಬಿಟ್ಟು ಆಲಸ್ಯ, ಶಿಸ್ತುಬದ್ಧವಲ್ಲದ ಬದುಕನ್ನು, ನಾಳೆಗೆ ಮಾಡಿದರಾಯಿತೆಂಬ ನಿರ್ಲಕ್ಷ್ಯದ ಮೊರೆಹೋದವರನ್ನು ವಿಕ್ರಮನ ಬೆನ್ನತ್ತಿದ ಬೇತಾಳದಂತೆ ಸೋಮಾರಿತನ ಬೆನ್ನಟ್ಟಿ ಇನ್ನಿಲ್ಲದಂತೆ ಕಾಡುತ್ತದೆ.

ಸೋಮಾರಿತನ ಮನುಷ್ಯನ ಅತಿ ದೊಡ್ಡ ಶತ್ರು. ಶಕ್ತಿ ಸಾಮರ್ಥ್ಯ ಇದ್ದರೂ ಸೋಮಾರಿತನ ಒಮ್ಮೆ ಮೈಗಂಟಿದರೆ ಅದು ಮನುಷ್ಯನನ್ನು ಇನ್ನಿಲ್ಲದಂತೆ ಮತ್ತಷ್ಟು ಮಗದಷ್ಟು ತನ್ನ ತೆಕ್ಕೆಗೆ ಸೇರಿಸಿಕೊಂಡು ಬಲಹೀನನನ್ನಾಗಿ ಮಾಡುತ್ತದೆ. ಬಹುತೇಕರಿಗೆ ಸುಲಭವಾಗಿ ಎಲ್ಲವೂ ದೊರೆಯಬೇಕು, ಕಷ್ಟಪಡಬಾರದು ಎಂಬ ಧೋರಣೆ ಹೆಚ್ಚು. ಸೋಮಾರಿತನ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ದಿನೇ ದಿನೇ ಸೋಮಾರಿಗಳ ಸಂತತಿಯನ್ನೇ ಹುಟ್ಟು ಹಾಕುತ್ತಿದೆ ಎಂದರೆ ಅದು ಅತಿಶಯೋಕ್ತಿಯೇನಲ್ಲ. ಸಾಧಕರೆನಿಸಿಕೊಂಡವರೇನು ಸ್ವರ್ಗಲೋಕದಿಂದ ಧರೆಗೆ ಇಳಿದವರಲ್ಲ. ತಮಗೆ ಸಿಗುವ ಅವಕಾಶವನ್ನು ಸರಿಯಾಗಿ ಬಳಸಿಕೊಂಡು ಶಿಸ್ತುಬದ್ಧವಾದ ಜೀವನಕ್ರಮವನ್ನು ರೂಢಿಸಿಕೊಂಡು ಸಾಧನೆಗೈಯುವರು. ಸಾಧಕರಿಗೂ ಸೋಮಾರಿಗಳಿಗೂ ಇರುವ ವ್ಯತ್ಯಾಸವನ್ನು ಅರ್ಥ ಮಾಡಿಕೊಂಡರೆ ಯಾವ ಪಥದಲ್ಲಿ ಸಾಗಬೇಕೆಂಬ ನಿರ್ಧಾರದ ಆಯ್ಕೆ ಸುಲಭದ್ದಾಗಿರುತ್ತದೆ.

ಕಾಯಕದಲ್ಲಿ ತೋರುವ ದಕ್ಷತೆ...

ನಮ್ಮಲ್ಲಿ ಬಹುತೇಕರಿಗೆ ಅವರಿಗೆ ಸಿಕ್ಕ ಕೆಲಸದಲ್ಲಿ ತೃಪ್ತಿ ಇರುವುದಿಲ್ಲ. ನಮ್ಮ ಕೆಲಸಕ್ಕಿಂತ ಮತ್ತೊಬ್ಬರ ಕೆಲಸ ನೋಡಿ ಅವರ ಕೆಲಸವೇ ಆರಾಮದಾಯಕ, ಅವರಂತೆ ನೆಮ್ಮದಿಯಾಗಿ ಇರಬಹುದಿತ್ತು ಎಂಬಿತ್ಯಾದಿ ಕಾರಣಗಳನ್ನೇ ನೀಡುತ್ತಾ ಸಮಯ ಕಳೆಯುವರೆ ವಿನಃ ತಮ್ಮ ಕೆಲಸವನ್ನು ದಕ್ಷತೆಯಿಂದ, ಶ್ರದ್ಧೆಯಿಂದ, ಚಾಕಚಕ್ಯತೆಯಿಂದ ಮಾಡಲಾರರು. ಯಾರಲ್ಲಿ ಮತ್ತೊಬ್ಬರ ಕೆಲಸ, ಅವರಿಗೆ ಸಿಕ್ಕ ಸವಲತ್ತುಗಳ ನೋಡಿ ಅಸೂಯೆಪಡುವ ಗುಣ ಇರುತ್ತದೆಯೋ ಅಥವಾ ಮತ್ತೊಬ್ಬರ ಹುದ್ದೆಗಾಗಿಯೇ ಕಾಯುತ್ತಾ ತಮ್ಮ ಕೆಲಸ, ಕಾರ್ಯಗಳನ್ನು ನಿರ್ಲಕ್ಷ್ಯಿಸಿ ಜೀವನ ಸಾಗಿಸುವರೋ ಅವರು ಜೀವನದುದ್ದಕ್ಕೂ ನಿಂತಲ್ಲೇ ನಿಲ್ಲುವ ನೀರಿನಂತೆ ವ್ಯರ್ಥವಾಗಿರುತ್ತಾರೆ. ಸಾಧಕರು ತಮ್ಮ ಕೆಲಸಗಳಲ್ಲಿ ಪರಿಪೂರ್ಣತೆಯನ್ನು, ಹೆಚ್ಚು ಕಾರ್ಯಕ್ಷಮತೆಯನ್ನು, ಸೃಜನಶೀಲ ಆಲೋಚನೆಗಳಿಂದ ಪ್ರಬುದ್ಧತೆ ಪಡೆದು ಮುನ್ನುಗ್ಗುತ್ತಾರೆ. ಸೋಮಾರಿಗಳು ತಮ್ಮ ಕೆಲಸವನ್ನು ಮಾಡದೇ ಮತ್ತೊಬ್ಬರ ಕೆಲಸದ ಬಗ್ಗೆಯೂ, ಅವರ ಕಾರ್ಯವೈಖರಿ ಬಗ್ಗೆಯು ಇನ್ನಿಲ್ಲದ ಗಾಳಿಸುದ್ದಿಗಳನ್ನು ಹರಡುತ್ತಾ ಸೋಮಾರಿತನದ ಪರಮಾವಧಿಗೆ ತಲುಪುತ್ತಾರೆ.

ಶಿಸ್ತು, ಪ್ರಾಮಾಣಿಕತೆ...

ಸಾಧಕರು ತಮ್ಮ ಜೀವನದಲ್ಲಿ ಶಿಸ್ತನ್ನು ರೂಢಿಸಿಕೊಂಡಿರುತ್ತಾರೆ. ಅಂದು ಮಾಡಬೇಕಾದ ಕೆಲಸವನ್ನು ಅಂದೇ ಮಾಡುವ, ತಮ್ಮ ನಿರ್ದಿಷ್ಟ ಗುರಿಯೆಡೆಗೆ ಸಾಗುವಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಎಚ್ಚರಿಕೆಯಿಂದ ಇರುತ್ತಾರೆ. ಕಾರಣಗಳೇನಿದ್ದರೂ ತಮ್ಮ ಕೆಲಸಗಳಿಗೆ ಸಮಯ ಮೀಸಲಿಡುತ್ತಾರೆ. ಜೊತೆಗೆ ಪ್ರಾಮಾಣಿಕತೆಯಿಂದ ಕೆಲಸಗಳನ್ನು ನಿರ್ವಹಿಸುತ್ತಾ ತಮ್ಮ ಸಂಪೂರ್ಣ ಗಮನವನ್ನು ವಹಿಸುತ್ತಾರೆ. ಜೀವನದಲ್ಲಿ ಪ್ರಾಮಾಣಿಕತೆ, ಶಿಸ್ತು ರೂಢಿಸಿಕೊಂಡರೆ ಅರ್ಧ ಗೆಲುವನ್ನು ಪಡೆದರೆಂದೇ ಹೇಳಬಹುದು.

ಸೋಮಾರಿಗಳು ಪ್ರತಿಯೊಂದಕ್ಕೂ ಕಾರಣಗಳನ್ನು ನೀಡುತ್ತಾ ಕಾಲಹರಣ ಮಾಡುತ್ತಾರೆ. ನಾಳೆಯಿಂದ ಮಾಡಿದರಾಯಿತು, ಇಷ್ಟು ಬೇಗ ಯಾಕೆ ಕಷ್ಟಪಡುವುದು, ಸಮಯ ಇನ್ನೂ ಇದೆ. ನಿಧಾನವಾಗಿ ಪ್ರಯತ್ನಿಸೋಣ ಹೀಗೆ ಸಾವಿರ ಸಾವಿರ ಕಾರಣಗಳನ್ನು ಮನದೊಳಗೆ ಅಡಗಿಸಿಟ್ಟುಕೊಂಡು ಕುಂಟು ನೆಪಗಳನ್ನೇ ಬದುಕಿನುದ್ದಕ್ಕೂ ಕರಗತ ಮಾಡಿಕೊಂಡಿರುತ್ತಾರೆ. ಪ್ರತಿ ಹೊಸ ವರ್ಷ (ಕ್ಯಾಲೆಂಡರ್ ವರ್ಷ) ಜನವರಿ ಒಂದನೇ ತಾರೀಖಿನಂದು ಮಾಡುವ, ಕೈಗೊಳ್ಳುವ, ಈ ವರ್ಷ ಮಾಡಿಯೇ ತೀರುವೆನೆಂಬ ಭರವಸೆಯ ಮಾತುಗಳು ಅದರ ಮರುದಿನವೇ ಕಣ್ಮರೆಯಾಗಿ ಕಳೆದು ಹೋಗಿರುವುದನ್ನು ಗಮನಿಸಿದ್ದೇನೆ. ಸೋಮಾರಿಗಳಲ್ಲಿ ಶಿಸ್ತು ಉತ್ತರ ಧ್ರುವದಿ ಮರೆಯಾಗಿ ನಿಂತರೆ ಪ್ರಾಮಾಣಿಕತೆಯಂತೂ ದಕ್ಷಿಣ ಧ್ರುವದೆಡೆಗೆ ಮೋರೆ ಮಾಡಿ ನಿಂತಿರುತ್ತದೆ.





> “ ಪ್ರತಿಯೊಬ್ಬರೂ ಸಾಧಕರ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಪರಿಶ್ರಮ, ಸಮಯಪಾಲನೆ ಹಾಗೂ ಸಕಾರಾತ್ಮಕ ಚಿಂತನೆಗಳನ್ನು ಜೀವನದ ಭಾಗವಾಗಿಸಿಕೊಳ್ಳಬೇಕು. ಏಕೆಂದರೆ ಸಾಧನೆ ದಾರಿ ಸುಲಭವಲ್ಲ; ಆದರೆ ಅದನ್ನು ಆರಿಸಿಕೊಂಡವರ ಬದುಕು ಮಾತ್ರ ಅರ್ಥಪೂರ್ಣವಾಗುತ್ತದೆ. 'ಆಲಸ್ಯ ಮನುಷ್ಯನ ಶತ್ರು, ಪರಿಶ್ರಮ ಅವನ ಯಶಸ್ಸಿನ ಮಿತ್ರ' ಎಂಬ ಸತ್ಯವನ್ನು ಅರಿತು, ನಾವು ಸಾಧಕರ ದಾರಿಯಲ್ಲಿ ನಡೆದು ನಮ್ಮ ಜೀವನವನ್ನು ಸಾರ್ಥಕಗೊಳಿಸಬೇಕು.

ಗುರಿಯೆಡೆಗೆ ಅಚಲವಾದ ನಂಬಿಕೆ...

ಸಾಧಕರಿಗೆ ತಾವು ತಲುಪಬೇಕಾದ ಗುರಿ ಏನು? ಅದಕ್ಕಾಗಿ ನಾನು ಮಾಡಬೇಕಾದ ತಯಾರಿ ಏನು? ಎಷ್ಟು ಕಡಿಮೆ ಸಮಯದಲ್ಲಿ ನನ್ನ ಗುರಿ ತಲುಪಲು ಸಾಧ್ಯ ಎಂಬ ಪ್ರಶ್ನೆಗಳಿಗೆ ನಿಖರವಾದ ಉತ್ತರವಿರುತ್ತದೆ. ಅದೆಲ್ಲಕ್ಕಿಂತ ಹೆಚ್ಚಾಗಿ ಅವರ ಬಗ್ಗೆ ಅವರಿಗೆ ನಂಬಿಕೆ, ಭರವಸೆಗಳಿರುತ್ತವೆ. ನನಗೆ ಇದನ್ನು ಹೇಳುವಾಗ ಐಪಿಎಲ್‌ನಲ್ಲಿ 15 ವರ್ಷದ ಯುವ ಕ್ರಿಕೆಟಿಗ ವೈಭವ್ ಸೂರ್ಯವಂಶಿ ನೆನಪಾಗುತ್ತಾನೆ. ಮೇ 2026ರ ವೇಳೆಗೆ ಟಿ20 ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ 100 ಸಿಕ್ಸರ್‌ಗಳನ್ನು ಪೂರೈಸಿದ ವಿಶ್ವದ ಮೊದಲ ಆಟಗಾರ. ಕೇವಲ 514 ಎಸೆತಗಳಲ್ಲಿ ಈ ಮೈಲಿಗಲ್ಲು. ರಾಜಸ್ಥಾನ ರಾಯಲ್ಸ್ ಪರ ಆಡುವ ಇವರು, 37 ಎಸೆತಗಳಲ್ಲಿ 103 ರನ್ ಗಳಿಸಿ ಟಿ20 ಇತಿಹಾಸದ ಅತ್ಯಂತ ಕಿರಿಯ ಶತಕ ವೀರ ಎಂಬ ದಾಖಲೆ ಬರೆದಿದ್ದಾರೆ. ಈ ಸಾಧನೆಗೆ ಪ್ರಮುಖ ಕಾರಣ ಅಂದುಕೊಂಡಿರುವ ಗುರಿಯನ್ನು ತಲುಪಿಯೇ ತೀರುವೆನೆಂಬ ಅಚಲವಾದ ನಂಬಿಕೆ.

ಮತ್ತೊಂದು ತಾಜಾ ಉದಾಹರಣೆ ಎಂದರೆ, ನೆರೆಯ ತಮಿಳುನಾಡಿನ ಚುನಾವಣಾ ಫಲಿತಾಂಶ. ಪ್ರಸ್ತುತ ತಮಿಳುನಾಡಿನ ಮುಖ್ಯಮಂತ್ರಿಯಾಗಿರುವ ಜೋಸೆಫ್ ವಿಜಯ್ ಚುನಾವಣೆಗೆ ನಿಲ್ಲುತ್ತಾರೆಂದಾಗ ಎಂ.ಜಿ.ಆರ್ ಅವರನ್ನು ಬಿಟ್ಟು ಯಾರಿಗೂ ಸಿಗದಂತಹ ಗೆಲುವು ಇವರಿಗೆ ಸಿಗುತ್ತದೆಯೇ? ಎಂಬಿತ್ಯಾದಿಯಾಗಿ ನಕಾರಾತ್ಮಕವಾಗಿ ಮಾತನಾಡಿದವರೇ ಹೆಚ್ಚು ಆದರೆ ಇವೆಲ್ಲವನ್ನು ಮೀರಿ ನಿಂತದ್ದು ವಿಜಯ್. ಅವರು ಗೆಲ್ಲುವುದಕ್ಕೆ ಕಾರಣಗಳೇನೇ ಇರಲಿ ಆದರೆ ಅವರಲ್ಲಿದ್ದ ಗುರಿ, ಆ ಗುರಿಯನ್ನು ತಲುಪಲುಬೇಕಾಗಿದ್ದ ನಂಬಿಕೆ ನನಗೆ ಮುಖ್ಯ ಎನಿಸುತ್ತದೆ.

ಸೋಮಾರಿಗಳಿಗೆ ನಿರ್ದಿಷ್ಟವಾದ ಗುರಿ ಇರುವುದಿಲ್ಲ. ನಂಬಿಕೆ ಅಂತು ಮೊದಲೇ ಇರುವುದಿಲ್ಲ. ನಂಬಿಕೆ ಬೇರೆಯವರ ಮೇಲೆ ಇಲ್ಲದಿದ್ದರೂ ಸರಿ, ಅವರ ಮೇಲೆ ಅವರಿಗೇ ನಂಬಿಕೆ ಇರುವುದಿಲ್ಲ. ಒಂದೊಮ್ಮೆ ಗುರಿಯನ್ನು ಇಟ್ಟುಕೊಂಡಿದ್ದರೂ ಅದನ್ನು ತಲುಪಲುಬೇಕಾದ ನಂಬಿಕೆ ಅವರಲ್ಲಿ ಇರುವುದಿಲ್ಲ. ಯಾರ್‍ಯಾರಿಂದಲೂ ಸಾಧ್ಯವಾಗದ್ದು, ನನ್ನಿಂದ ಸಾಧ್ಯವೇ? ಎಂಬ ಉದಾಸೀನತೆ, ಅಪನಂಬಿಕೆ ಅವರಲ್ಲಿ ಮನೆಮಾಡಿ ಬೆಚ್ಚಗೆ ಕೈಕಟ್ಟಿ ಕೂರುವಂತೆ ಮಾಡುತ್ತದೆ.

ಸಮಯಕ್ಕೆ ನೀಡಬೇಕಾದ ಮನ್ನಣೆ...

ಸಾಧಕರಿಗೆ ಸಮಯವನ್ನು ಹೇಗೆ ಸರಿದೂಗಿಸಿಕೊಂಡು ಮುಂದೆ ನಡೆಯಬೇಕೆಂಬ ಪ್ರಜ್ಞೆ ಇರುತ್ತದೆ. ಸಮಯವನ್ನು ಸಮರ್ಥವಾಗಿ ಬಳಸಿಕೊಳ್ಳುವ ಚಾಣಾಕ್ಷತನ ಅವರಲ್ಲಿರುತ್ತದೆ. ಜೊತೆಗೆ ಸಾಧನೆಯ ಪಥದಲ್ಲಿ ಸಾಗುವಾಗ ನನ್ನ ಕೆಲಸ ಇಷ್ಟೇ, ಇಷ್ಟು ಸಮಯದ ನಂತರ ನಾನು ಕೆಲಸ ಮಾಡಲಾರೆ ಎಂಬ ಧೋರಣೆಗಳಿಗೆ ಕಟ್ಟು ಬೀಳುವುದಿಲ್ಲ. ಹಗಲು ರಾತ್ರಿಗಳನ್ನೆದೆ ತಮ್ಮ ಗುರಿಯ ಕಡೆಗೆ ಸಾಗುವ ಹಾದಿಯ ಮುಖ್ಯವಾಗಿ ಕಾಣುತ್ತದೆಯೇ ವಿನಃ ಗಡಿಯಾರ ನೋಡಿಕೊಂಡು ಇವತ್ತಿನ ಕೆಲಸ ಇಷ್ಟೇ ಎಂಬ ನಿರ್ಬಂಧವನ್ನು ಹೇರಿಕೊಳ್ಳುವುದಿಲ್ಲ.

ಸೋಮಾರಿಗಳಿಗೆ ಸಮಯವೇ ಪ್ರಧಾನ. ಇವತ್ತಿಗೆ ಸಾಕು, ನಾಳೆ ಮಾಡೋಣ, ಸಮಯ ಆಗಿದೆ, ವಿಶ್ರಾಂತಿಬೇಕು, ದಣಿವಾದರೆ ದೇಹಕ್ಕೆ ಒಳ್ಳೆಯದಲ್ಲ ಎಂಬ ಅಂಶಗಳೇ ಮುಖ್ಯವಾಗಿ ಸಮಯವನ್ನು ಸರಿಯಾಗಿ ಸದ್ಬಳಕೆ ಮಾಡದೇ ಕಾಲಹರಣ ಮಾಡುತ್ತಾ 'ಯುದ್ಧ ಕಾಲೇ ಶಸ್ತ್ರಾಭ್ಯಾಸ, 'ಸಂತೆಗೆ ಮುನ್ನ ಮೂರು ಮೊಳ ನೇಯ್ದ ಹಾಗೆ' ಗಾದೆ ಮಾತಿಗೆ ಅನುರೂಪವಾಗಿ ನಡೆದುಕೊಳ್ಳುತ್ತಾರೆ.

ಸ್ವಾವಲಂಬನೆ–ಪರಾವಲಂಬನೆ...

ಸಾಧಕರು ಬಹುತೇಕ ಯಾರೊಂದಿಗೂ ಅವಲಂಬಿತರಾಗುವುದಿಲ್ಲ. ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವ, ಕೆಲಸದ ಸಾಧಕ–ಬಾಧಕ, ಆಗು–ಹೋಗುಗಳ ಬಗ್ಗೆ ಸಂಪೂರ್ಣ ಗಮನ ನೀಡುತ್ತಾ ಸ್ವಯಂಪ್ರೇರಿತರಾಗಿ ಸ್ವಾವಲಂಬನೆಯಿಂದ ಕಾರ್ಯಚಟುವಟಿಕೆಯಲ್ಲಿ ತೊಡಗಿಕೊಳ್ಳುವ ಮೂಲಕ ಸಾಧನೆಯತ್ತ ಹೆಜ್ಜೆಯಿಡುತ್ತಾರೆ.

ಸೋಮಾರಿಗಳು ಪ್ರತಿಯೊಂದು ಕೆಲಸಕ್ಕೂ ಬೇರೆಯವರ ಮೇಲೆ ಅವಲಂಬಿತರಾಗಿ ಅವರಿಲ್ಲದಿದ್ದರೆ ಕೆಲಸವೇ ನಡೆಯಲಾರದೆಂಬುದರ ಮಟ್ಟಿಗೆ ತಲುಪುವಂತಹ ಪರಾವಲಂಬಿಗಳಾಗಿ ಬದುಕುತ್ತಾರೆ. ಸ್ವಯಂ ನಿರ್ಣಯ ತೆಗೆದುಕೊಳ್ಳಲು ಕೂಡ ಇವರಿಗೆ ಸಾಧ್ಯವಾಗುವುದಿಲ್ಲ.

ಅಡೆತಡೆ, ಟೀಕೆಗಳ ಬಗ್ಗೆ ಗಮನವಿರುವುದಿಲ್ಲ...

ಸಾಧಕರಿಗೆ ಬೆನ್ನಹಿಂದೆ ಅಥವಾ ತಮ್ಮ ಮುಂದೆ ಟೀಕಿಸುವ ಜನರ ಬಗ್ಗೆಯಾಗಲೀ, ಸಾಧನೆಯ ಹಾದಿಯಲ್ಲಿ ಎದುರಾಗುವ ಅಡೆ–ತಡೆಗಳ ಬಗ್ಗೆಯಾಗಲೀ ಗಮನವಿರುವುದಿಲ್ಲ. ಅಡೆ–ತಡೆ, ಟೀಕೆ–ಟಿಪ್ಪಣಿ, ಕೊಂಕು ಮಾತುಗಳು ಏನೇ ಬಂದರೂ ಅವುಗಳನ್ನೆಲ್ಲ ಬದಿಗೆ ಸರಿಸಿ ಮುನ್ನುಗ್ಗುವ ಗುಣ ಸಾಧಕರಿಗೆ ಇರುತ್ತದೆ. ಸೋಮಾರಿಗಳಿಗೆ ಅಡೆ–ತಡೆಗಳ ಬಗ್ಗೆಯೇ ಹೆಚ್ಚು ಗಮನವಿರುತ್ತದೆ. ಟೀಕೆಗಳಿಗೆ ತಲೆಕೆಡಿಸಿಕೊಳ್ಳುವ, ಕಿವಿಯಾಗುವ ಮುಖೇನ ಸ್ವಯಂಪ್ರೇರಿತರಾಗಿ ಯುದ್ಧಕ್ಕೆ ಮೊದಲೇ ಶಸ್ತ್ರ ತ್ಯಾಗ ಮಾಡಿ ಸೋಲೊಪ್ಪಿಕೊಳ್ಳುವ ಮನೋಭಾವ ಸೋಮಾರಿಗಳಿಗೆ ಅಚಲವಾಗಿರುತ್ತದೆ.

ಧೈರ್ಯ ಗುಣ...

ಸಾಧಕರಿಗೆ ಗೆಲುವು–ಸೋಲುಗಳ ಬಗ್ಗೆ ಹೆಚ್ಚು ಗಮನವಿರಲ್ಲ. ಸೋತಾಗ ಕುಗ್ಗದೇ, ಗೆದ್ದಾಗ ಹಿಗ್ಗದೇ ಸಮಚಿತ್ತರಾಗಿ ಉಳಿಯುವ ಗುಣವಿರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಧೈರ್ಯವಾಗಿ ಸಮಾಜವನ್ನು, ಜನರನ್ನು ಎದುರಿಸುವ ಗುಣ ಇರುತ್ತದೆ. ಸೋಲುಗಳಿಂದ ಪಾಠ ಕಲಿತು ಗೆಲುವಿಗಾಗಿ ಮುನ್ನುಗ್ಗುವ ಧೈರ್ಯದ ಗುಣ ಸಾಧಕರಿಗಿರುತ್ತದೆ. ಸೋಮಾರಿಗಳಿಗೆ ಕಠಿಣವಾದ ಪರಿಸ್ಥಿತಿಗಳಿಂದ ನುಣುಚಿಕೊಳ್ಳುವ, ಜವಾಬ್ದಾರಿಗಳಿಂದ ಹಿಂದೆ ಸರಿದು ನಿಲ್ಲುವ ಗುಣ ಇರುತ್ತದೆ. ಧೈರ್ಯದ ಮಾತುಗಳನ್ನಾಡಿದರೂ ಅದು ಉತ್ತರನ ಪೌರುಷದಂತೆ ಬಡಾಯಿ ಕೊಚ್ಚಿಕೊಳ್ಳುವ ಮಾತುಗಳಾಗಿರುತ್ತದೆಯೇ ವಿನಃ ಅದರಿಂದ ಯಾರಿಗೂ ಯಾವುದೇ ಉಪಯೋಗ ಇರುವುದಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ಜನರಾಗಲೀ, ಸಮಾಜವಾಗಲೀ ನೆನಪಲ್ಲಿಟ್ಟುಕೊಳ್ಳುವುದು ಸಾಧಕರನ್ನೇ ವಿನಃ, ಸೋಮಾರಿಗಳನ್ನಲ್ಲ. ಇಷ್ಟನ್ನು ಹೇಳಿದ ಮೇಲೆ ಸಾಧನೆಯ ಹಾದಿಯಲ್ಲಿ ಸಾಗುವುದೋ ಸೋಮಾರಿತನದ ಬಂಧನದಲ್ಲಿ ತಳವೂರಿ ಸೋಮಾರಿಯಾಗಿ ಉಳಿಯುವುದೋ ಆಯ್ಕೆ ಮಾತ್ರ ನಿಮ್ಮೆದುರಿಗೆ ಇದೆ. ಯಾವುದು ಬೇಕೆಂಬುದನ್ನು ಈ ಕ್ಷಣವೇ ನಿರ್ಧರಿಸಿಕೊಳ್ಳಿ, ಬೇಕಾದುದ್ದನ್ನು ಆರಿಸಿಕೊಂಡು ಒಪ್ಪಿ, ಅಪ್ಪಿ ಬರಮಾಡಿಕೊಳ್ಳಿ, ವಿಪುಲವಾದ ಅವಕಾಶಗಳಿವೆ, ಆಯ್ಕೆಗಳು ಇವೆ ಆಲೋಚಿಸಿ !

ಸಾಧಕರು ಮತ್ತು ಸೋಮಾರಿಗಳು ಎಂಬುದು ಕೇವಲ ಇಬ್ಬರ ಜೀವನಶೈಲಿಯ ವ್ಯತ್ಯಾಸವಲ್ಲ; ಅದು ಜೀವನದ ಯಶಸ್ಸು ಮತ್ತು ವಿಫಲತೆಯ ನಡುವಿನ ಅಂತರವನ್ನು ತೋರಿಸುವ ಪ್ರತಿಬಿಂಬವಾಗಿದೆ. ಸಾಧಕರು ಸಮಯದ ಮೌಲ್ಯವನ್ನು ಅರಿತು ಪರಿಶ್ರಮ, ಶಿಸ್ತು, ಆತ್ಮವಿಶ್ವಾಸ ಮತ್ತು ಧೈರ್ಯದ ಮೂಲಕ ತಮ್ಮ ಗುರಿಯನ್ನು ಸಾಧಿಸುತ್ತಾರೆ. ಅವರು ಸವಾಲುಗಳನ್ನು ಹೆದರದೆ ಎದುರಿಸಿ, ವಿಫಲತೆಯನ್ನೂ ಪಾಠವನ್ನಾಗಿ ಮಾಡಿಕೊಂಡು ಮುಂದುವರೆಯುತ್ತಾರೆ. ಅವರ ಜೀವನದಲ್ಲಿ ಕನಸುಗಳಿಗೆ ಕ್ರಿಯೆಯ ಬೆಂಬಲವಿರುತ್ತದೆ. ಆದ್ದರಿಂದಲೇ ಅವರು ಸಮಾಜಕ್ಕೆ ಮಾದರಿಯಾಗುತ್ತಾರೆ.

ಹೀಗಾಗಿ ಪ್ರತಿಯೊಬ್ಬರೂ ಸಾಧಕರ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಪರಿಶ್ರಮ, ಸಮಯಪಾಲನೆ ಹಾಗೂ ಸಕಾರಾತ್ಮಕ ಚಿಂತನೆಗಳನ್ನು ಜೀವನದ ಭಾಗವಾಗಿಸಿಕೊಳ್ಳಬೇಕು. ಏಕೆಂದರೆ ಸಾಧನೆಯ ದಾರಿ ಸುಲಭವಲ್ಲ; ಆದರೆ ಅದನ್ನು ಆರಿಸಿಕೊಂಡವರ ಬದುಕು ಮಾತ್ರ ಅರ್ಥಪೂರ್ಣವಾಗುತ್ತದೆ. 'ಆಲಸ್ಯ ಮನುಷ್ಯನ ಶತ್ರು, ಪರಿಶ್ರಮ ಅವನ ಯಶಸ್ಸಿನ ಮಿತ್ರ' ಎಂಬ ಸತ್ಯವನ್ನು ಅರಿತು, ನಾವು ಸಾಧಕರ ದಾರಿಯಲ್ಲಿ ನಡೆದು ನಮ್ಮ ಜೀವನವನ್ನು ಸಾರ್ಥಕಗೊಳಿಸಬೇಕು.

ನಂಬಬೇಡ ಹಣೆಯ ಬರಹ
ನಂಬಿದರೆ ನಂಬು ನೀನು
ಬೆವರಲ್ಲಿ ಬರೆದ ಬರಹ
ಬೆರಗಾಗಿ ನೋಡುವುದು ಜಗವು
ನಿನ್ನ ಸಾಧನೆಗೆ ಧನ್ಯತೆಯ ಬರಹ
ಸೋಮಾರಿಗೆಲ್ಲಿದೆ ನುಡಿ ನಮನ
ಸಾಧಕನಿಗೆ ಸಾವಿರದ ವರಹ
ವಂದಿಸಿ ನಮಿಸುವಾಗ ಮನಕೆ ಆಹ್ಲಾದ...

ಬಸವಣ್ಣನವರು ಕಾಯಕ ಸಿದ್ಧಾಂತದ ಮೂಲಕ ದುಡಿದು ಜೀವನ ಕಟ್ಟಿಕೊಳ್ಳುವುದ ಪ್ರತಿಪಾದಿಸಿದ್ದರು

ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಅಭಿಮತ

ಮೈಸೂರು, ಮೇ 24(ಎಸ್‌ಪಿಎನ್)– ಎಲ್ಲರೂ ದುಡಿದು ಜೀವನ ಕಟ್ಟಿಕೊಳ್ಳಬೇಕು ಎಂದು 12ನೇ ಶತಮಾನದಲ್ಲೇ ಬಸವಣ್ಣನವರು ಕಾಯಕವೇ ಕೈಲಾಸವೆಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದರು ಎಂದು ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಬಸವ ಜಯಂತಿ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ನಾವು ಆಯ್ದುಕೊಳ್ಳುವ ವೃತ್ತಿಯನ್ನು ನಿಷ್ಠೆ, ಪ್ರಾಮಾಣಿಕತೆ ಹಾಗೂ ಸಮರ್ಪಣಾಭಾವದಿಂದ ಮಾಡಬೇಕು. ಆಗ ಮಾತ್ರ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯ. ಬಸವಣ್ಣನವರು ಕಾಯಕ ಸಿದ್ಧಾಂತವನ್ನು ನಮ್ಮ ದೇಶದ ಪ್ರತಿಯೊಬ್ಬ ಯುವಕರು ಅಳವಡಿಸಿಕೊಳ್ಳಬೇಕು. ಜೆಎಸ್‌ಎಸ್ ಪ್ರಸ್ತುತ ಶಿಕ್ಷಣಕ್ಕೆ ಸೀಮಿತವಾಗದೇ ಎಲ್ಲಾ ರಂಗದಲ್ಲೂ ತನ್ನ ಛಾಪು ಮೂಡಿಸಿದೆ. ಸಂಗೀತ, ಸಾಹಿತ್ಯ, ಚಿತ್ರಕಲೆ, ಆರೋಗ್ಯ ಸೇರಿದಂತೆ ಸರ್ವವಿಧದಲ್ಲೂ ವಿದ್ಯಾರ್ಥಿಗಳಿಗೆ ಧಾರೆ ಎರೆದು ನಮ್ಮ ನೆಲದ ಸಂಸ್ಕೃತಿಯನ್ನು ಉಳಿಸುತ್ತಿದೆ ಎಂದರು.



ಬಸವ ಜಯಂತಿ ಹಾಗೂ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ ಉದ್ಘಾಟಿಸಿದರು.

ಜೆಎಸ್‌ಎಸ್ ವಿದ್ಯಾಸಂಸ್ಥೆ ಪ್ರಪಂಚದಲ್ಲಿ ಖ್ಯಾತಿ ಪಡೆದಿದ್ದು, ಬಡವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಿ, ಒಳ್ಳೆ ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗುತ್ತಿದೆ ಎಂದು ಹೇಳಿದರು.

ಹಿರಿಯ ಸಾಹಿತಿ ಡಾ.ಕೆ.ಅನಂತರಾಮು ಮಾತನಾಡಿ, 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣ ಅವರು ಸಮಾನತೆ, ಕಾಯಕ ಸಿದ್ಧಾಂತ ಹಾಗೂ ದಾಸೋಹ ತತ್ವಗಳ ಮೂಲಕ ಸಮಾಜದಲ್ಲಿ ಹೊಸ ಕ್ರಾಂತಿಗೆ ಮುನ್ನುಡಿ ಬರೆದಿದ್ದರು ಎಂದರು.

ವೇದಿಕೆಯಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಬಳಿಕ ವಿದ್ವಾನ್ ಬಳ್ಳಾರಿ ಎಂ.ರಾಘವೇಂದ್ರ ಅವರಿಂದ ವಚನಗಾಯನ ನಡೆಸಿಕೊಟ್ಟರು. ಇವರೊಂದಿಗೆ ವಿದ್ವಾನ್ ಬಿ.ಕೆ.ರಘು (ವಯೋಲಿನ್), ವಿದ್ವಾನ್ ತುಮಕೂರು ಬಿ.ರವಿಶಂಕರ್ (ಮೃದಂಗ), ವಿದ್ವಾನ್ ಎಂ.ಆರ್. ಮೋಹನ್ ಅವರು ಮೋರ್ಸಿಂಗ್ ನುಡಿಸಿ ವಚನ ಗಾಯನಕ್ಕೆ ಮೆರಗು ನೀಡಿದರು.

ಸಂವಾದ ಕಾರ್ಯಕ್ರಮ

ಮೈಸೂರು: ಮೈಸೂರಿನ ನನ್ನವ್ವ ಸಾಂಸ್ಕೃತಿಕ ಕಲಾತಂಡದ ವತಿಯಿಂದ 'ಹೆಚ್ಚಾದ ವಿಚ್ಛೇದನ' ಎಂಬ ವಿಷಯ ಕುರಿತ ಸಂವಾದ ಕಾರ್ಯಕ್ರಮವನ್ನು ಜೂ.1ರಂದು ನಮನ ಕಲಾ ಮಂಟಪದಲ್ಲಿ ಬೆಳಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಸಂವಾದ, ಕವಿತೆ ವಾಚಿಸಲು ಇಚ್ಛಿಸುವವರು ಮೇ 27ರೊಳಗೆ ತಮ್ಮ ಹೆಸರು ನೋಂದಾಯಿಸಬೇಕು. ಮಾಹಿತಿಗೆ ಮೊ: 97418 34156, 9964256477 ಸಂಪರ್ಕಿಸಿ.

ಅರ್ಜಿ ಆಹ್ವಾನ

ಮೈಸೂರು: ಹರೀಶ್‌ರೆಡ್ಡಿ ಸ್ನೇಹ ಬಳಗದಿಂದ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.80ರಷ್ಟು ಅಂಕಪಡೆದ ಮೈಸೂರು ಜಿಲ್ಲೆಯ ಸವಿತಾ ಸಮಾಜದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಸವಿತಾ ಸಮಾಜದ ವಿದ್ಯಾರ್ಥಿಗಳು ಜೂ.10ರೊಳಗೆ ತಮ್ಮ ದಾಖಲಾತಿಗಳನ್ನು ಸಲ್ಲಿಸಬೇಕು. ಮಾಹಿತಿಗೆ ಮೊ: 9448245978 ಸಂಪರ್ಕಿಸಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ನಗರ ಪಾಲಿಕೆ ಘಟಕಕ್ಕೆ ಚುನಾವಣೆ

ನೂತನ ಅಧ್ಯಕ್ಷರಾಗಿ ಕೆ.ಎಸ್.ಪ್ರಕಾಶ್ ಆಯ್ಕೆ

- 10 ಮಂದಿ ಮಹಿಳಾ ನಿರ್ದೇಶಕರು ಅವಿರೋಧ ಆಯ್ಕೆ
- 20 ಮಂದಿ ಪುರುಷರು ನಿರ್ದೇಶಕರಾಗಿ ಆಯ್ಕೆ



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ನಗರ ಪಾಲಿಕೆ ಘಟಕದ ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಕೆ.ಎಸ್.ಪ್ರಕಾಶ್ ಆಯ್ಕೆಯಾಗಿದ್ದು, ಇವರೊಂದಿಗೆ 20 ಮಂದಿ ನಿರ್ದೇಶಕರು, 10 ಮಹಿಳಾ ನಿರ್ದೇಶಕರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮೇ 24(ಎಸ್‌ಪಿಎನ್)– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ನಗರ ಪಾಲಿಕೆ ಘಟಕದ ಅಧ್ಯಕ್ಷರಾಗಿ ಸ್ಥಾನಕ್ಕೆ ಕೆ.ಎಸ್.ಪ್ರಕಾಶ್ 1088 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ.



ಕೆ.ಎಸ್.ಪ್ರಕಾಶ್

ಮೈಸೂರಿನ ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಶಾಲಾ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಕೆ.ಎಸ್.ಪ್ರಕಾಶ್‌ಅವರು ಆಯ್ಕೆಯಾಗಿದ್ದು, ಇವರ ಪ್ರತಿಸ್ಪರ್ಧಿಗಳಾದ ಎಸ್.ಶಿವಕುಮಾರ್ 74, ಎಸ್.ಆರ್.ಶಿವಕುಮಾರ್ 178 ಮತಗಳನ್ನು ಪಡೆದು ಸೋಲು ಅನುಭವಿಸಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಚಲಾವಣೆಗೊಂಡ ಮತಗಳಲ್ಲಿ 35 ಮತಗಳು ತಿರಸ್ಕೃತಗೊಂಡಿವೆ.

ಅಲ್ಲದೆ ನಗರ ಪಾಲಿಕೆ ಘಟಕದ ನಿರ್ದೇಶಕರಾಗಿ ಎಚ್.ಎನ್.ಕಿಶೋರ್ ಕುಮಾರ್(980), ಪಿ.ಜಿ.ಮಹದೇವ ಸ್ವಾಮಿ (979), ಕೆ.ವಿ.ಗೌರಿಶಂಕರಸ್ವಾಮಿ (964), ಎಸ್.ಎಂ.ಸುರೇಶ್(961), ಎಂ.ಎಸ್.ಅರುಣ್(956), ಬಿ.ಆರ್.ಶಿವ ಕುಮಾರ್ (944), ಎಂ.ನಾಗೇಂದ್ರ ಮೂರ್ತಿ (937), ಪ್ರತಿಧ್ವನಿ ಪ್ರಸಾದ್ (933), ಎನ್.ಮಹೇಶ್(932), ಎನ್.ಶ್ರೀಕಂಠಮೂರ್ತಿ (926), ಜಿ.ಎಂ.ಪಂಚಾಕ್ಷರಿ (910), ಪಿ.ಗೌರಿಶಂಕರ ಸ್ವಾಮಿ (901), ಸಿ.ಆರ್.ವಿರೂಪಾಕ್ಷ (892), ಜೆ.ಪಿ.ನಿಂಗರಾಜು (888), ಟಿ.ಆರ್.ಹರೀಶ್‌ಕುಮಾರ್ (859), ಬಿ.ಸಿ.ಷಡಕ್ಷರಿ ಸ್ವಾಮಿ (830), ಜಿ.ಸಿ.ಸುರೇಶ್ (809), ಶಿವಮೂರ್ತಿ(808), ಪಿ.ಎಸ್.ಶ್ರೀಕಂಠ ಸ್ವಾಮಿ (808), ಶಶಿಕಿರಣ್ 803 ಮತಗಳನ್ನು ಗಳಿಸಿದ್ದಾರೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ನಗರ ಪಾಲಿಕೆ ಘಟಕದ ಚುನಾವಣಾಧಿಕಾರಿ ಘೋಷಿಸಿದ್ದಾರೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ನಗರ ಪಾಲಿಕೆ ಘಟಕದ 10 ಮಹಿಳಾ ನಿರ್ದೇಶಕ ಸ್ಥಾನಕ್ಕೆ ಬಿ.ಎಸ್.ಉಷಾ, ಚಂದ್ರಕಲಾ, ಬಿ.ಪಿ.ಪದ್ಮಾವತಿ, ಎಂ.ಸಿ.ವನಜಾಕ್ಷಿ, ಎ.ಜಿ.ಭವಾನಿ, ಎಂ.ಎಸ್.ಭಾರತಿ, ಎಂ.ಎಸ್.ಸುಶ್ಮಿತಾ, ಡಿ.ಶಾಂತಾ, ಟಿ.ಶಿಲ್ಪ, ಶಿವಮ್ಮ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಗರ ಘಟಕದ ಅಧ್ಯಕ್ಷರಾಗಿ ಆಯ್ಕೆಗೊಂಡ ಕೆ.ಎಸ್.ಪ್ರಕಾಶ್ ಮಾಧ್ಯಮಗಳೊಂದಿಗೆ ಮಾತನಾಡಿ, ನನ್ನ ಮತ್ತು ನಮ್ಮ ತಂಡದ ಮೇಲೆ ವಿಶ್ವಾಸದಿಂದ ಸಮುದಾಯದ ಮತದಾರರು ದೊಡ್ಡ ಅಂತರದಲ್ಲಿ ಗೆಲ್ಲಿಸಿದ್ದಾರೆ. ಅವರ ವಿಶ್ವಾಸಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಸಮುದಾಯ ಸಂಘಟಿಸಲು ಪ್ರಯತ್ನಿಸುತ್ತೇನೆ. ಸಮುದಾಯದ ಆಶಯಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ಹೆಚ್ಚಿನ ಆದ್ಯತೆ ನೀಡುತ್ತೇನೆ. ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಸೌಲಭ್ಯಗಳನ್ನು ಎಲ್ಲಾ ಯುವಕರಿಗೂ ತಲುಪಿಸಲು ಪ್ರಯತ್ನಿಸುತ್ತೇನೆ. ರಾಜಕುಮಾರ್ ರಸ್ತೆಯಲ್ಲಿ ಕಟ್ಟುತ್ತಿರುವ ಬಸವ ಭವನ ನಿರ್ಮಾಣಕ್ಕೆ ಸಾಧ್ಯವಾದಷ್ಟು ಹಣಕಾಸಿನ ನೆರವಿಗೆ ಪ್ರಯತ್ನಿಸುವೆ. ಸಮುದಾಯದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಹಾಗೂ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಮೈಸೂರು ತಾಲೂಕು ಅಧ್ಯಕ್ಷರಾಗಿ ಈರನಕೊಪ್ಪಲಿನ ಕಾವಿಬಸಪ್ಪ ಆಯ್ಕೆ



ಮೈಸೂರು, ಮೇ 24(ಎಸ್‌ಪಿಎನ್)–ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ತಾಲೂಕು ಘಟಕದ ಅಧ್ಯಕ್ಷರಾಗಿ ಸ್ಥಾನಕ್ಕೆ ಈರನಕೊಪ್ಪಲಿನ ಕಾವಿಬಸಪ್ಪ 1045 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಮೈಸೂರಿನ ಅಗ್ರಹಾರ ಶ್ರೀ ನಟರಾಜ ಕಲ್ಯಾಣಮಂಟಪದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಕಾವಿ ಬಸಪ್ಪ ಅವರು ಆಯ್ಕೆಯಾಗಿದ್ದು, ಅಧ್ಯಕ್ಷ ಸ್ಥಾನಕ್ಕೆ ಚಲಾವಣೆಗೊಂಡ ಮತಗಳಲ್ಲಿ 80 ಮತಗಳು ತಿರಸ್ಕೃತಗೊಂಡಿವೆ. 7 ಮಂದಿ ಮಹಿಳಾ ನಿರ್ದೇಶಕರಾದ ಕಮಲಾಕ್ಷಿ, ನೇತ್ರಾವತಿ, ಜಿ.ವಿ.ಭಾರತಿ, ಲಲಿತ, ಎಸ್.ಸವಿತಾ, ಸುನಿತಾ, ಶ್ವೇತರಾಣಿ ಅವಿರೋಧ ಆಯ್ಕೆಯಾಗಿದ್ದು, ಇನ್ನುಳಿದ 13 ಮಂದಿ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯ ಮತ ಏಣಿಕೆ ಮುಂದುವರೆದಿದೆ.

ಅಭಿನಂದನೆ....



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ನಗರ ಪಾಲಿಕೆ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ಕೆ.ಎಸ್.ಪ್ರಕಾಶ್, ನಿರ್ದೇಶಕರಾಗಿ ಆಯ್ಕೆಯಾದ ಬಿ.ಸಿ.ಪಂಚಾಕ್ಷರಿ, ಕೆ.ವಿ.ಗೌರಿಶಂಕರ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಶೇಖರ್, ರವಿ ಕೈಸರ್ ಕುಮಾರ್ ಮತ್ತು ಸ್ನೇಹಿತರನ್ನು ಕಾಣಬಹುದು.

ವಿದ್ಯಾರ್ಥಿ ನಿಲಯಕ್ಕೆ ಕೇಂದ್ರ ಸಚಿವರಿಂದ ಅನುದಾನ

ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಮಾಹಿತಿ



ಕಾರ್ಯಕ್ರಮವನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಮಂಡ್ಯ, ಮೇ 24– ಗಂಗಾಮತಸ್ಥರ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ 1 ಕೋಟಿ ರೂ. ನೀಡುವುದಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಘೋಷಿಸಿದ್ದಾರೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿದರು.

ನಗರದಲ್ಲಿ ಗಾಂಧಿ ಭವನದಲ್ಲಿ ಜಿಲ್ಲಾ ಶ್ರೀನಿಜಶರಣ ಅಂಬಿಗರ ಚೌಡಯ್ಯ ಸೌಹಾರ್ದ ಸಹಕಾರಿ ಸಂಘ, ಮಂಡ್ಯ ತಾಲೂಕು ಮಹಿಳಾ ಗಂಗಾಮತಸ್ಥರ ಬೆಸ್ತರ ಸಂಘ ಆಯೋಜಿಸಿದ್ದ ನೂತನ ಸೌಹಾರ್ದ ಸಹಕಾರಿ ಸಂಘದ ಕಾರ್ಯಾಲಯಕ್ಕೆ ಚಾಲನೆ ಮತ್ತು ಶ್ರೀಗಂಗಾ ಪ್ರತಿಭಾ ಪುರಸ್ಕಾರ–ಸಾಧಕರಿಗೆ ಅಭಿನಂದನೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸಚಿವರು ಸಿಆರ್‌ಎಸ್ ಫಂಡ್‌ನಲ್ಲಿ ತಕ್ಷಣಕ್ಕೆ 10 ಲಕ್ಷ ರೂ. ಬಿಡುಗಡೆ ಮಾಡಿ, ಗಂಗಾಮತಸ್ಥರ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ನೆರವಾಗಿದ್ದಾರೆ. ಸ್ಥಳೀಯ ಶಾಸಕರು ತಮ್ಮ ಅನುದಾನ ನೀಡುವ ಭರವಸೆ ನೀಡಿರುವ ವಿಚಾರವನ್ನು ಸಂಘವು ತಿಳಿಸಿದೆ ಎಂದು ನುಡಿದರು.

ಮುಂದಿನ ದಿನಗಳಲ್ಲಿ ಎಲ್ಲರೂ ಜವಾಬ್ದಾರಿಯಿಂದ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತೇವೆ. ಸಮುದಾಯಗಳ ಅಭಿವೃದ್ಧಿಗೆ ಕಾಳಜಿ ವಹಿಸಿರುವ ನಿಮ್ಮೆಲ್ಲರ ಆಶಯಗಳು ಈಡೇರಲಿವೆ ಎಂದರು.

ಗಂಗಮತಸ್ಥ–ಬೆಸ್ತರ್ ಸಮುದಾಯವನ್ನು ಎಸ್‌ಟಿ ಮೀಸಲು ಪಟ್ಟಿಗೆ ಸೇರಿಸಬೇಕೆನ್ನುವ ಹೋರಾಟ ಹಲವು ವರ್ಷಗಳಿಂದ ನಡೆಯುತ್ತಿದೆ. ಕೇಂದ್ರ ಸರ್ಕಾರ ಮತ್ತು ಕೇಂದ್ರ ಸಚಿವರ ಗಮನ ಸಳೆದು ಈ ಮಾಹಿತಿಯನ್ನು ಮತ್ತೊಮ್ಮೆ ಪ್ರಸ್ತಾಪಿಸುತ್ತೇವೆ ಎಂದು ಭರವಸೆ ನೀಡಿದರು.

ಸಮುದಾಯ ಆರ್ಥಿಕವಾಗಿ ಬೆಳೆಯಲು ಹಣಕಾಸಿನ ಸಾಲ ಸೌಲಭ್ಯಕ್ಕಾಗಿ ಸಹಕಾರ ಸಂಘ ನೆರವಾಗಲಿದೆ. ಪ್ರತಿಭಾವಂತ ವಿದ್ಯಾರ್ಥಿಗಳು ಸಮುದಾಯಗಳ ಆಸ್ತಿಯಾಗಿ ರೂಪುಗೊಳ್ಳಲಿ ಎಂದು ಆಶಿಸಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಅಲ್ಲದೇ ಸಾಧಕರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಬಿ.ಲಿಂಗಯ್ಯ, ಜಿಲ್ಲಾ ಗಂಗಾಮತಸ್ಥರ ಸಂಘದ ಅಧ್ಯಕ್ಷ ಎಸ್.ರಮೇಶ್, ಕರ್ನಾಟಕ ಪ್ರದೇಶ ಹಿಂದುಳಿದ ವರ್ಗಗಳ ಮಹಾ ಒಕ್ಕೂಟ ರಾಜ್ಯಾಧ್ಯಕ್ಷ ಡಾ.ಡಿ.ಜಯರಾಮು, ಮಹಿಳಾ ಗಂಗಾಮತಸ್ಥರ ಬೆಸ್ತರ ಸಂಘ ಅಧ್ಯಕ್ಷೆ ಹೊಳಲು ಲಿಂಗರಾಜಮ್ಮ, ಪದಾಧಿಕಾರಿಗಳಾದ ಹೆಚ್.ಎಸ್.ಉಮೇಶ್‌ಹಾಡ್ಯ, ಈರಯ್ಯ, ಕನ್ನಂಬಾಡಿ ಕುಮಾರ್, ಹೊನ್ನಪ್ಪ ಮತ್ತಿತರರಿದ್ದರು.

ಮಂಡ್ಯ ಜಿಲ್ಲಾ ಸಹಕಾರ ಒಕ್ಕೂಟಕ್ಕೆ ನಿರ್ದೇಶಕರ ಆಯ್ಕೆ



ನೂತನ ನಿರ್ದೇಶಕರಾದ ಸಿ.ಶಿವಕುಮಾರ್, ರಾಮಕೃಷ್ಣೇಗೌಡರನ್ನು ಮುಖಂಡರು ಅಭಿನಂದಿಸಿದರು.

ಪಾಂಡವಪುರ, ಮೇ 24– ಮಂಡ್ಯ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾಗಿ ತಾಲೂಕಿನ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಹಾಗೂ ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ ಆಯ್ಕೆಯಾಗಿದ್ದಾರೆ.

ಪಾಂಡವಪುರ ಉಪ ವಿಭಾಗದ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ನಿರ್ದೇಶಕರಾಗಿ ಸಿ.ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾದರೇ, ಪಾಂಡವಪುರ ತಾಲೂಕಿನ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ನಿರ್ದೇಶಕರಾಗಿ ರಾಮಕೃಷ್ಣೇಗೌಡ ಚುನಾಯಿತರಾದರು.

ಪಾಂಡವಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರಕ್ಕೆ 2 ನಾಮಪತ್ರ ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರಾಮಕೃಷ್ಣೇಗೌಡ 9 ಮತಗಳನ್ನು ಪಡೆದು ನಿರ್ದೇಶಕರಾಗಿ ಆಯ್ಕೆಯಾದರೇ, ರೈತ ಸಂಘ ಬೆಂಬಲಿತ ಅಭ್ಯರ್ಥಿ ರವಿ 3 ಮತಗಳನ್ನು ಪಡೆದು ಪರಾಭವಗೊಂಡರು.

ಪಾಂಡವಪುರ ತಾಲೂಕಿನ ಪ್ರಾಥಮಿಕ ಕೃಷಿ ಕ್ಷೇತ್ರದಿಂದ ಆಯ್ಕೆಯಾದ ರಾಮಕೃಷ್ಣೇಗೌಡ ಹಾಗೂ ಪಾಂಡವಪುರ ಉಪ ವಿಭಾಗದ ಹಾಲು ಉತ್ಪಾದಕರ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾದ ಸಿ.ಶಿವಕುಮಾರ್ ಅವರನ್ನು ಹಾಗೂ ಜಿಲ್ಲೆಯಿಂದ ಜಿಲ್ಲಾ ಸಹಕಾರ ಒಕ್ಕೂಟಕ್ಕೆ ಆಯ್ಕೆಯಾದ ಎಲ್ಲಾ ಜೆಡಿಎಸ್ ಬೆಂಬಲಿತ ಎಲ್ಲಾ ನಿರ್ದೇಶಕರನ್ನು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಅಭಿನಂದಿಸಿದರು. ಮುಖಂಡರು, ಕಾರ್ಯಕರ್ತರು ಇಬ್ಬರು ನೂತನ ನಿರ್ದೇಶಕರನ್ನು ಸನ್ಮಾನಿಸಿ ಅಭಿನಂದಿಸಿದರು.

ನಾಟನಹಳ್ಳಿ ಡೇರಿಗೆ ನಿರ್ದೇಶಕರ ಆಯ್ಕೆ



ನಾಟನಹಳ್ಳಿ ಡೇರಿ ನಿರ್ದೇಶಕರು ಪ್ರಮಾಣ ಪತ್ರ ಪ್ರದರ್ಶಿಸಿದರು.

ಕೆಆರ್.ಪೇಟೆ, ಮೇ 24– ತಾಲೂಕಿನ ಹೇಮಗಿರಿ ನಾಟನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯ 11 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 6 ಅಭ್ಯರ್ಥಿಗಳು ಜಯ ಗಳಿಸುವ ಮೂಲಕ ನಿರ್ದೇಶಕರಾಗಿ ಆಯ್ಕೆಯಾದರೇ, ಮನ್‌ಮುಲ್ ನಿರ್ದೇಶಕ ಡಾಲು ರವಿ ಬಣದ ಐವರು ಗೆಲುವು ಸಾಧಿಸಿದ್ದಾರೆ.

ಡೇರಿ ಚುನಾವಣೆಯಲ್ಲಿ ಮಂಜುನಾಥ್ ನಾಯಕ ಅವಿರೋಧವಾಗಿ ಆಯ್ಕೆಯಾದರೇ, ನಂತರ ನಡೆದ ಚುನಾವಣೆಯಲ್ಲಿ ಎನ್.ಜಿ.ಹೇಮಂತ್, ಎನ್.ಕೆ.ಮೂರ್ತಿ, ಎನ್.ಎ.ಯೋಗೇಶ್, ಎನ್.ಟಿ.ಹರೀಶ್, ಎನ್.ಕೆ.ಜಯಪ್ರಕಾಶ್, ಎನ್.ಜೆ.ಪಾಂಡು, ಶಂಭುಲಿಂಗಾಚಾರಿ, ಸುನೀಲ್, ಎನ್.ಎನ್.ಸಹನಾ, ಹೆಚ್.ಜಿ.ಬಿಂದು ಜಯಗಳಿಸುವ ಮೂಲಕ ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಅಧಿಕಾರಿ ಶೋಭಾ ಕಾರ್ಯ ನಿರ್ವಹಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ಶಿವಕುಮಾರ್ ಕಾರ್ಯ ನಿರ್ವಹಿಸಿದರು.

ಸಂಘದ ನೂತನ ನಿರ್ದೇಶಕರನ್ನು ಶಾಸಕ ಹೆಚ್.ಟಿ.ಮಂಜು, ತಾಲೂಕು ಜೆಡಿಎಸ್ ಅಧ್ಯಕ್ಷ ಮೋಹನ್, ಕಾರ್ಯಾಧ್ಯಕ್ಷ ಮೆಣಸ ಮಹಾದೇವೇಗೌಡ, ಮನ್‌ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ.ಹರೀಶ್, ಜೆಡಿಎಸ್ ಮುಖಂಡರಾದ ಅಣ್ಣೇಗೌಡ, ಎನ್.ಸಿ.ರಾಮೇಗೌಡ, ಗ್ರಾಪಂ ಸದಸ್ಯ ಎನ್.ಕೆ.ಶಂಕರ್, ಗ್ರಾಪಂ ಮಾಜಿ ಅಧ್ಯಕ್ಷ ಎನ್.ಬಿ.ಅಶ್ವತ್, ಎನ್.ಆರ್.ನಾಗರಾಜು, ಎನ್.ಟಿ.ಗೋಪಾಲ್, ಎನ್.ಎಸ್.ಬಸವರಾಜು, ಜೆಡಿಎಸ್ ಯುವ ಮುಖಂಡ ದಿಲೀಪ್, ಎನ್.ಜೆ.ಮಂಜು, ಗ್ರಾಮದ ಕಾಂಗ್ರೆಸ್ ಮುಖಂಡರಾದ ವೆಂಕಟೇಶ್, ಬೀರುವಳ್ಳಿ ಸೊಸೈಟಿ ಅಧ್ಯಕ್ಷ ಅನಿಲ್ ಕುಮಾರ್, ಎನ್.ಜೆ.ಮಹೇಶ್, ಎನ್.ಕೆ.ವಿಜಿಕುಮಾರ್ ಮತ್ತಿತರರು ಅಭಿನಂದಿಸಿದ್ದಾರೆ.

ಶಿಂಷಾ ನದಿ ಸೇತುವೆ ಬಳಿ ಮೊಸಳೆ ಪ್ರತ್ಯಕ್ಷ

ಹಲಗೂರು, ಮೇ 24– ಇಲ್ಲಿಗೆ ಸಮೀಪದ ತೊರೆಕಾಡನಹಳ್ಳಿ ಗ್ರಾಮದ ಶಿಂಷಾ ನದಿ ಸೇತುವೆ ಬಳಿ ಮೊಸಳೆ ಪ್ರತ್ಯಕ್ಷವಾಗಿದ್ದು, ಸುತ್ತಮುತ್ತಲ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದೆ. ಅಲ್ಲದೇ ಸ್ಥಳೀಯರೊಬ್ಬರು ತಮ್ಮ ಮೊಬೈಲ್‌ನಲ್ಲಿ ಫೋಟೋ ತೆಗೆದಿದ್ದು, ಸಾಮಾಜಿಕ ಜಾಲತಾಣದಲ್ಲಿ ಮೊಸಳೆ ಫೋಟೋ ವೈರಲ್ ಆಗಿದೆ.



ನದಿ ಸೇತುವೆ ಸಮೀಪ ಮೊಸಳೆ ಪ್ರತ್ಯಕ್ಷವಾಗಿದ್ದು, ತೊರೆಕಾಡನಹಳ್ಳಿ ಹಾಗೂ ಪುರದದೊಡ್ಡಿ ಸೇರಿದಂತೆ ನೆರೆಯ ಗ್ರಾಮಗಳ ಜನರಲ್ಲಿ ಭಯದ ವಾತಾವರಣ ಉಂಟಾಗಿದೆ. ಮೊಸಳೆ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ನದಿಗೆ ಇಳಿಯದಂತೆ ಎಚ್ಚರ ವಹಿಸುವಂತೆ ಸ್ಥಳೀಯರು ಮನವಿ ಮಾಡಿದ್ದಾರೆ. ಸ್ಥಳೀಯ ಮುಖಂಡ ಮುನಿರಾಜು ಮಾತನಾಡಿ, ಶಿಂಷಾ ನದಿಯಲ್ಲಿ ಮೊಸಳೆ ಕಾಣಿಸಿಕೊಂಡಿರುವುದರಿಂದ ರೈತರು ಮತ್ತು ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದೆ. ಕೃಷಿ ಚಟುವಟಿಕೆಗಳು, ಜಾನುವಾರುಗಳನ್ನು ತೊಳೆಯುವುದು ಹಾಗೂ ನೀರು ಕುಡಿಸುವುದು ಸೇರಿದಂತೆ ಇನ್ನಿತರ ಕಾರ್ಯಗಳಿಗೆ ನದಿಯನ್ನು ಅವಲಂಬಿಸಿರುವುದರಿಂದ ಅಪಾಯದ ಸಾಧ್ಯತೆ ಇದೆ ಎಂದರು.

ಯಾವುದೇ ಅಹಿತಕರ ಘಟನೆ ಸಂಭವಿಸುವುದನ್ನು ತಪ್ಪಿಸಲು ಸಂಬಂಧಿತ ಇಲಾಖೆ ತಕ್ಷಣ ಕ್ರಮ ಕೈಗೊಂಡು ಮೊಸಳೆ ಹಿಡಿದು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಬೇಕು ಎಂದು ಆಗ್ರಹಿಸಿದರು.

ಇಲ್ಲಿವರೆಗೆ ಸಂಬಂಧಿತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡದಿರುವುದು ಗ್ರಾಮಸ್ಥರಲ್ಲಿ ಅಸಮಾಧಾನಕ್ಕೆ ಕಾರಣವಾಗಿದ್ದು, ಮುನ್ನೆಚ್ಚರಿಕಾ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಮದ್ದೂರಿನ ಶಿವಪುರ ಧ್ವಜ ಸತ್ಯಾಗ್ರಹಕ್ಕೆ

ಸರ್ಕಾರ ಪ್ರಾಧಿಕಾರ ರಚಿಸಿ ಅನುದಾನ ಬಿಡುಗಡೆಗೊಳಿಸಲಿ

ಪ್ರೊ.ಜೆಪಿ ನೇತೃತ್ವದ ಸಭೆಯಲ್ಲಿ ಸಂಘಟನೆಗಳ ಒತ್ತಾಯ



ಸಭೆಯಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್‌ಗೌಡ ಮಾತನಾಡಿದರು.

ಮಂಡ್ಯ, ಮೇ 24– ಮದ್ದೂರಿನ ಐತಿಹಾಸಿಕ ಶಿವಪುರ ಧ್ವಜ ಸತ್ಯಾಗ್ರಹಕ್ಕೆ ಸರ್ಕಾರ ಪ್ರಾಧಿಕಾರ ರಚಿಸಿ ಅನುದಾನ ನೀಡುವ ಮೂಲಕ ನಿರ್ವಹಣೆಗೆ ವಹಿಸಬೇಕು ಎಂದು ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್‌ಗೌಡ ಒತ್ತಾಯಿಸಿದರು.

ನಗರದ ಕರ್ನಾಟಕ ಸಂಘದ ಕಚೇರಿಯಲ್ಲಿ ಜಿಲ್ಲೆಯ ಅಭಿವೃದ್ಧಿ ಕುರಿತಂತೆ ಸಾಹಿತ್ಯಾಸಕ್ತರು, ಪ್ರಗತಿಪರ ಚಿಂತಕರು, ರೈತ ಹಾಗೂ ಕನ್ನಡಪರ ಸಂಘಟನೆಗಳ ಹೋರಾಟಗಾರರ ಸಭೆಯಲ್ಲಿ ಮಾತನಾಡಿದ ಅವರು, ಮದ್ದೂರಿನಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹಚ್ಚಿದ ಶಿವಪುರ ಧ್ವಜ ಸತ್ಯಾಗ್ರಹ ಸೌಧವಿದೆ. ಅದು ನಿರ್ವಹಣೆ ಇಲ್ಲದೆ ಅಭಿವೃದ್ಧಿ ಕೊರತೆ ಎದುರಿಸುತ್ತಿದೆ. ಸೌಧವನ್ನು ಉಳಿಸಿಕೊಳ್ಳುವ ಹಾಗೂ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಾಧಿಕಾರ ಮಾಡಿ ಸಮಿತಿ ರಚಿಸಿ ನಿರ್ವಹಣೆಗೆ ವಹಿಸಬೇಕು ಎಂದು ತಿಳಿಸಿದರು.

ಸಮಸ್ಯೆಗಳ ಪಟ್ಟಿ ಮಾಡಿ: ಸಂಘಟನೆಗಳ ಮುಖಂಡರು ಮಂತ್ರಿ, ಶಾಸಕರ ಮುಂದೆ ಚರ್ಚೆ ನಡೆಸಿದಾಗ ಮುಖಂಡರು ಒಂದೊಂದು ಪ್ರಶ್ನೆ ಮಾಡುತ್ತಾರೆ. ಇದರಿಂದ ಗೊಂದಲ ಉಂಟಾಗುತ್ತದೆ. ಆದ್ದರಿಂದ ನಾವೆಲ್ಲರೂ ಒಗ್ಗಟ್ಟಾಗಿ ಒಂದು ಸಮಿತಿ ರಚಿಸಿ ಆಯಾ ತಾಲೂಕಿನ ಸಮಸ್ಯೆಗಳ ಪಟ್ಟಿ ಮಾಡಬೇಕು. ನಂತರ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಬಳಿ ಚರ್ಚೆ ನಡೆಸಬೇಕು. ಬಳಿಕ ದಿನಾಂಕ ನಿಗದಿ ಮಾಡಿ ಮಂತ್ರಿ, ಶಾಸಕರೊಂದಿಗೆ ಚರ್ಚೆ ನಡೆಸಬೇಕು ಎಂದು ಸಲಹೆ ನೀಡಿದರು.

ಆದ್ಯತೆ ಮೇರೆಗೆ ಅಭಿವೃದ್ಧಿಗೆ ಒತ್ತು: ಜಿಲ್ಲಾ ಮಂತ್ರಿ, ಶಾಸಕರ ಮುಂದೆ ಒಂದೊಂದು ಸಮಸ್ಯೆ ಇಟ್ಟು, ಆದ್ಯತೆ ಮೇರೆಗೆ ಅಭಿವೃದ್ಧಿಗೆ ಒತ್ತು ನೀಡುವಂತೆ ಒತ್ತಾಯಿಸಬೇಕು. ಇದು ಸಾಮೂಹಿಕ ನಾಯಕತ್ವದಲ್ಲೇ ಮಾಡಬೇಕು. ಯಾವುದೇ ಗೊಂದಲಗಳಿಗೆ ಆಸ್ಪದ ನೀಡದಂತೆ ಮುಂದುವರೆಯಬೇಕು. ಆಗ ಅಂದುಕೊಂಡ ಕೆಲಸ ಆಗಲಿದ್ದು, ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡಲು ಸಾಧ್ಯವಾಗಲಿದೆ ಎಂದರು.

ಸಂಘಟನೆಗಳ ವಿಫಲತೆ ಅಭಿವೃದ್ಧಿಗೆ ಹಿನ್ನಡೆ: ಸಂಘಟನೆಗಳು, ಹೋರಾಟಗಾರರು, ಚಳವಳಿಗಳು ಬಲಿಷ್ಠವಾಗಿಲ್ಲ. ಎಲ್ಲಾ ಸಂಘಟನೆಗಳು ಒಡೆದು ಹಂಚಿ ಹೋಗಿವೆ. ನಮ್ಮಲ್ಲಿನ ದೋಷವೇ ಜಿಲ್ಲೆಯ ಅಭಿವೃದ್ಧಿಗೆ ಹಿನ್ನಡೆಯಾಗುತ್ತಿದೆ. ಒಂದೊಂದು ಸಮುದಾಯಕ್ಕೂ ಒಂದು ಜಯಂತಿ ಮಾಡಲಾಗುತ್ತಿದೆ. ಆದರೆ ಯಾವ ಜಯಂತಿ ಆಚರಣೆಗೂ ಸಮುದಾಯಗಳು ಸಂಘಟನೆಗೊಳ್ಳುತ್ತಿಲ್ಲ. ಇದಕ್ಕಾಗಿ ಜಯಂತಿಗಳ ಮಾಡುವ ಅವಶ್ಯಕತೆ ಇದೆಯೇ?. ಎಲ್ಲಾ ಸಮುದಾಯಗಳು ಒಗ್ಗೂಡಿ ಜಯಂತಿಗಳ ಆಚರಿಸಬೇಕು ಎಂದರು.

ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಒಗ್ಗಟ್ಟಿನ ಕೊರತೆ: ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯ, ಕಲೆ ಸೇರಿದಂತೆ ಬಹುತೇಕ ಕ್ಷೇತ್ರಗಳಲ್ಲಿ ಒಗ್ಗಟ್ಟಿನ ಕೊರತೆ ಇದೆ. ಅದರಲ್ಲೂ ಸಾಂಸ್ಕೃತಿ, ಸಾಹಿತ್ಯ ಕ್ಷೇತ್ರದಲ್ಲಿ ಒಗ್ಗಟ್ಟಿಲ್ಲದಂತಾಗಿದೆ. ರೈತ ಸಂಘದವರು ನೀರಾವರಿ, ನಾಲೆ ಸೇರಿದಂತೆ ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸುತ್ತಾರೆ. ಆದರೆ ಸಾಂಸ್ಕೃತಿಕವಾಗಿ ನಮಗೆ ಯಾವುದೇ ಸಂಘಟನೆ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಸಭೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಕೆ.ಟಿ.ಹನುಮಂತು, ಎಸ್.ಕೃಷ್ಣ ಸ್ವರ್ಣಸಂದ್ರ, ಚಲುವರಾಜು, ಡಿ.ಪಿ.ಸ್ವಾಮಿ, ಲೋಕೇಶ್ ಚಂದಗಾಲು, ಸೋಮಶೇಖರ್, ದ.ಕೋ.ಚಂದ್ರಶೇಖರ್, ನಾರಾಯಣ್, ಮ.ಸೋ.ಚಿದಂಬರ್, ಬೆಂಜಮಿನ್ ಥಾಮಸ್ ಸೇರಿದಂತೆ ಮತ್ತಿತರರಿದ್ದರು.

ಒಂದನೇ ಪುಟದಿಂದ

ಶ್ವೇತಭವನದ ಮೇಲೆ ಗುಂಡಿನ ದಾಳಿ

ಮಾಹಿತಿ ಪ್ರಕಾರ, 17ನೇ ಸ್ಟ್ರೀಟ್ ಮತ್ತು ಪೆನ್ಸಿಲ್ವೇನಿಯಾ ಅವೆನ್ಯೂ ಪ್ರದೇಶದಲ್ಲಿ ಸಂಜೆ 6 ಗಂಟೆಯ ನಂತರ ಆ ವ್ಯಕ್ತಿ "ತನ್ನ ಬ್ಯಾಗ್‌ನಿಂದ ಶಸ್ತ್ರಾಸ್ತ್ರ ಹೊರತೆಗೆದು ಗುಂಡಿನ ದಾಳಿ ಆರಂಭಿಸಿದ್ದಾನೆ ಎಂದು ತಿಳಿಸಿದೆ. ಇದಕ್ಕೆ ಪ್ರತಿಯಾಗಿ ಭದ್ರತಾ ಪಡೆಯೋಧರು ಗುಂಡು ಹಾರಿಸಿ ಶಂಕಿತನನ್ನು ಹೊಡೆದಿದ್ದಾರೆ. ಬಳಿಕ ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ, ನಂತರ ಆತ ಮೃತಪಟ್ಟಿದ್ದಾನೆ ಎಂದು ಸೀಕ್ರೆಟ್ ಸರ್ವಿಸ್ ಹೇಳಿದೆ. ತನಿಖೆಯ ಬಗ್ಗೆ ಬಹಿರಂಗವಾಗಿ ಮಾತನಾಡಲು ಅನುಮತಿ ಇಲ್ಲದ ಕಾರಣ ಅನಾಮಧೇಯವಾಗಿರಲು ಬಯಸಿದ ಕಾನೂಅನು ಜಾರಿಗೊಳಿಸುವ ಅಧಿಕಾರಿಯೊಬ್ಬರು, ಶಂಕಿತನನ್ನು 21 ವರ್ಷದ ನಸಿರೆ ಬೆಸ್ಟ್ ಎಂದು ಗುರುತಿಸಿದ್ದಾರೆ.

ಮೂರನೇ ಘಟನೆ: ಕಳೆದ ಏಪ್ರಿಲ್‌ನಲ್ಲಿ ನಡೆದ ವೈಟ್ ಹೌಸ್ ಕರಸ್ಪಾಂಡೆಂಟ್ಸ್ ಅಸೋಸಿಯೇಷನ್ ಡಿನ್ನರ್ ವೇಳೆ ಮತ್ತು ಮೇ ತಿಂಗಳ ಆರಂಭದಲ್ಲಿ ವಾಷಿಂಗ್ಟನ್ ಸ್ಮಾರಕದ ಬಳಿ ನಡೆದ ಗುಂಡಿನ ದಾಳಿಗಳ ಘಟನೆಗಳ ನಂತರ, ಕಳೆದ ಒಂದು ತಿಂಗಳಲ್ಲಿ ಅಧ್ಯಕ್ಷರ ಸಮೀಪ ಗುಂಡಿನ ದಾಳಿ ನಡೆದ ಮೂರನೇ ಘಟನೆ ಇದಾಗಿದೆ. ನಿನ್ನೆ ರಾತ್ರಿ ನಡೆದ ಘಟನೆಯಲ್ಲಿ ಒಬ್ಬ ಪ್ರೇಕ್ಷಕನಿಗೂ ಗುಂಡು ತಗುಲಿತ್ತು. ಆದರೆ ಆತನಿಗೆ ಶಂಕಿತನು ಮೊದಲು ಹಾರಿಸಿದ ಗುಂಡು ತಗುಲಿತೇ ಅಥವಾ ನಂತರ ಅಧಿಕಾರಿಗಳು ಹಾರಿಸಿದ ಗುಂಡು ತಗುಲಿತೇ ಎಂಬುದು ಸ್ಪಷ್ಟವಾಗಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಾನು 'ಯೇಸು' ಎಂದು ಹೇಳಿಕೊಂಡಿದ್ದ

ವಾಷಿಂಗ್ಟನ್: ವೈಟ್ ಹೌಸ್ ಭದ್ರತಾ ತಪಾಸಣಾ ಕೇಂದ್ರದ ಬಳಿ ಗುಂಡಿನ ದಾಳಿ ನಡೆಸಿದ ವ್ಯಕ್ತಿಯನ್ನು, ಪ್ರತಿಯಾಗಿ ಗುಂಡು ಹಾರಿಸಿ ಅಧಿಕಾರಿಗಳು ಹೊಡೆದುರುಳಿಸಿದ್ದು, ಆತ ಮೃತಪಟ್ಟಿದ್ದಾನೆ ಎಂದು ಯುಎಸ್ ಸೀಕ್ರೆಟ್ ಸರ್ವಿಸ್ ತಿಳಿಸಿದೆ. ಕಳೆದ ಒಂದು ತಿಂಗಳ ಅವಧಿಯಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದ್ದಾಗ ಅವರ ಸುತ್ತಮುತ್ತ ನಡೆದ ಮೂರನೇ ಗುಂಡಿನ ದಾಳಿ ಘಟನೆ ಇದಾಗಿದೆ.

ಶಂಕಿತನನ್ನು 21 ವರ್ಷದ ನಸಿರೆ ಬೆಸ್ಟ್ ಎಂದು ಗುರುತಿಸಿದ್ದಾರೆ. ಡಿಸ್ಟ್ರಿಕ್ಟ್ ಆಫ್ ಕೊಲಂಬಿಯಾ ನ್ಯಾಯಾಲಯದ ದಾಖಲೆಗಳ ಪ್ರಕಾರ, 2025ರ ಜುಲೈನಲ್ಲಿ ಬೆಸ್ಟ್ ಮತ್ತೊಂದು ವೈಟ್ ಹೌಸ್ ತಪಾಸಣಾ ಕೇಂದ್ರಕ್ಕೆ ಅನುಮತಿಯಿಲ್ಲದೆ ಪ್ರವೇಶಿಸಲು ಯತ್ನಿಸಿದ್ದಕ್ಕಾಗಿ ಬಂಧನಕ್ಕೊಳಗಾಗಿದ್ದ. ಅಧಿಕಾರಿಗಳು ನಿಲ್ಲುವಂತೆ ನೀಡಿದ ಸೂಚನೆಗಳನ್ನು ಅವನು ಪಾಲಿಸಿರಲಿಲ್ಲ. ಅಲ್ಲದೆ, ನಾನು ಯೇಸು ಕ್ರಿಸ್ತ ಎಂದು ಹೇಳಿ, ತಾನೇ ಬಂಧನಕ್ಕೊಳಗಾಗಲು ಬಯಸಿದ್ದೇನೆ ಎಂದಿದ್ದ.

ಈ ಪ್ರಕರಣದಲ್ಲಿ ಪ್ರಾಥಮಿಕ ವಿಚಾರಣೆ ನಡೆದಿದ್ದು, ಪ್ರೀ–ಟ್ರಯಲ್ ಸ್ಟೇ ಅವೇ ಆರ್ಡರ್ ಹೊರಡಿಸಲಾಗಿತ್ತು. ಸಾಮಾನ್ಯವಾಗಿ ಈ ಆದೇಶದ ಮೂಲಕ ವಿಚಾರಣೆಗೆ ಮುನ್ನ ಆರೋಪಿಗೆ ನಿರ್ದಿಷ್ಟ ವ್ಯಕ್ತಿ ಅಥವಾ ಪ್ರದೇಶದ ಸಮೀಪ ಹೋಗದಂತೆ ಸೂಚಿಸಲಾಗುತ್ತದೆ. ನಂತರ ಬೆಸ್ಟ್ ವಿರುದ್ಧ ಅನುಸರಣೆ ಇಲ್ಲ ಎಂಬ ನೋಟೀಸ್ ಹೊರಡಿಸಿದ ಬಳಿಕ ಆಗಸ್ಟ್‌ನಲ್ಲಿ ನ್ಯಾಯಾಲಯ ಬಂಧನ ವಾರಂಟ್ ಜಾರಿಗೊಳಿಸಿತ್ತು ಬಳಿಕ ನಡೆದ ವಿಚಾರಣೆಗೆ ಅವನು ಹಾಜರಾಗಿರಲಿಲ್ಲ ಎಂದು ದಾಖಲೆಗಳು ತಿಳಿಸಿವೆ.

ಶೀಘ್ರದಲ್ಲೇ ವಿಶ್ವಕ್ಕೆ 'ಒಳ್ಳೆಯ ಸುದ್ದಿ'

ವಿಶ್ವಕ್ಕೆ ಅತ್ಯಂತ ಸಮಾಧಾನ ತರುವಂತಹ ಸಿಹಿ ಸುದ್ದಿಯೊಂದು ಸಿಗುವ ಸಾಧ್ಯತೆಯಿದೆ ಎಂದು ನಾನು ಭಾವಿಸುತ್ತೇನೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬಿಕ್ಕಟ್ಟನ್ನು ಶಾಂತಿಯುತವಾಗಿ ಕೊನೆಗಾಣಿಸುವ ನಿಟ್ಟಿನಲ್ಲಿ ಮಹತ್ವದ ಪ್ರಗತಿಯಾಗಿದ್ದು, ಈ ಕುರಿತು ಮತ್ತಷ್ಟು ಪ್ರಕಟಣೆಗಳು ಹೊರಬೀಳಬಹುದು ಎಂದು ಹೇಳಿದ್ದಾರೆ.

ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ನಡೆಸಿದ ದಾಳಿಗೆ ಪ್ರತಿಯಾಗಿ ಇರಾನ್ ಸದ್ಯ 'ಸ್ಟ್ರೇಟ್ ಆಫ್ ಹಾರ್ಮುಜ್ (ಹಾರ್ಮುಜ್ ಜಲಸಂಧಿ)' ಸಮುದ್ರ ಮಾರ್ಗವನ್ನು ಸಂಪೂರ್ಣವಾಗಿ ಬಂದ್ ಮಾಡಿದೆ. ಪ್ರಸ್ತುತ ಮಾತುಕತೆ ನಡೆಸಿ ರೂಪಿಸಲಾಗುತ್ತಿರುವ ಹೊಸ ಒಪ್ಪಂದವು ಈ ಜಲಸಂಧಿಯ ಸಮಸ್ಯೆಯನ್ನು ಬಗೆಹರಿಸಲಿದೆ ಎಂದು ರೂಬಿಯೋ ಹೇಳಿದ್ದಾರೆ.

ಯಾವುದೇ ತೆರಿಗೆ ಅಥವಾ ಸುಂಕವಿಲ್ಲದೆ ಈ ಸಮುದ್ರ ಮಾರ್ಗವನ್ನು ಮುಕ್ತವಾಗಿ ಸಂಚಾರಕ್ಕೆ ಬಿಡಬೇಕು ಎಂಬುದು ಅಮೆರಿಕದ ಪ್ರಮುಖ ಷರತ್ತಾಗಿದೆ. ಇರಾನ್ ಯಾವುದೇ ಕಾರಣಕ್ಕೂ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಲು ಅಮೆರಿಕ ಬಿಡುವುದಿಲ್ಲ. ಇರಾನ್ ತನ್ನಲ್ಲಿರುವ ಸಂವರ್ಧಿತ ಯುರೇನಿಯಂ ಅನ್ನು ಒಪ್ಪಿಸಬೇಕು ಹಾಗೂ ಅದರ ಪರಮಾಣು ಕಾರ್ಯಕ್ರಮಗಳ ಮೇಲಿನ ನಿಯಂತ್ರಣದ ಬಗ್ಗೆ ಕಠಿಣ ನಿಲುವು ಮುಂದುವರಿಯಲಿದೆ ಎಂದು ತಿಳಿಸಿದ್ದಾರೆ. ಈ ಒಪ್ಪಂದದ ಮೂಲಕ ಭವಿಷ್ಯದಲ್ಲಿ ಇರಾನ್‌ನ ಪರಮಾಣು ಶಸ್ತ್ರಾಸ್ತ್ರಗಳ ಭೀತಿ ಜಗತ್ತಿಗೆ ಇಲ್ಲದಂತಾಗಲಿದೆ ಎಂದು ಆಶಯ ವ್ಯಕ್ತಪಡಿಸಿದ್ದಾರೆ.

ಇದಕ್ಕೂ ಮುನ್ನ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ 'ಟ್ರೂತ್ ಸೋಶಿಯಲ್' ಜಾಲತಾಣದಲ್ಲಿ ಪೋಸ್ಟ್ ಒಂದನ್ನು ಹಂಚಿಕೊಂಡಿದ್ದರು. ಇರಾನ್ ಜೊತೆಗಿನ ಒಪ್ಪಂದದ ಬಹುತೇಕ ಮಾತುಕತೆಗಳು ಮುಕ್ತಾಯದ ಹಂತಕ್ಕೆ ಬಂದಿದ್ದು, ಅಮೆರಿಕ, ಇರಾನ್ ಮತ್ತು ಇತರ ಕೆಲವು ದೇಶಗಳ ನಡುವೆ ಅಂತಿಮ ಒಪ್ಪಿಗೆ ಸಿಗುವುದಷ್ಟೇ ಬಾಕಿ ಇದೆ ಎಂದು ಬರೆದುಕೊಂಡಿದ್ದರು. ಸದ್ಯ ಇರಾನ್ ಜಲಸಂಧಿಯನ್ನು ಮುಕ್ತಗೊಳಿಸುವ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿದೆ ಎಂದು ವರದಿಯಾಗಿದೆ.

14 ದಿನಗಳ ಬಳಿಕ ಬೋನಿಗೆ ಬಿದ್ದ ಚಿರತೆ



ಚಿರತೆ ಸೆರೆಗೆ ಕಾರ್ಯಾಚರಣೆಯಲ್ಲಿ ತೊಡಗಿದ್ದ ಸಿಬ್ಬಂದಿ

ಸೇರಿ ಹುಡುಕಾಟ ನಡೆಸಿದಾಗ ದಾಳಿ ನಡೆಸಿದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಬಂಡೆಗಳ ಸಂದಿಯಲ್ಲಿ ಬಾಲಕನ ಮೃತ ದೇಹ ಪತ್ತೆಯಾಗಿತ್ತು. ಈ ಘಟನೆ ಯಿಂದಾಗಿ ನಾಗಮಲೆಗೆ ತಾತ್ಕಾಲಿಕವಾಗಿ ಭಕ್ತರ ಪ್ರವೇಶ ನಿರ್ಬಂಧಿಸಲಾಗಿತ್ತು. ಅಲ್ಲದೆ, ದಾಳಿ ನಡೆಸಿದ ಚಿರತೆ ಸೆರೆಗಾಗಿ ತೀವ್ರ ಶೋಧ ನಡೆಸಿದ್ದರೂ ಚಿರತೆ ಮಾತ್ರ ಪತ್ತೆಯಾಗಿರಲಿಲ್ಲ.

20 ಕ್ಯಾಮರಾ, 3 ಥರ್ಮಲ್ ಡ್ರೋನ್, 4 ಬೋನ್ ಬಳಕೆ: ಬಾಲಕನ ಮೇಲೆ ದಾಳಿ ನಡೆಸಿದ ಚಿರತೆ ಸೆರೆಗೆ ಕಾರ್ಯಾಚರಣೆ ಮುಂದುವರೆಸಿದ್ದ ಅರಣ್ಯ ಸಿಬ್ಬಂದಿ ತಂಡ ದಾಳಿ ನಡೆಸಿದ ಸ್ಥಳ ಸೇರಿದಂತೆ ವಿವಿಧೆಡೆ 20 ಕ್ಯಾಮರಾ ಟ್ರ್ಯಾಪ್ ಅಳವಡಿಸಿದ್ದರು. ಅಲ್ಲದೆ, 3 ಥರ್ಮಲ್ ಡ್ರೋನ್ ಬಳಸಿ ಸತತವಾಗಿ ಪರಿಶೀಲನೆ ನಡೆಸಲಾಗುತ್ತಿತ್ತು. ನಾಲ್ಕು ಕಡೆ ಬೋನ್ ಇಡಲಾಗಿತ್ತು. ಅದರಲ್ಲಿ ಒಂದು ತುಮಕೂರು ಮಾದರಿ ಬೋನ್ ಇಡಲಾಗಿತ್ತು. ಥರ್ಮಲ್ ಡ್ರೋನ್ ಹಾಗೂ ಕ್ಯಾಮರಾ ಟ್ರ್ಯಾಪ್‌ಗೆ ಚಿರತೆ ಕಾಣಿಸಿಕೊಂಡಿರಲಿಲ್ಲ. ಮೇ 13ರಂದು ಒಂದು ಕ್ಯಾಮರಾ ಟ್ರ್ಯಾಪ್‌ನಲ್ಲಿ ಚಿರತೆಯ ದೃಶ್ಯ ಸೆರೆ ಸಿಕ್ಕಿತ್ತು. ಅದು ಹೊರತುಪಡಿಸಿದರೆ ಮತ್ತೆ ಎಲ್ಲೂ ಚಿರತೆ ಸುಳಿವು ಸಿಕ್ಕಿರಲಿಲ್ಲ. ಇದು ಅರಣ್ಯ ಇಲಾಖೆಗೆ ತಲೆನೋವಾಗಿ ಪರಿಣಮಿಸಿದ್ದರೆ, ಸ್ಥಳೀಯರಲ್ಲಿ ಆತಂಕ ಮನೆ ಮಾಡಿತ್ತು.

ಆರೋಗ್ಯ ಪರಿಶೀಲನೆ: ಬೋನಿಗೆ ಬಿದ್ದ ಚಿರತೆಯನ್ನು ಮೈಸೂರಿನ ಪಶು ವೈದ್ಯ ಡಾ.ಆದರ್ಶ್ ಅವರು ಚಿರತೆಗೆ ಅರವಳಿಕೆ ಮದ್ದು ನೀಡಿ, ಆರೋಗ್ಯ ಪರಿಶೀಲಿಸಿದರು. ಈ ವೇಳೆ ಸೆರೆ ಸಿಕ್ಕಿರುವ ಚಿರತೆ ಒಂದೂವರೆಯಿಂದ ಎರಡು ವರ್ಷದ ಹೆಣ್ಣು ಚಿರತೆಯಾಗಿದ್ದು, ಆರೋಗ್ಯದಿಂದ ಕೂಡಿದೆ..

ಬನ್ನೇರುಘಟ್ಟಕ್ಕೆ ರವಾನೆ: ಸೆರೆ ಸಿಕ್ಕಿರುವ ಹೆಣ್ಣು ಚಿರತೆಯನ್ನು ಬನ್ನೇರುಘಟ್ಟಕ್ಕೆ ರವಾನಿಸಲಾಗಿದೆ. ಇಂಡಿಗನತ್ತ ಗ್ರಾಮ ದಿಂದ ವಾಹನದಲ್ಲಿ ಮಲೆ ಮಹದೇಶ್ವರ ಬೆಟ್ಟದ ಮೂಲಕ ಬೆಂಗಳೂರಿನ ಬನ್ನೇರುಘಟ್ಟ ಪುನರ್ವಸತಿ ಕೇಂದ್ರಕ್ಕೆ ಕೊಂಡೊಯ್ಯಲಾಯಿತು.

ಸ್ಯಾಂಪಲ್ ಪರಿಶೀಲನೆಗೆ: ಇಂದು ಬೆಳಗ್ಗೆ ಸೆರೆ ಸಿಕ್ಕಿರುವ ಚಿರತೆಯೇ ಬಾಲಕನ ಮೇಲೆ ದಾಳಿ ನಡೆಸಿರುವುದನ್ನು ಖಚಿತಪಡಿಸಿಕೊಳ್ಳಲು ಸ್ಯಾಂಪಲ್ ಸಂಗ್ರಹಿಸಿ ಪರಿಶೀಲನೆಗೆ ಕಳುಹಿಸಲಾಗಿದೆ ಬಾಲಕನ ಮೈಮೇಲಿದ್ದ ಗಾಯದ ಗುರುತು, ಹಲ್ಲಿನಿಂದ ಆದ ಗಾಯದ ಆಳ, ಇಂದು ಸೆರೆ ಸಿಕ್ಕಿರುವ ಚಿರತೆ ಹಲ್ಲಿನ ಉದ್ದ ಸೇರಿದಂತೆ ವಿವಿಧ ಆಯಾಮಗಳಲ್ಲಿ ಪರಿಶೀಲನೆ ಮಾಡಲು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಸ್ಥಳಕ್ಕೆ ಕಾವೇರಿ ವನ್ಯಧಾಮದ ಡಿಸಿಎಫ್ ಸುರೇಂದ್ರ ಬೇಟಿ ನೀಡಿ ಪರಿ ಶೀಲಿಸಿದರು. ಗೋಪಿನಾಥಂ ವಲಯದ ಆರ್‌ಎಫ್‌ಓ ವಾಗೀಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಚಿರತೆ ಸೆರೆ ಮತ್ತು ಪತ್ತೆಗಾಗಿ ಮೈಸೂರಿನ ಚಿರತೆ ಕಾರ್ಯ ಪಡೆ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಮಾರ್ಗದರ್ಶನದಲ್ಲಿ ಆರ್‌ಎಫ್‌ಓ ಎಂ.ಪುಟ್ಟಸ್ವಾಮಿ ನೇತೃತ್ವದಲ್ಲಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿತ್ತು.

ನಾಗಮಲೆಯಲ್ಲಿ ಮತ್ತೊಂದು ಚಿರತೆ ಪ್ರತ್ಯಕ್ಷ: ದೌಡಾಯಿಸಿದ ಅರಣ್ಯ ಸಿಬ್ಬಂದಿ

ಮಲೆಮಹದೇಶ್ವರ ಬೆಟ್ಟ, ಮೇ 24(ಎಂಟಿವೈ)– ನಾಗಮಲೆಯ ಹಾದಿಯ ಇಂಡಿಗನತ್ತ ಗ್ರಾಮದ ಬಳಿ ಚಿರತೆಯೊಂದು ಸೆರೆ ಸಿಕ್ಕಿರುವ ಬೆನ್ನಲ್ಲೇ ನಾಗಮಲೆ ಬಳಿ ಚಿರತೆಯೊಂದು ಪ್ರತ್ಯಕ್ಷವಾಗಿದ್ದು, ಸ್ಥಳಕ್ಕೆ ಅರಣ್ಯ ಸಿಬ್ಬಂದಿ ದೌಡಾಯಿಸಿ ಪರಿಶೀಲಿಸಿದ್ದಾರೆ.

ಇಂಡಿಗನತ್ತ ಗ್ರಾಮದಿಂದ 3–4 ಕಿ.ಮಿ ದೂರದಲ್ಲಿ ನಾಗಮಲೆ ಇದ್ದು, ಭಕ್ತರ ಪ್ರವೇಶ ನಿರ್ಬಂಧಿಸಲಾಗಿದೆ. ಆದರೆ ಬೆಟ್ಟದ ಕೆಳಗಿರುವ ಗ್ರಾಮದ ಯುವಕರು ನಾಗಮಲೆ ಬಳಿ ತೆರಳಿದ್ದಾಗ ಅರಣ್ಯ ಪ್ರದೇಶದಲ್ಲಿ ಚಿರತೆಯೊಂದು ಕಾಣಿಸಿಕೊಂಡು, ದಾಳಿ ಮಾಡಲು ಮುಂದಾಗಿದೆ ಎಂದು ಗ್ರಾಮಸ್ಥರು ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಅಲ್ಲಿಯೇ ಇರುವ ಕಳ್ಳಬೇಟೆ ತಡೆ ಶಿಬಿರದ ಸಿಬ್ಬಂದಿ ಹಾಗೂ ಗೋಪಿನಾಥಂ ವಲಯದ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದಾರೆ. ಅಲ್ಲದೆ, ಚಿರತೆ ನೋಡಿರುವುದಾಗಿ ಮಾಹಿತಿ ನೀಡಿದ ಗ್ರಾಮಸ್ಥರೊಂದಿಗೆ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಸ್ಥಳದಲ್ಲಿ ಎರಡು ಬೋನ್ ಇಡಲಾಗಿದ್ದು, ಆ ಚಿರತೆ ಸೆರೆಗೆ ಕ್ರಮ ಕೈಗೊಳ್ಳಲಾಗಿದೆ.

ಒಂದೇ ಕುಟುಂಬದ 11 ಮಂದಿ ದುರ್ಮರಣ

ಉಳಿದವರ ಮೃತದೇಹಗಳನ್ನು ಆರ್‌ಎನ್‌ಎಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಒಂದೇ ಕುಟುಂಬದ ಹತ್ತು ಮಂದಿ ದುರ್ಮರಣಕ್ಕೀಡಾದ ಸುದ್ದಿ ತಿಳಿದು ಆಸ್ಪತ್ರೆಯ ಬಳಿ ಜಮಾಯಿಸಿದ ಕುಟುಂಬಸ್ಥರು ಹಾಗೂ ಗ್ರಾಮಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಮಾಜಿ ಶಾಸಕ ಸುನಿಲ್ ನಾಯ್ಕ್ ಸೇರಿದಂತೆ ಸ್ಥಳೀಯ ಜನಪ್ರತಿ ನಿಧಿಗಳು ಹಾಗೂ ಮುಖಂಡರು ಆಸ್ಪತ್ರೆ ಬಳಿ ದೌಡಾಯಿಸಿ, ಕುಟುಂಬದವರಿಗೆ ಸಾಂತ್ವನ ಹೇಳಿದರು. ಪೊಲೀಸ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ, ಈಜು ತಜ್ಞರ ನೆರವಿನೊಂದಿಗೆ ನಾಪತ್ತೆಯಾದವರಿಗಾಗಿ ಶೋಧ ಕಾರ್ಯಾಚರಣೆ ಮುಂದುವರೆಸಿದ್ದಾರೆ. ಈ ಸಂಬಂಧ ಭಟ್ಕಳ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.





ವೃದ್ಧೆಯಿಂದ 24 ಕೋಟಿ ಸುಲಿಗೆ

ಇನ್ನಷ್ಟು ವಂಚನೆ ತಡೆದ ಬ್ಯಾಂಕ್ ಮ್ಯಾನೇಜರ್: ವೃದ್ಧೆಯ ಅಮಾಯಕತೆಯನ್ನು ಬಂಡವಾಳ ಮಾಡಿಕೊಂಡ ಸೈಬರ್ ಖದೀಮರು ಮತ್ತಷ್ಟು ಹಣಕ್ಕಾಗಿ ಬೇಡಿಕೆ ಇಟ್ಟಿದ್ದಾರೆ. ಆಗ ಆ ವೃದ್ಧೆ ಮನೆಯಲ್ಲಿದ್ದ 1 ಕೆಜಿ 300 ಗ್ರಾಂ ಚಿನ್ನಾಭರಣಗಳನ್ನು ಅಡ ವಿಟ್ಟು ಹಣ ಪಡೆಯಲು ಬ್ಯಾಂಕ್‌ಗೆ ತೆರಳಿದ್ದರು. ಆ ವೇಳೆ ಬ್ಯಾಂಕ್ ಮ್ಯಾನೇಜರ್, ವೃದ್ಧೆಯ ವರ್ತನೆ ಹಾಗೂ ತಮ್ಮ ಖಾತೆಯಲ್ಲಿ ನಿರಂತರವಾಗಿ ದೊಡ್ಡ ಮೊತ್ತದ ವ್ಯವಹಾರ ನಡೆಸುತ್ತಿರುವುದನ್ನು ಗಮನಿಸಿ ಅನುಮಾನಗೊಂಡು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದರು. ಕೂಡಲೇ ಬ್ಯಾಂಕ್‌ಗೆ ಧಾವಿಸಿದ ಸಿಸಿಬಿ ಸೈಬರ್ ಪೊಲೀಸರು, ವೃದ್ಧೆಯನ್ನು ವಿಚಾರಣೆಗೊಳಪಡಿಸಿದರು. ಅದಾಗಲೇ ಭಯದಲ್ಲಿದ್ದ ವೃದ್ಧೆ ಪೊಲೀಸರ ಬಳಿ ಏನೂ ಹೇಳದೆ ಮೌನವಾಗಿದ್ದರು. ಬಳಿಕ ಪೊಲೀಸರು ಧೈರ್ಯ ತುಂಬಿ ವಿಚಾರಿಸಿದಾಗ ಡಿಜಿಟಲ್ ಅರೆಸ್ಟ್ ವಿಚಾರವನ್ನು ಬಾಯ್ಬಿಟ್ಟಿದ್ದಾರೆ. ಪೊಲೀಸರು ಇಂತಹ ಯಾವುದೇ ಕ್ರಮ ನಡೆಸುವುದಿಲ್ಲ, ನಿಮ್ಮನ್ನು ಸೈಬರ್ ಖದೀಮರು ಬೆದರಿಸಿ, ವಂಚಿಸಿದ್ದಾರೆ ಎಂದು ತಿಳಿಸಿ, ಸಂತ್ರಸ್ತೆಯಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಂಡಿದ್ದರು. ಈ ಬಗ್ಗೆ ವಿದೇಶದಲ್ಲಿರುವ ಸಂತ್ರಸ್ಥೆಯ ಮಕ್ಕಳಿಗೂ ಮಾಹಿತಿ ನೀಡಿದರು.

ಹೆಡೆಮುರಿ ಕಟ್ಟಿದ ಪೊಲೀಸರು: ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಗಿಳಿದ ಪೊಲೀಸರು ಮುಂಬೈ, ಅಲಹಾಬಾದ್ ಮತ್ತು ದೆಹಲಿ ಮೂಲದ ಆರೋಪಿಗಳ ಬೆನ್ನತ್ತಿದ್ದರು. ಕಾರ್ಯಾಚರಣೆ ವೇಳೆ ಗೌರವ್ ಕುಮಾರ್, ಓಂ ಪ್ರಕಾಶ್ ರಾಜ್‌ಪುತ್ ಸೇರಿದಂತೆ ಐವರು ಖದೀಮರನ್ನು ಹೆಡೆಮುರಿ ಕಟ್ಟಿದ್ದಾರೆ. ಈ ವಂಚಕರು ಸುಲಿಗೆ ಮಾಡಿದ್ದ ಹಣವನ್ನು ಒಟ್ಟು 22 ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದು, ಸದ್ಯಕ್ಕೆ 60 ಲಕ್ಷ ರೂಪಾಯಿ ಹಣವಿದ್ದ ಖಾತೆಯನ್ನು ಪೊಲೀಸರು ಸೀಜ್ ಮಾಡಿದ್ದಾರೆ. ಉಳಿದ ಹಣ ಜಪ್ತಿಗಾಗಿ ತನಿಖೆ ಕ್ರಮ ವಹಿಸ ಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಾಗ್ರತೆಯಿಂದಿರಲು ಮನವಿ: ಸರ್ಕಾರದ ಯಾವುದೇ ತನಿಖಾ ಸಂಸ್ಥೆಗಳು ವಿಡಿಯೋ ಕರೆ ಮೂಲಕ ತನಿಖೆ ಕೈಗೊಳ್ಳುವುದಿಲ್ಲ. ಯಾರಾದರೂ ಡಿಜಿಟಲ್ ಅರೆಸ್ಟ್ ನೆಪದಲ್ಲಿ ಕರೆ ಮಾಡಿದರೆ ಅವರೊಂದಿಗೆ ವೈಯಕ್ತಿಕ ಮಾಹಿತಿಗಳನ್ನು ಹಂಚಿಕೊಳ್ಳಬೇಡಿ. ಯಾವ ಕಾರಣಕ್ಕೂ ಹಣ ವರ್ಗಾವಣೆ ಮಾಡಬೇಡಿ. ತನಿಖಾ ಸಂಸ್ಥೆಗಳು ಪ್ರಕರಣ ವನ್ನು ಕೈಬಿಡಲು ಹಣಕ್ಕಾಗಿ ಬೇಡಿಕೆ ಇಡುವುದಿಲ್ಲ ಬೆದರಿಸಿದರೆ, ನೇರವಾಗಿ ಪೊಲೀಸ್ ಠಾಣೆಗೆ ಬಂದು ಮಾಹಿತಿ ನೀಡುವುದಾಗಿ ತಿಳಿಸಿ. ನಿಮ್ಮ ವೈಯಕ್ತಿಕ ದಾಖಲೆಗಳು, ಸೂಕ್ಷ್ಮ ಮಾಹಿತಿಗಳನ್ನು ಸಾಮಾಜಿಕ ಜಾಲತಾಣ ಅಥವಾ ಯಾವುದೇ ಆನ್‌ಲೈನ್ ವೇದಿಕೆಗಳಲ್ಲಿ ಹಂಚಿಕೊಳ್ಳಬೇಡಿ. ಯಾವುದೇ ಅನುಮಾನಾಸ್ಪದ ಕರೆಗಳನ್ನು ಸ್ವೀಕರಿಸಿದರೆ ತಕ್ಷಣ ರಾಷ್ಟ್ರೀಯ ಸೈಬರ್ ಕ್ರೈಂ ರಿಪೋರ್ಟ್ ಪೋರ್ಟಲ್ (cybercrime.gov.in) ಅಥವಾ 1930 ಸಹಾಯವಾಣಿಗೆ ಮಾಹಿತಿ ನೀಡಿ ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಸಿಎಂಗೆ ಹೈಕಮಾಂಡ್ ಬುಲಾವ್

ಹಂತದಲ್ಲಿ ಗೆಲುವಿಗೆ ಸಮಾನ ಕಾರಣಕರ್ತರಾದ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರೊಂದಿಗೆ ಹೈಕಮಾಂಡ್ ಚರ್ಚಿಸಿ, ಮುಖ್ಯಮಂತ್ರಿಯಾಗುವ ಅವಕಾಶವನ್ನು ಇಬ್ಬರಿಗೂ ಕಲ್ಪಿಸಿಕೊಡಲು ತಲಾ ಎರಡೂವರೆ ವರ್ಷ ಹಂಚಿಕೆ ಮಾಡಿತ್ತು ಎನ್ನಲಾಗಿದೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪುತ್ರ ಡಾ.ಯತೀಂದ್ರ ಹಾಗೂ ಅವರ ಬೆಂಬಲಿಗ ನಾಯಕರು ಇಂತಹ ಯಾವುದೇ ಮಾತುಕತೆ ನಡೆದಿಲ್ಲ ಎಂದು ಹೇಳುತ್ತಲೇ ಬಂದಿದ್ದಾರೆ. ಅತ್ತ ಡಿ.ಕೆ.ಶಿವಕುಮಾರ್ ಪ್ರಯತ್ನ ವಿಫಲವಾದರೂ ಪ್ರಾರ್ಥನೆ ಫಲಿಸುತ್ತದೆ ಎಂದು ಮಾರ್ಮಿಕವಾಗಿ ಕೊಟ್ಟ ಮಾತಿನಂತೆ ಹೈಕಮಾಂಡ್ ನಡೆದುಕೊಳ್ಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ. ಇವರ ಬೆಂಬಲಿಗರೂ ಕೂಡ ಕೆಲ ತಿಂಗಳ ಹಿಂದೆ ಬಹಿರಂಗವಾಗಿಯೇ ಡಿಕೆಶಿ ಮುಖ್ಯಮಂತ್ರಿ ಆಗುತ್ತಾರೆ ಎಂಬ ಹೇಳಿಕೆ ನೀಡಿದ್ದಾರೆ. ಇತ್ತೀಚೆಗಷ್ಟೇ ಹೈಕಮಾಂಡ್ ಸೂಚನೆ ಮೇರೆಗೆ ಯಾರೂ ಬಹಿರಂಗ ಹೇಳಿಕೆ ನೀಡದಿದ್ದರೂ ತೆರೆಮರೆ ಪ್ರಯತ್ನಗಳು ಮುಂದುವರೆದಿವೆ. ಇದರ ನಡುವೆ ದಲಿತ ಸಿಎಂ ಆಗ್ರಹ ಹಾಗೂ ಸಂಪುಟ ಪುನರ್‌ರಚನೆ ಚರ್ಚೆ ಜೊತೆಗೆ ಜೊತೆಗೆ ಕುರ್ಚಿ ಗೊಂದಲ ಪರಿಹರಿಸಬೇಕೆಂಬ ಒತ್ತಾಯವೂ ಹೆಚ್ಚಾಗಿತ್ತು. ಈ ಎಲ್ಲಾ ಗೊಂದಲಗಳಿಗೂ ತೆರೆ ಎಳೆಯುವ ನಿಟ್ಟಿನಲ್ಲಿ ಹೈಕಮಾಂಡ್ ಮುಂದಾಗಿದೆ ಎಂದು ಹೇಳಲಾಗುತ್ತಿದೆ.

ಸಹಜ ಭೇಟಿಯಷ್ಟೇ: ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹೈಕಮಾಂಡ್ ಬುಲಾವ್ ನೀಡಿದ್ದರೆ, ಅದರಲ್ಲೇನು ವಿಶೇಷತೆ ಇರುವುದಿಲ್ಲ. ರಾಜ್ಯಸಭೆ ಚುನಾವಣೆ, ವಿಧಾನ ಪರಿಷತ್ ಚುನಾವಣೆ, ಎಸ್‌ಐಆರ್ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಸಲು ಆಹ್ವಾನಿಸಿರಬಹುದು ಎಂಬುದು ಸಿದ್ದರಾಮಯ್ಯನವರ ಬೆಂಬಲಿಗರ ಅಭಿಪ್ರಾಯ. ಆದರೆ, ರಾಜ್ಯಸಭೆ, ವಿಧಾನಪರಿಷತ್ ಚುನಾವಣೆ ವಿಚಾರವಾಗಿ ಚರ್ಚಿಸುವುದಾದರೆ ಸಿಎಂ ಜೊತೆಗೆ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನೂ ಆಹ್ವಾನಿಸಬೇಕಿತ್ತು ಎಂಬುದು ಕೆಲವು ನಾಯಕರ ವಾದ.

ಒಟ್ಟಾರೆ, ಸಿಎಂ ಭೇಟಿ ವೇಳೆ ಯಾವೆಲ್ಲಾ ವಿಚಾರಗಳ ಬಗ್ಗೆ ಚರ್ಚೆಯಾಗಬಹುದು ಎಂಬ ಕುತೂಹಲ ಎಲ್ಲರಲ್ಲಿದೆ. ರಾಜ್ಯಸಭೆ, ವಿಧಾನಪರಿಷತ್ ಚುನಾವಣೆ ವಿಚಾರದ ಬಗ್ಗೆ ಚರ್ಚಿಸುತ್ತಾರೋ ಇಲ್ಲವೇ ಆ ನೆಪದಲ್ಲಿ ನಾಯಕತ್ವ ಬದಲಾವಣೆ ಸಂಬಂಧ ಸ್ಪಷ್ಟ ನಿರ್ಧಾರಕ್ಕೆ ಬರುತ್ತಾರೋ ಎಂಬುದನ್ನು ಕಾದು ನೋಡಬೇಕಿದೆ.

ನಾಳೆ ನಗರಸಭೆ ಆಡಳಿತದ ವೈಫಲ್ಯ ಖಂಡಿಸಿ ಪ್ರತಿಭಟನೆ


ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಆಚಾರ್ಯ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ, ಮೇ 24– ಬಿಜೆಪಿ ಆಡಳಿತದ ವೈಫಲ್ಯವನ್ನು ಖಂಡಿಸಿ ಮೇ.26ರಂದು ಬೆಳಿಗ್ಗೆ 11 ಗಂಟೆಗೆ ನಗರಸಭೆ ಎದುರು ಪ್ರತಿಭಟನೆ ನಡೆಸಲಾಗುವುದು ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಆಚಾರ್ಯ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ ನಗರಸಭೆ ಆಡಳಿತವನ್ನು ವಿರೋಧಿಸಿ ಕಾಂಗ್ರೆಸ್ ಕಚೇರಿಯಿಂದ ನಗರಸಭೆಯವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆಯೆಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಸ್ಟೋನ್ ಹಿಲ್ ಭಾಗದಲ್ಲಿ ಕಸ ಹಾಕುವ ಬದಲು ಸುಬ್ರಮಣ್ಯ ನಗರದ ಮೇಲ್ಭಾಗದಲ್ಲಿ ಸುರಿಯಲಾಗುತ್ತಿದೆ. ನಗರದಲ್ಲಿ ಬೀದಿ ನಾಯಿಗಳ ಹಾವಳಿ ಮಿತಿ ಮೀರಿದೆ. 4 ವರ್ಷಗಳಿಂದ ನಗರದ ನಿವೇಶನ ರಹಿತರಿಗೆ ನಿವೇಶನ ನೀಡಿಲ್ಲ. ನಗರಸಭೆಯ ಕಚೇರಿಯಲ್ಲಿ ಫಾರಂ ನಂ.3 ಸೇರಿದಂತೆ ಯಾವುದೇ ಅರ್ಜಿಗಳು ವಿಲೇವಾರಿಯಾಗುತ್ತಿಲ್ಲ, ಇದರಿಂದ ಸಾರ್ವಜನಿಕರು ಕಷ್ಟ ಅನುಭವಿಸುತ್ತಿದ್ದಾರೆ. ಆಡಳಿತ ನಡೆಸುತ್ತಿರುವವರು ಹಾಗೂ ಅಧಿಕಾರಿಗಳ ನಡುವೆ ಹೊಂದಾಣಿಕೆಯ ಕೊರತೆ ಇದೆ ಎಂದು ಪ್ರಕಾಶ್ ಆಚಾರ್ಯ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೋಚನ ಚೇತನ್, ಉಪಾಧ್ಯಕ್ಷರಾದ ಸದಾ ಮುದ್ದಪ್ಪ, ಮುನೀರ್ ಮಾಚರ್, ಪ್ರಮುಖರಾದ ಮಿನಾಜ಼್ ಪ್ರವೀಣ್ ಹಾಗೂ ಹೆಚ್.ಎಸ್. ಗೋಪಿನಾಥ್ ಉಪಸ್ಥಿತರಿದ್ದರು.

ತಂತ್ರಜ್ಞಾನ ಬಳಸಿಕೊಂಡು ಕೆಲಸ ಮಾಡಬೇಕು


ಪತ್ರಕರ್ತರ ಸಂಘದ ವಾರ್ಷಿಕ ಪ್ರಶಸ್ತಿ ವಿಜೇತರನ್ನು ಅಭಿನಂದಿಸಲಾಯಿತು.

ವಿರಾಜಪೇಟೆ: ಬದಲಾದ ಕಾಲಘಟ್ಟದಲ್ಲಿ ಪತ್ರಕರ್ತರು ತಂತ್ರಜ್ಞಾನಗಳನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ಕೆಲಸ ಮಾಡುವಂತಾಗಬೇಕು ಎಂದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ತಿಳಿಸಿದ್ದಾರೆ.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಸಮೀಪದ ಹೆಗ್ಗಳ ಗ್ರಾಮದ ಗೋಲ್ಡನ್ ಬೀನ್ ಹೋಂಸ್ಟೇಯಲ್ಲಿ ನಡೆದ ವಾರ್ಷಿಕ ಪ್ರಶಸ್ತಿ ಪ್ರದಾನ ಹಾಗೂ ಸದಸ್ಯರ ಮಕ್ಕಳ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ತಂತ್ರಜ್ಞಾನಗಳು ಬದಲಾಗುತ್ತಿವೆ. ಇದರ ಸದುಪಯೋಗವನ್ನು ಪತ್ರಕರ್ತರು ವೃತ್ತಿಯಲ್ಲಿ ಪಡೆದುಕೊಳ್ಳುವಂತಾಗಬೇಕು ಎಂದರು.

ವಿರಾಜಪೇಟೆ ಬಳಿಯ ಮಗ್ಗುಲ ಲಿಟಲ್ ಸ್ಕಾಲರ್ಸ್ ಅಕಾಡೆಮಿ ವ್ಯವಸ್ಥಾಪಕರಾದ ಪೂಜಾ ಸಜೇಶ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅನುಕಾರ್ಯಪ್ಪ ರಾಷ್ಟ್ರೀಯ ಸಮಿತಿ ಸದಸ್ಯ ಪಳೆಯಂಡ ಪಾರ್ಥ ಚಿಣ್ಣಪ್ಪ, ಕುಶಾಲನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಚಂದ್ರಮೋಹನ್ ಮಾತನಾಡಿದರು. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಕೆ.ರೆಜಿತ್ ಕುಮಾರ್ ಗುಹ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕೊಡಗು ಪ್ರೆಸ್ ಕ್ಲಬ್ ಸೌಹಾರ್ದ ಸಹಕಾರ ಸಂಘದಿಂದ ತಾಲೂಕು ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ನಿಧಿಗೆ 83 ಸಾವಿರ ರೂ. ಚೆಕನ್ನು ಪ್ರೆಸ್‌ಕ್ಲಬ್ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಅಜ್ಜಮಡ ರಮೇಶ್ ಕುಟ್ಟಪ್ಪ ತಾಲೂಕು ಅಧ್ಯಕ್ಷರಿಗೆ ಹಸ್ತಾಂತರಿಸಿದರು.

ಪತ್ರಕರ್ತ ಸಂಘದ ವಾರ್ಷಿಕ ಪ್ರಶಸ್ತಿಯನ್ನು ಇಸ್ಮಾಯಿಲ್ ಕಂಡಕೆರೆ, ಪಿ.ವಿ. ಅಂಥೋಣಿ, ಕಿಶೋರ್ ಕುಮಾರ್ ಶೆಟ್ಟಿ, ರವಿಕುಮಾರ್, ವಾಸು, ಸುಬ್ರಮಣಿ, ಅವರು ಪಡೆದುಕೊಂಡರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಅತ್ಯುತ್ತಮ ಗ್ರಾಮಾಂತರ ವರದಿ ಪ್ರಶಸ್ತಿಗೆ ಇಸ್ಮಾಯಿಲ್ ಕಂಡಕೆರೆ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಉಪಾಧ್ಯಕ್ಷ ವನಿತಾ ಚಂದ್ರಮೋಹನ್ ವೀಕ್ಷಕರಾಗಿ ಮಹಾಸಭೆ ನಡೆಸಿದರು, ಎ.ಎಸ್. ಮುಸ್ತಾಫಾ ವಾರ್ಷಿಕ ವರದಿ ಮಂಡಿಸಿದರು, ಡಾ.ಹೇಮಂತ್ ಕುಮಾರ್ ಲೆಕ್ಕಪತ್ರ ಮಂಡಿಸಿದರು,

ಅಕ್ರಮ ಚರ್ಚ್ ಕಟ್ಟಡದಲ್ಲಿ ಆಸ್ಪತ್ರೆ ತೆರೆಯಲು ಗ್ರಾಮಸ್ಥರ ಆಗ್ರಹ


ಬಿಜೆಪಿ ಯುವ ಮೋರ್ಚಾದ ಪ್ರಮುಖ ಚಂದ್ರಶೇಖರ್ ಹೇರೂರು ಗ್ರಾಮಸ್ಥರೊಂದಿಗೆ ಸುದ್ದಿಗೋಷ್ಠಿ ನಡೆಸಿದರು.

ಮಡಿಕೇರಿ: ಚರ್ಚ್‌ಗೆಂದು ಅಕ್ರಮವಾಗಿ ನಿರ್ಮಿಸಿರುವ ಕಟ್ಟಡವನ್ನು ಸಮಾಜ ಕಲ್ಯಾಣ ಇಲಾಖೆ ವಶಕ್ಕೆ ಪಡೆದು, ಸರಕಾರಿ ಕಾರ್ಯ ಚಟುವಟಿಕೆಗಳಿಗೆ ಬಳಸುವಂತೆ ಜಿಲ್ಲಾಧಿಕಾರಿ ನೀಡಿರುವ ಆದೇಶವನ್ನು ಸ್ವಾಗತಿಸಿದ ಹೇರೂರು ಗ್ರಾಮಸ್ಥರು ಅಲ್ಲಿ ಹಾಡಿ ಜನರಿಗಾಗಿ ಆಸ್ಪತ್ರೆ ಆರಂಭಿಸುವಂತೆ ಬಿಜೆಪಿ ಯುವ ಮೋರ್ಚಾದ ಪ್ರಮುಖ ಚಂದ್ರಶೇಖರ್ ಹೇರೂರು ಆಗ್ರಹಿಸಿದರು.

ಸಮಾಜ ಕಲ್ಯಾಣ ಇಲಾಖಾ ಅಧಿಕಾರಿಗಳು ಜವಾಬ್ದಾರಿ ವಹಿಸಿಕೊಂಡು, ಕನಿಷ್ಠ ತಿಂಗಳಿಗೆ ಒಮ್ಮೆ ಹಾಡಿಗೆ ಭೇಟಿ ನೀಡಿ, ಅಲ್ಲಿನ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು. ಚರ್ಚ್‌ಗೆಂದು ಅನಧಿಕೃತವಾಗಿ ನಿರ್ಮಿಸಿದ ಕಟ್ಟಡವನ್ನು ಆಸ್ಪತ್ರೆಯಾಗಿ ಪರಿವರ್ತಿಸಿ ಆರೋಗ್ಯ ಸೇವೆಯನ್ನು ನೀಡಲು ಮುಂದಾಗಬೇಕೆಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ನಾಕೂರು ಶಿರಂಗಾಲ ಗ್ರಾಪಂ ಮಾಜಿ ಅಧ್ಯಕ್ಷ ಎಂ.ಸಿ ಜಗನ್ನಾಥ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಗೆ ಒಳಪಟ್ಟ ಪ್ರದೇಶದಲ್ಲಿ ಆದಿವಾಸಿ ಕುಟುಂಬಗಳಿಗೆ ಸರಕಾರದಿಂದಲೇ ಹಾಡಿಯ ಬಹುತೇಕ ಆದಿವಾಸಿಗಳು ಪ್ರಸ್ತುತ ಮತಾಂತರಗೊಂಡಿದ್ದು, ಹಿಂದೆ ನಿರ್ವಹಿಸುತ್ತಿದ್ದ ಗ್ರಾಮದ ಬಸವೇಶ್ವರ ದೇವಸ್ಥಾನದ ಕೆಲಸ ಕಾರ್ಯಗಳಲ್ಲಿ ಪೂಜೆಯಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹೇರೂರು ಗ್ರಾಮದ ಅಧ್ಯಕ್ಷ ಬಿ.ಎಸ್. ವಸಂತ, ಗ್ರಾಮಸ್ಥರಾದ ಕೆ.ಎಸ್.ರಮೇಶ್, ಚರಣ್ ತೆಕ್ಕಡೆ ಹಾಗೂ ಗಗನ್ ಮಂದೋಡಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಂಗಾಂಗ ದಾನದಿಂದ ಮೈಸೂರಲ್ಲಿ ಇಬ್ಬರಿಗೆ ಹೊಸ ಬದುಕು

ಮಡಿಕೇರಿ, ಮೇ 24–ಜಿಲ್ಲಾಸ್ಪತ್ರೆಯಲ್ಲಿ ಮೃತಪಟ್ಟ ದಾನಿಯಾದ ಡಾಲು ಅವರಿಂದ ಸಂಗ್ರಹಿಸಲಾದ 2 ಮೂತ್ರ ಪಿಂಡಗಳನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ಕಸಿ ಮಾಡಲಾಗಿದೆ. ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಲೋಕೇಶ್ ತಿಳಿಸಿದ್ದಾರೆ.

ಸಂಸ್ಥೆಯಲ್ಲಿ ನಡೆದ ಮೊದಲ ಅಂಗಾಂಗ ದಾನ ಕಾರ್ಯಾಚರಣೆ ಜೀವ ಉಳಿಸುವ ಮಹತ್ವದ ಸಾಧನೆಯಾಗಿ ಪರಿಣಮಿಸಿದೆ. ಮೂತ್ರಪಿಂಡ ಕಸಿಗೆ ಅಗತ್ಯ ಸಹಕಾರ ನೀಡಿದ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯ ನೆಫ್ರೋಲಜಿ ವಿಭಾಗದ ಮುಖ್ಯಸ್ಥ ಹಾಗೂ ಅಂಗಾಂಗ ಕಸಿ ಸಂಯೋಜಕ ಡಾ.ಮಂಜುನಾಥ ಶೆಟ್ಟಿ, ಪ್ರೊಫೆಸರ್ ಆಫ್ ಯೂರಾಲಜಿ ಮತ್ತು ರಿನಲ್ ಟ್ರಾನ್ಸ್‌ಪ್ಲಾಂಟ್ ಸರ್ಜನ್ ಡಾ.ಆರ್.ವಿಜಯ ಕುಮಾರ್ ಪ್ರೊಫೆಸರ್ ಆಫ್ ಯೂರಾಲಜಿ ರಾಜೇಂದ್ರ ಯೂರಾಲಜಿ ಓಟಿ ಇನ್ ಚಾರ್ಜ್ ಡಾ.ಸಚಿನ್ ಧಾರವಾಡ್ಕರ್, ಗವಿ ಪ್ರಸಾದ್, ಓಟಿ ತಾಂತ್ರಿಕ ತಜ್ಞರು ಅಂಗಾಂಗ ಕಸಿ ಮಾಡಿದ್ದಾರೆ. ಆ ಮೂಲಕ ಇಬ್ಬರು ರೋಗಿಗಳಿಗೆ ಹೊಸ ಬದುಕಿನ ಆಶಾಕಿರಣ ದೊರೆತಿದೆ ಎಂದು ಡೀನ್ ಲೋಕೇಶ್ ಪತ್ರಿಕಾ ಹೇಳಿಕೆಯಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ.

ಆಟೋ ಚಾಲಕರ ಕ್ಷೇಮಾಭಿವೃದ್ಧಿ ಮಂಡಳಿ ರಚನೆಗೆ ಆಗ್ರಹ

ಮಡಿಕೇರಿ: ಬೆಲೆ ಹೆಚ್ಚಳದ ಪರಿಣಾಮ ಸಂಕಷ್ಟದ ಜೀವನ ಸಾಗಿಸುತ್ತಿರುವ ಆಟೋ ಚಾಲಕರ ಹಿತ ಕಾಪಾಡಲು ಸರಕಾರ 'ಆಟೋ ಚಾಲಕರ ಕ್ಷೇಮಾಭಿವೃದ್ಧಿ ಮಂಡಳಿ' ರಚಿಸಬೇಕು ಎಂದು ಜಿಲ್ಲಾ ಸೋಶಿಯಲ್ ಡೆಮಾಕ್ರೆಟಿಕ್ ಟ್ರೇಡ್ ಯೂನಿಯನ್ ಒತ್ತಾಯಿಸಿದೆ.

ಎಸ್‌ಡಿಟಿಯುನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಬ್ದುಲ್ ರಜಾಕ್ ಎಂ.ಎ ಪೆಟ್ರೋಲ್, ಡೀಸೆಲ್, ಅನಿಲ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ನಿತ್ಯ ದುಡಿಯುವ ಆಟೋ ಚಾಲಕರು ಕಷ್ಟದ ಬದುಕು ಸಾಗಿಸುತ್ತಿದ್ದಾರೆ. ಮಕ್ಕಳ ವಿದ್ಯಾಭ್ಯಾಸದ ಶುಲ್ಕವೂ ದುಬಾರಿಯಾಗಿದೆ, ತೆರಿಗೆ ಹೊರೆ ಅಧಿಕವಾಗಿದೆ. ಆದ್ದರಿಂದ ಸರಕಾರ ತಕ್ಷಣ ಆಟೋ ಚಾಲಕರ ನೆರವಿಗೆ ಬಂದು ಆಟೋ ಚಾಲಕರ ಕ್ಷೇಮಾಭಿವೃದ್ಧಿ ಮಂಡಳಿ ರಚಿಸಿ ಅಗತ್ಯ ಅನುದಾನ ಒದಗಿಸಬೇಕು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಸರಕಾರಿ ಪ್ರೌಢಶಾಲೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಸನ್ಮಾನ



ವರ್ಕ್‌ಶಾಪ್ ಮಾಲೀಕರ ಸಂಘದ ಬೆಳ್ಳಿ ಮಹೋತ್ಸವದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸುಂಟಿಕೊಪ್ಪ, ಮೇ 24–ಸುಂಟಿಕೊಪ್ಪ ವರ್ಕ್‌ಶಾಪ್ ಮಾಲೀಕರ ಸಂಘದ ಬೆಳ್ಳಿ ಮಹೋತ್ಸವ ಆಚರಣೆ ಪ್ರಯುಕ್ತ ಸರಕಾರಿ ಪ್ರೌಢಶಾಲೆಯ 10ನೇ ತರಗತಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಸನ್ಮಾನಿಸಲಾಯಿತು.

ಸುಂಟಿಕೊಪ್ಪ ಕೊಡವ ಸಮಾಜದಲ್ಲಿ ನಡೆದ ಬೆಳ್ಳಿ ಮಹೋತ್ಸವನ್ನು ಉದ್ಘಾಟಿಸಿದ ಸರ್ಕಾರಿ ಪ್ರೌಢಶಾಲೆ ಉಪ ಪ್ರಾಂಶುಪಾಲ ಬಾಲಕೃಷ್ಣ ಮಾತನಾಡಿ, ಶಿಕ್ಷಣ ಸಂಘಟನೆ ಮತ್ತು ಹೋರಾಟದ ಮನೋಭಾವನೆಯನ್ನು ಬೆಳೆಸಿಕೊಂಡು ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ರೀತಿಯಲ್ಲಿ ಸಮಾಜ ಮುಖಿಯಾಗಿ ಬಾಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ರಾಜ್ಯ ಸ್ತ್ರೀಶಕ್ತಿ ಒಕ್ಕೂಟದ ಅಧ್ಯಕ್ಷೆ ರೆಹನಾ ಸುಲ್ತಾನ್, ಸಂಘದ ಮಾಜಿ ಅಧ್ಯಕ್ಷ ಪಿ.ಆರ್ ಸುನಿಲ್ ಕುಮಾರ್, ಮಾಜಿ ಅಧ್ಯಕ್ಷ ವಿ.ಎಸ್.ಸಂತೋಷ್ ಮತ್ತು ಕೆ.ಪಿ.ವಿನೋದನ್ ಮಾತನಾಡಿದರು. ಸಂಘದ ಅಧ್ಯಕ್ಷ ಬಿ.ಎಸ್ ರಮೇಶ್ ಅಧ್ಯಕ್ಷತೆ ವಹಿಸಿದ್ದರು. ಶೇ.100 ಫಲಿತಾಂಶ ಪಡೆದ ಹಿನ್ನೆಲೆಯಲ್ಲಿ ಸರಕಾರಿ ಪ್ರೌಢಶಾಲೆಯ ಶಿಕ್ಷಕರನ್ನು, ಅತಿ ಹೆಚ್ಚು ಅಂಕಗಳನ್ನು ಪಡೆದ 10ಮಂದಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕೊಡಗು ಪತ್ರಕರ್ತರ ಸಂಘ ಕುಶಾಲನಗರ ತಾಲೂಕು ಅಧ್ಯಕ್ಷ ಬಿ.ಸಿ. ದಿನೇಶ್, ವರ್ಕ್‌ಶಾಪ್ ಮಾಲೀಕರ ಸಂಘದ ಹಿರಿಯ ಸದಸ್ಯ ಸೋಮಣ್ಣ ಉಪಸ್ಥಿತರಿದ್ದರು.

ಪಾಲೂರು ಗ್ರಾಮದ ಶ್ರೀ ಕಾಳಿಕಾಂಬ ಅಮನೂರು ಉತ್ಸವ ಸಂಪನ್ನ


ಶ್ರೀ ಕಾಳಿಕಾಂಬ ಅಮನೂರು ಉತ್ಸವದಲ್ಲಿ ಬಿಂಬಕ್ಕೆ ಹೂವಿನ ಶೃಂಗಾರ.

ನಾಪೋಕ್ಲು, ಮೇ 24 (ದುಗ್ಗಳ)– ಸಮೀಪದ ಪಾಲೂರು ಗ್ರಾಮದ ಗ್ರಾಮದೇವತೆಯಾದ ಶ್ರೀ ಕಾಳಿಕಾಂಬ ಅಮನೂರು ತಾಯಿಯ ವಾರ್ಷಿಕೋತ್ಸವ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ವಾರ್ಷಿಕೋತ್ಸವದ ಅಂಗವಾಗಿ ಬೆಳಿಗ್ಗೆ ದೇವರ ಜಳಕ ಕೈಗೊಂಡರು. ಬಳಿಕ ವಾದ್ಯ ಮೇಳ ಹಾಗೂ ದೇವರ ಅಲಂಕೃತ ಮೂರ್ತಿಯೊಂದಿಗೆ ತಿರುವಳಕಾರರು ಭಕ್ತರು ಮೆರವಣಿಗೆ ತೆರಳಿ ದೇವಾಲಯದಲ್ಲಿ ದೇವರಿಗೆ ಮಹಾಪೂಜೆ ಇನ್ನಿತರ ದೇವರ ಸೇವೆಗಳು ಜರುಗಿ ಪ್ರಸಾದ ವಿತರಣೆ ಮಾಡಲಾಯಿತು.

ದೇವಾಲಯದ ಪ್ರಮುಖರಾದ ಎಡಿಕೇರಿ ಪ್ರವೀಣ್ (ಪವಿ), ಮುಖ್ಯ ಪೂಜಾರಿ ಬೈತಡ್ಕ ಡೆಲ್ವಿ ದೇವಯ್ಯ, ಅಣ್ಣಿ ಗಣಪತಿ, ಸೋನಾಜಿತ್, ಸೂದನ ಮಧು , ಬೈತಡ್ಕ ಜೀವನ್, ಜಿಲ್ಲು, ಹಿರಿಯರಾದ ಬೈತಡ್ಕ ದೇವಯ್ಯ, ಚಿನ್ನಪ್ಪ, ಕುಟ್ಟಪ್ಪ, ಪುದಿಯನೆರವನ ಮೋಹನ್ ಪೊನ್ನಪ್ಪ, ದಿಲೀಪ್, ಅಶೋಕ, ಅಜಿತ್, ದಿನೇಶ್, ಸೂದನ, ಮದನ್, ಈರಪ್ಪ, ಅಚ್ಚುಡ ಗಣೇಶ, ಚಿಕ್ಕನ ದಿನೇಶ್ ಪಾಲ್ಗೊಂಡಿದ್ದರು.

ಸರ್ಕಾರ ಪುಸ್ತಕ ಖರೀದಿಸಲು ಆಸಕ್ತಿ ತೋರುತ್ತಿಲ್ಲ



ಡಾ.ಗುರುರಾಜು ಮೈಸೂರು ಅವರಿಗೆ ಪರಂಜ್ಯೋತಿ ಮಂಟೇಸ್ವಾಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಚಾಮರಾಜನಗರ: ನಾಡಿನ ಕಲೆ, ಸಂಸ್ಕೃತಿ ಮತ್ತು ಭಾಷೆಯ ಬಗ್ಗೆ ಸರ್ಕಾರಕ್ಕೆ ಆಸಕ್ತಿಯಿಲ್ಲ ಎಂದು ಕರ್ನಾಟಕ ಜನಪದ ಪರಿಷತ್ತಿನ ರಾಜ್ಯಾಧ್ಯಕ್ಷ ಪ್ರೊ. ಹಿ.ಚಿ. ಬೋರಲಿಂಗಯ್ಯ ಬೇಸರಿಸಿದ್ದಾರೆ

ನಗರದ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆದ ಕರ್ನಾಟಕ ಜನಪದ ಪರಿಷತ್ ಜಿಲ್ಲಾ ಘಟಕ ಹಾಗೂ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಏರ್ಪಡಿಸಿದ್ದ ಜಿಲ್ಲಾ ಜನಪದ ಉತ್ಸವವನ್ನು ಉದ್ಘಾಟಿಸಿ, ಕಲೆ, ಸಂಸ್ಕೃತಿ, ಭಾಷೆಯ ಉಳಿವಿಗೆ ಮಾಡುವ ಕೆಲಸಗಳಿಗೂ ಸರ್ಕಾರಗಳು ಅನುದಾನವನ್ನು ನೀಡುತ್ತಿಲ್ಲ. ಪ್ರಕಟವಾಗುವ ಪುಸ್ತಕಗಳನ್ನು ಸಹ ಖರೀದಿಸಲು ಆಸಕ್ತಿ ತೋರುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜನರು ಸಹ ಕಲೆ, ಸಂಸ್ಕೃತಿ, ಭಾಷೆ ಬಗ್ಗೆ ನಿರ್ಲಕ್ಷ್ಯತಾಳಿದ್ದಾರೆ. ಮನೆಯಲ್ಲಿ ಟಿವಿ ಮತ್ತು ಕೈಯಲ್ಲಿ ಮೊಬೈಲ್ ಇಟ್ಟುಕೊಂಡು ಸ್ಪಷ್ಟತೆ ಇಲ್ಲದ ವಿಚಾರಗಳನ್ನು ವೀಕ್ಷಿಸುತ್ತ ಕಾಲ ಕಳೆಯುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದರು.

ಕೊಳ್ಳೇಗಾಲದ ಮಾನಸ ಶಿಕ್ಷಣ ಸಂಸ್ಥೆಯ ಡಾ.ದತ್ತೇಶಕುಮಾರ್ ಮಾತನಾಡಿ, ನಾಡಿನಾದ್ಯಂತ ಹಾಡುಗಾರಿಕೆ ಮೂಲಕ ಮಂಟೇಸ್ವಾಮಿ ಪರಂಪರೆ ಉಳಿಸುತ್ತಿರುವ ಹಿರಿಯ ನೀಲಗಾರ ಕಲಾವಿದ ಡಾ.ಗುರುರಾಜು ಮೈಸೂರು ಅವರನ್ನು ಪರಂಜ್ಯೋತಿ ಮಂಟೇಸ್ವಾಮಿ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜನಪದ ಸಂಶೋಧಕರಾದ ಪಿ.ನಾಗರತ್ನಮ್ಮ ಮಳವಳ್ಳಿ ಮಾತನಾಡಿದರು. ಸಮಾರಂಭದಲ್ಲಿ ನೀಲಗಾರರಾದ ಡಾ. ಗುರುರಾಜು ಮೈಸೂರು ಅವರಿಗೆ ಪರಂಜ್ಯೋತಿ ಮಂಟೇಸ್ವಾಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಕಲಾವಿದ ಸಿದ್ದು ಅವರು ಶಿವತಾಂಡವ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.

ಸಾನ್ನಿಧ್ಯ ವಹಿಸಿದ್ದ ಚಿಕ್ಕಲ್ಲೂರಿನ ಮಂಟೇಸ್ವಾಮಿ ಮಠದ ಭರತರಾಜೇ ಅರಸ್ ಮಾತನಾಡಿದರು. ಪರಿಷತ್ತಿನ ಜಿಲಾಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್.ಲಕ್ಕೂರು, ಕಲೆ ನಟರಾಜು ಹಾಗೂ ಜನಪದ ಕಲಾವಿದರು ಉಪಸ್ಥಿತರಿದ್ದರು.

ಚುನಾವಣೆಯಲ್ಲಿ ಯೋಗ್ಯರು ಆಯ್ಕೆಯಾಗುವುದೇ ಕಷ್ಟ


ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಂಚಲನ ಕೃತಿ ಬಿಡುಗಡೆ ಮಾಡಿದರು.

ಚಾಮರಾಜಗರ, ಮೇ 24–ದೇಶದಲ್ಲಿ ಪ್ರಜಾಪ್ರಭುತ್ವ, ಸಂವಿಧಾನ ಅಪಾಯದಲ್ಲಿದ್ದು, ಮುಂದಿನ ಚುನಾವಣೆಯಲ್ಲಿ ಪಾಳೇಗಾರರು, ಭೂಮಾಲೀಕರು ಸ್ಪರ್ಧೆ ಮಾಡಲಿದ್ದಾರೆ. ಸೋಲು–ಗೆಲುವನ್ನು ಹಣ ನಿರ್ಧರಿಸುತ್ತದೆ. ಯೋಗ್ಯರು ಆಯ್ಕೆಯಾಗುವುದು ಕಷ್ಟವಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಳವಳ ವ್ಯಕ್ತಪಡಿಸಿದ್ದಾರೆ

ನಗರದ ಜಿಲ್ಲಾ ಡಾ.ರಾಜಕುಮಾರ್ ರಂಗಮಂದಿರದಲ್ಲಿ ನಡೆದ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಹಾಗೂ ಕವಿ ಸಿ.ಶಂಕರ ಅಂಕನಶೆಟ್ಟಿಪುರ ಅವರ ನಮ್ಮ ಹರಿದರ್ಶನ ಪ್ರಕಾಶನ ಉದ್ಘಾಟನೆ ಹಾಗೂ ಸಂಚಲನ ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ದೇಶದಲ್ಲಿ ಧರ್ಮ ಆಧಾರಿತ ರಾಜಕಾರಣ ನಡೆಯುತ್ತಿದೆ. ಈ ಹೊತ್ತಿನಲ್ಲಿ ಶೋಷಿತ ಸಮುದಾಯಗಳು ಎಚ್ಚರಿಕೆಯಿಂದ ನಡೆಯಬೇಕಿದೆ ಎಂದರು.

ಜಾನಪದ ಸಾಹಿತ್ಯದಲ್ಲಿ ಚಾಮರಾಜನಗರ ಖ್ಯಾತಿಯನ್ನು ಹೊಂದಿದೆ. ಜಾನಪದ ಸಾಹಿತ್ಯ ನಿಮ್ಮ ಬದುಕಾಗಿದೆ. ಧರ್ಮ ಎಂದರೆ ನಮ್ಮ ಜೀವನವನ್ನು ಹೇಗೆ ನಡೆಸಬೇಕೆಂಬುದೇ ಧರ್ಮ. ಆದಿವಾಸಿಗಳು, ನಮ್ಮ ಅಧಿಕಾರವನ್ನು ಬಳಸಿ ಆಳುವವರು ಅವರಿಗೆ ತಕ್ಕಂತೆ ನಡೆದುಕೊಂಡು ಹೋಗುತ್ತಾರೆ ಅದನ್ನು ನೋಡಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಪ್ರಜಾಪ್ರಭುತ್ವ ಆಡಳಿತ ಬೇಕು ಎಂದು ಬಯಸಿದ್ದರು ಎಂದರು.

ಸಂಚಲನ ಕೃತಿಯಲ್ಲಿ ಅಂಬೇಡ್ಕರ್ ಆಶಯಗಳಿವೆ. ಅಂಬೇಡ್ಕರ್ ಅವರು ಹೇಳಿರುವುದರಿಂದ ವಂಚಿತರಾಗಿದ್ದೇವೆ ಎಂದು ಹೇಳುತ್ತದೆ. ಅದರ ಬಗ್ಗೆ ಜಾಗೃತಿ ಮೂಡಿಸುವಂತ, ಬೆಳಕು ಚೆಲ್ಲುವಂತಹ, ಸಾಮಾಜಿಕ ಜವಾಬ್ದಾರಿಯನ್ನು ಈ ಕೃತಿ ಒಳಗೊಂಡಿದೆ ಎಂದರು.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತೆ ಶಿಲ್ಪ ನಾಗ್ ಪ್ರಕಾಶನದ ಲಾಂಛನ ಬಿಡುಗಡೆಗೊಳಿಸಿ ಮಾತನಾಡಿ, ಸಿ.ಶಂಕರ ಅಂಕನಶೆಟ್ಟಿಪುರ ಅವರ 9 ನೇ ಕೃತಿ ಸಂಚಲನ ಚೆನ್ನಾಗಿ ಮೂಡಿಬಂದಿದ್ದು, ಸಾಮಾಜಿಕ ಕಳಕಳಿ ಹೊಂದಿದೆ ಎಂದರು. ಕವಿ ಸಿ. ಶಂಕರ ಅಂಕನಶೆಟ್ಟಿಪುರ ಮಾತನಾಡಿ, ಸಂಚಲನ ಕೃತಿ ಪೌರಕಾರ್ಮಿಕರ ಸಮಸ್ಯೆಗಳನ್ನೂ ತೆರೆದಿಡಲು ಬರೆದಿದ್ದೇನೆ ಎಂದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶಂಕನಪುರ ಮಹದೇವ ಕೃತಿ ಕುರಿತು ಮಾತನಾಡಿದರು. ಮಾಜಿ ಮಹಾಪೌರ ಎಂ.ನಾರಾಯಣ ಮಾತನಾಡಿದರು.

ತಿ.ನರಸೀಪುರದ ನಳಂದ ಬುದ್ಧ ವಿಹಾರದ ಬೋದಿರತ್ನ ಬಂತೇಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗ ಅಧ್ಯಕ್ಷ ಡಾ.ವಿ.ಎನ್.ಮಹದೇವಯ್ಯ, ಹಿರಿಯ ಹೋರಾಟಗಾರ ಪಿ.ಸಂಘಸೇನ ಇತರರು ಹಾಜರಿದ್ದರು.

ಗುಂಡ್ಲುಪೇಟೆಯಲ್ಲಿ ಪೊಲೀಸರ ಮಕ್ಕಳ ಪ್ರತಿಭಾ ಪುರಸ್ಕಾರ



ಗುಂಡ್ಲುಪೇಟೆ, ಮೇ. 24(ಸೋಮ್. ಜಿ)– ಪಟ್ಟಣದ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರಕ್ಷಕ ಸಿಬ್ಬಂದಿ ವರ್ಗದವರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು.

ಪೊಲೀಸ್ ಠಾಣೆಯಲ್ಲಿ ASI ಮಹೇಶ ಪುತ್ರಿ ಎಂ ಅಕ್ಷತಾ ಈ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ PCMB ವಿಭಾಗದಲ್ಲಿ 600 ಅಂಕಗಳಿಗೆ 537 (89.5%) ಅಂಕಗಳನ್ನು ಹಾಗೂ ಪೊಲೀಸ್ ಕಾನ್ಸ್‌ಟೆಬಲ್ ಪ್ರಕಾಶ್ ಪುತ್ರ ಧನುಷ್ ಪಿಯುಸಿ ಪರೀಕ್ಷೆಯಲ್ಲಿ PCMB ವಿಭಾಗದಲ್ಲಿ 600 ಅಂಕಗಳಿಗೆ 586 (97.64%) ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಮತ್ತು ಹೆಡ್ ಕಾನ್ಸ್‌ಟೆಬಲ್ ಸುರೇಶ್ ಪುತ್ರಿ ವರ್ಷಿಣಿ SSLC (CBSC) ಪರೀಕ್ಷೆಯಲ್ಲಿ 80% ಅಂಕವನ್ನು ಪಡೆದು ತೇರ್ಗಡೆಯಾದ ಪ್ರಯುಕ್ತ ಠಾಣಾ ವತಿಯಿಂದ ಸನ್ಮಾನಿಸಲಾಯಿತು.

ಸರ್ಕಲ್ ಇನ್ಸ್‌ಪೆಕ್ಟರ್ ಜಯ ಕುಮಾರ್, ಸಬ್ ಇನ್ಸ್‌ಪೆಕ್ಟರ್ ನರೇಶ್ ಕುಮಾರ್, ಎಎಸ್‌ಐ ಕುದೇರು ಮಹೇಶ್, ಪಿಸಿ ನಟೇಶ್ ಮತ್ತು ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಚಾ.ನಗರದಲ್ಲಿ ಜೋರು ಮಳೆ

ಚಾಮರಾಜನಗರ: ಜಿಲ್ಲಾ ಕೇಂದ್ರದಲ್ಲಿ ಭಾನುವಾರ ಸಂಜೆ ಮಿಂಚು, ಗುಡುಗು ಸಹಿತ ಗಂಟೆಗೂ ಹೆಚ್ಚು ಕಾಲ ಮಳೆ ಸುರಿದು ವಾತಾವರಣವನ್ನು ತಂಪಾಗಿಸಿತು.

ಜಿಲ್ಲೆಯ ಹಲವೆಡೆ ಕಳೆದೊಂದು ವಾರದಿಂದ ಉತ್ತಮ ಮಳೆಯಾಗುತ್ತಿದ್ದು ಭಾನುವಾರ ಸಂಜೆ ಬಿರುಸಿನ ಮಳೆ ಸುರಿದಿದೆ. ಇದರಿಂದಾಗಿ ನಗರದಲ್ಲಿ ರಸ್ತೆಗಳಲ್ಲಿ ಮಳೆ ನೀರು ಹರಿದು ಸಾಕಷ್ಟು ಅವಾಂತರ ಸೃಷ್ಟಿಸಿತು. ಪೂರ್ವ ಮುಂಗಾರು ಮಳೆಗೆ ಗ್ರಾಮೀಣ ಪ್ರದೇಶಗಳಲ್ಲಿನ ಸಣ್ಣಪುಟ್ಟ ಕೆರೆ, ಕಟ್ಟೆಗಳು ಭರ್ತಿಯಾಗುತ್ತಿವೆ. ಗ್ರಾಮೀಣ ಪ್ರದೇಶದ ರಸ್ತೆಗಳು ಕೆಸರುಮಯವಾಗಿ ಮಾರ್ಪಾಡು ಹೊಂದಿವೆ. ಧಾರಾಕಾರ ಮಳೆಗೆ ಜಿಲ್ಲೆಯ ಸುವರ್ಣಾವತಿ, ಚಿಕ್ಕಹೊಳೆ, ಗುಂಡಾಲ್ ಜಲಾಶಯಗಳಿಗೆ ನೀರು ಹರಿದು ಬರಲಾರಂಭಿಸಿದ್ದು ರೈತರಲ್ಲಿ ಸಂತಸ ಮೂಡಿಸಿದೆ.

ಅರಣ್ಯ ಪ್ರದೇಶಗಳಲ್ಲೂ ಉತ್ತಮ ಮಳೆ: ಜಿಲ್ಲೆಯ ಬಂಡೀಪುರ, ಬಿಆರ್‌ಟಿ, ಮಹದೇಶ್ವರ ಬೆಟ್ಟ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದ್ದು, ನೀರಿಲ್ಲದೇ ಭಣಗುಡುತ್ತಿದ್ದ ಕೆರೆ, ಕಟ್ಟೆಗಳು ತುಂಬುವ ಹಂತದಲ್ಲಿವೆ. ಬರಗಾಲದಿಂದ ನೀರು, ಮೇವಿಗೆ ತತ್ತರಿಸಿ ಹೋಗಿದ್ದ ಕಾಡು ಪ್ರಾಣಿಗಳಿಗೆ ಮಳೆಯಿಂದ ಅನುಕೂಲವಾಗಿದೆ.



ಮನುಷ್ಯನ ಅವಗುಣ ತೊಡೆದುಹಾಕಲು ಮಠಗಳು ಕಾರಣ


ಗ್ರಾಮದ ಗುರುಕಂಬಳೀಶ್ವರ ಮಠದ ಮಠಾಧೀಶ ಮಹದೇವ ಸ್ವಾಮೀಜಿ ಅವರಿಗೆ ಗುರುವಂದನೆ ನೆರವೇರಿಸಿದರು.

ಚಾಮರಾಜನಗರ: ದೇವಾಲಯಗಳು ಭಕ್ತಿಯ ಕೇಂದ್ರಗಳಾದರೆ, ಮಠಮಾನ್ಯಗಳು ಮನುಷ್ಯನಲ್ಲಿ ಅಡಗಿರುವ ಅವಗುಣಗಳನ್ನು ತೊಡೆದುಹಾಕುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹರವೆ ವಿರಕ್ತಮಠದ ಮಠಾಧೀಶ ಸರ್ಪಭೂಷಣಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರಸಭೆ ವ್ಯಾಪ್ತಿಯ ರಾಮಸಮುದ್ರದಲ್ಲಿ ಶ್ರೀ ಗುರುಕಂಬಳೇಶ್ವರ ಮಠದ 30ನೇ ವಾರ್ಷಿಕೋತ್ಸವ, ಗುರುವಂದನೆ ಹಾಗೂ ಬಸವಮಂದಿರದ 12ನೇ ವಾರ್ಷಿಕೋತ್ಸವ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕಸಭೆ ಯನ್ನು ಉದ್ಘಾಟಿಸಿ, ಆಧುನೀಕತೆಯ ಸೋಗ ಡಿಲ್ಲದಾಗ ರಾಜ್ಯದಲ್ಲಿ 5 ಸಾವಿರಕ್ಕೂ ಹೆಚ್ಚು ಮಠಗಳಿದ್ದವು. ಪ್ರಸ್ತುತ ಎಲ್ಲ ಕ್ಷೇತ್ರಗಳು ತಾಂತ್ರಿಕತೆಯತ್ತ ಮುನ್ನುಗ್ಗುತ್ತಿರುವಾಗ ಮಠಗಳ ಸಂಖ್ಯೆ ಹೆಚ್ಚಾಗದೆ ಇಂದು 1200ಕ್ಕೆ ಇಳಿದಿವೆ. ಮಠಗಳ ಸಂಖ್ಯೆ ಕಡಿಮೆಯಾಗಲು ಲೋಪದೋಷಗಳನ್ನು ಹುಡುಕಿ ವ್ಯವಸ್ಥೆಯನ್ನು ಸರಿಪಡಿಸುವ ಕೆಲಸ ತ್ವರಿತವಾಗಿ ನಡೆಯಬೇಕಿದೆ ಎಂದರು.

12ನೇ ಶತಮಾನದ ಬಸವಾದಿಶರಣರು ಹಾಕಿಕೊಟ್ಟ ಮಾರ್ಗದಲ್ಲಿ ತಾವೆಲ್ಲರೂ ನಡೆಯಬೇಕು, ಬಸವಣ್ಣ ನವರು ಪ್ರತಿಪಾದಿಸಿದ ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂಬ ಸಪ್ತ ಸೂತ್ರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ದೇವನೂರು ಮಠದ ಮಹಾಂತಸ್ವಾಮೀಜಿ ತಿಳಿಸಿದರು.

ಶ್ರೀ ಬಸವೇಶ್ವರ ಭಾವಚಿತ್ರಕ್ಕೆ ಮರಿಯಾಲ ಮಠದ ಇಮ್ಮಡಿಮುರುಘರಾಜೇಂದ್ರ ಸ್ವಾಮೀಜಿ ಪುಷ್ಪಾರ್ಚನೆ ಮಾಡಿದರು. ಮಲ್ಲನಮೂಲೆ ಮಠಾಧೀಶರಾಗಿದ್ದ ಲಿಂಗೈಕ್ಯ ಚನ್ನಬಸವ ಸ್ವಾಮೀಜಿ ಬಗ್ಗೆ ನಿವೃತ್ತ ಪ್ರಾಂಶುಪಾಲ ಡಿಎಸ್. ಸದಾಶಿವಮೂರ್ತಿ ನುಡಿನಮನ ಸಲ್ಲಿಸಿದರು. ಮಲ್ಲನಮೂಲೆ ಮಠದ ಇಮ್ಮಡಿ ಸಿದ್ದಲಿಂಗ ಸ್ವಾಮೀಜಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರಾಮದ ಗುರುಕಂಬಳೀಶ್ವರ ಮಠದ ಮಠಾಧೀಶ ಮಹದೇವ ಸ್ವಾಮೀಜಿ ಅವರಿಗೆ ಗುರುವಂದನೆ ನೆರವೇರಿಸಿದರು.

ಚಾಮರಾಜನಗರ ಸಿದ್ಧಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷರಾದ ಚನ್ನಬಸವ ಸ್ವಾಮೀಜಿ, ಮುಡುಕನಪುರ ಹಲವಾರು ಮಠಾಧ್ಯಕ್ಷರಾದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭೆ ಜಿಲ್ಲಾಧ್ಯಕ್ಷ ಮೂಡ್ಲು ಪುರ ನಂದೀಶ್, ಉಡಿಗಾಲ, ನಂಜೇದೇವನಪುರ, ಗಟ್ಟವಾಡಿಪುರ, ಮೇಲಾಜಿಪುರ, ಭುಜಗಯ್ಯನಹುಂಡಿ, ಸಾಗಡೆ, ಕೊಡಗಾಪುರ, ಗಟ್ಟವಾಡಿ, ಕುರಟ್ಟಿ ಮಠಾಧೀಶರು ಭಾಗವಹಿಸಿದ್ದರು.

ಶಿಕ್ಷಕ ಶಾಂತರಾಜುಗೆ ಆರ್ಯಭಟ ಪ್ರಶಸ್ತಿ ಪ್ರದಾನ



ಕೊಳ್ಳೇಗಾಲ, ಮೇ 24– ಪಟ್ಟಣದ ಹನೂರು ಜಿ.ವಿ.ಗೌಡ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಶಾಂತರಾಜು ಅವರಿಗೆ ಆರ್ಯಭಟ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್, ನಾಡೋಜ ಡಾ.ಮಹೇಶ್ ಜೋಶಿ, ಎಚ್.ಎಲ್. ಎನ್.ರಾವ್ ಇನ್ನಿತರ ಗಣ್ಯರ ಸಮ್ಮುಖದಲ್ಲಿ ಶಾಂತರಾಜು ಪ್ರಶಸ್ತಿ ಸ್ವೀಕರಿಸಿದರು

ಶಾಂತರಾಜು ಸಲ್ಲಿಸಿರುವ ಶೈಕ್ಷಣಿಕ ಸೇವೆಗೆ ಈಗಾಗಲೇ ಜನಮೆಚ್ಚಿದ ಶಿಕ್ಷಕ, ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಸಂದಿವೆ.

ಮೈಸೂರು ಮಿತ್ರ
ಸೋಮವಾರ 25 ಮೇ 2026

ಬಸವಣ್ಣನವರ ತತ್ವ ಸಿದ್ಧಾಂತ ಅಳವಡಿಸಿಕೊಳ್ಳಿ

ವಾಟಾಳು ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಸಲಹೆ



ಬಸವೇಶ್ವರರ ಪ್ರತಿಮೆ ಮೆರವಣಿಗೆಗೆ ವಾಟಾಳು ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಚಾಲನೆ ನೀಡಿದರು.

ತಿ.ನರಸೀಪುರ, ಮೇ 24– ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಆಚರಿಸುವುದು ಮುಖ್ಯವಲ್ಲ. ಅವರ ತತ್ವ–ಸಿದ್ಧಾಂತಗಳನ್ನು ನಿತ್ಯ ಜೀವನದಲ್ಲಿ ಆಚರಣೆಗೆ ತರುವುದು ಮುಖ್ಯ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಪೀಠಾಧ್ಯಕ್ಷ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲೂಕಿನ ವಾಟಾಳು ಗ್ರಾಮದಲ್ಲಿ ಬಸವ ಬಳಗದಿಂದ ಮಠದ ಆವರಣದಲ್ಲಿ ಆಯೋಜಿಸಿದ್ದ ಬಸವ ಜಯಂತಿಯಲ್ಲಿ ಬಸವಣ್ಣನವರ ಪ್ರತಿಮೆ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ಬಸವಣ್ಣನವರು ಕಾಯಕವೇ ಕೈಲಾಸ, ದಾಸೋಹ, ಸಮಾನತೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಸಮಾಜಕ್ಕೆ ನೀಡಿದ್ದು, ಪ್ರತಿಯೊಬ್ಬರೂ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು. ಬಸವಣ್ಣನವರ ವಚನಗಳು ಸಮಾಜದ ಅಂಧ ಶ್ರದ್ಧೆ, ಅಸಮಾನತೆ ಮತ್ತು ಜಾತಿ ಭೇದವನ್ನು ನಿವಾರಿಸುವ ಶಕ್ತಿ ಹೊಂದಿವೆ. ಕೇವಲ ಜಯಂತಿ ಮೆರವಣಿಗೆ ಹಾಗೂ ಕಾರ್ಯಕ್ರಮಗಳಿಗೆ ಸೀಮಿತವಾಗದೆ ಅವರ ಚಿಂತನೆಗಳನ್ನು ಮನೆಮನೆಗೂ ತಲುಪಿಸುವ ಕೆಲಸ ಆಗಬೇಕು ಎಂದರು.

ಯುವ ಜನತೆ ಬಸವ ತತ್ವಗಳನ್ನು ಜೀವನದ ಮಾರ್ಗದರ್ಶಿಯಾಗಿ ಸ್ವೀಕರಿಸಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಸತ್ಯ, ಶ್ರಮ, ಪ್ರಾಮಾಣಿಕತೆ ಮತ್ತು ಸೇವಾ ಮನೋಭಾವವನ್ನು ಬೆಳೆಸಿಕೊಳ್ಳುವುದೇ ಬಸವಣ್ಣನವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಅವರು ಅಭಿಪ್ರಾಯಪಟ್ಟರು.

ಗ್ರಾಮೀಣ ಪ್ರದೇಶಗಳಲ್ಲಿ ಬಸವಣ್ಣನವರ ಜಯಂತಿ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ನಡೆಯುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಮೈಸೂರಿನ ಕಾರ್ಯಕ್ರಮಕ್ಕೆ ಹೋಗಿದ್ದ ಸಂದರ್ಭ ಬಸವಣ್ಣನವರ 300 ವಚನಗಳನ್ನು ಚಿತ್ರದ ಮೂಲಕ ಬಿಡಿಸಲಾಗಿತ್ತು. ಅದೇ ರೀತಿ ಗ್ರಾಮ ಮಟ್ಟದಲ್ಲೂ ವಚನಗಳನ್ನು ಚಿತ್ರಪಟದ ಮೂಲಕ ಬಿಡಿಸಲು ತಿಳಿಸಲಾಗಿದ್ದು, ಶೀಘ್ರ ಗ್ರಾಮ ಮಟ್ಟದಲ್ಲೂ ಈ ಕೆಲಸ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆನಂತರ ಬೆಳ್ಳಿ ರಥದಲ್ಲಿ ವಿಶ್ವಗುರು ಬಸವೇಶ್ವರರ ಭವ್ಯ ಪ್ರತಿಮೆಯನ್ನು ಗ್ರಾಮದ ಮುಖ್ಯ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು. ವಿವಿಧ ಕಲಾ ತಂಡಗಳು, ಡೊಳ್ಳು ಕುಣಿತ ಹಾಗೂ ಭಕ್ತರ ಜಯಘೋಷಗಳ ನಡುವೆ ನಡೆದ ಮೆರವಣಿಗೆ ಗಮನ ಸೆಳೆಯಿತು. ಬಸವ ಜಯಂತಿ ಹಿನ್ನೆಲೆಯಲ್ಲಿ ಇಡೀ ಗ್ರಾಮವನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಮೆರವಣಿಗೆ ಹೊರಡುವ ಬೀದಿಯ ಮನೆಗಳ ಮುಂದೆ ಬಣ್ಣ ಬಣ್ಣದ ರಂಗೋಲಿಗಳನ್ನು ಬಿಡಿಸಲಾಗಿತ್ತು. ಕಾರ್ಯಕ್ರಮ ಆಯೋಜಿಸಿದ್ದ ಬಸವ ಬಳಗದ ಯುವಕರು ಮೆರವಣಿಗೆಯುದ್ದಕ್ಕೂ ನೃತ್ಯ ಪ್ರದರ್ಶನ ಮಾಡುವ ಮೂಲಕ ಸಂಭ್ರಮಿಸಿದರು. ಮಠದಲ್ಲಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಈ ವೇಳೆ ಹೊಸೂರುಹುಂಡಿ ಗುರು ಮಲ್ಲೇಶ್ವರ ದಾಸೋಹ ಮಠದ ರಾಜಶೇಖರ ಸ್ವಾಮೀಜಿ, ಬಿಲಿಗೆರೆಹುಂಡಿ ಭಿಕ್ಷದ ಮಠದ ಗುರುಸ್ವಾಮೀಜಿ, ನೆರಗ್ಯಾತನಹಳ್ಳಿಯ ಶಿವ ಕುಮಾರಸ್ವಾಮೀಜಿ, ವಾಟಾಳು ಮಠದ ಕಿರಿಯ ಶ್ರೀಗಳು, ಊರಿನ ಗೌಡರು, ಬಸವ ಬಳಗದ ಯುವಕರು, ಯಜಮಾನರು, ಮುಖಂಡರು ಭಾಗವಹಿಸಿದ್ದರು.

> ಜಾತಿ, ಧರ್ಮ, ವರ್ಣಭೇದವಿಲ್ಲದೆ ಎಲ್ಲರನ್ನು ಸಮಾನವಾಗಿ ಕಾಣುವ ಬಸವಣ್ಣನವರ ಸಂದೇಶ ಇಂದಿನ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿದೆ. ಯುವ ಪೀಳಿಗೆ ಬಸವಣ್ಣನವರ ಆದರ್ಶಗಳನ್ನು ಅಳವಡಿಸಿಕೊಂಡು ಸತ್ಯ, ನ್ಯಾಯ ಮತ್ತು ಮಾನವೀಯತೆಯ ದಾರಿಯಲ್ಲಿ ಸಾಗಬೇಕು. ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಮ ಸಮಾಜ ನಿರ್ಮಾಣಕ್ಕೆ ಬಸವ ತತ್ವಗಳು ದಾರಿ ದೀಪವಾಗಿವೆ.
>
> –ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ವಾಟಾಳುಶ್ರೀ.

ವಿಜೃಂಭಣೆಯ ಶ್ರೀದೊಡ್ಡಮ್ಮ ತಾಯಿ ರಥೋತ್ಸವ



ಗೊರಹಳ್ಳಿಯಲ್ಲಿ ಶ್ರೀದೊಡ್ಡಮ್ಮ ತಾಯಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.


ಬೆಟ್ಟದಪುರ, ಮೇ 24– ಇಲ್ಲಿಗೆ ಸಮೀಪದ ಗೊರಹಳ್ಳಿ ಗ್ರಾಮದಲ್ಲಿ ಶ್ರೀದೊಡ್ಡಮ್ಮ ತಾಯಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಸುಮಾರು 3 ವರ್ಷಗಳ ಬಳಿಕ ನಡೆದ ರಥೋತ್ಸವದಲ್ಲಿ ಗೊರಹಳ್ಳಿ, ಕುಳ್ಳಯ್ಯ ಕೊಪ್ಪಲು, ಕರಡಿಪುರ ಹಾಗೂ ದೇವಿನಗರ ಗ್ರಾಮಗಳ ಜನರು ಭಾಗವಹಿಸಿದ್ದರು. ರಥೋತ್ಸವ ಅಂಗವಾಗಿ ರಥದ ಮೇಲೆ ಕಳಸ ಪ್ರತಿಷ್ಠಾಪನೆ ಮಾಡಿ, ಬಳಿಕ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿ ರಥದಲ್ಲಿ ಪ್ರತಿಷ್ಠಾಪನೆ ಮಾಡಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಬಳಿಕ ಜಮಾಯಿಸಿದ್ದ ನೂರಾರು ಭಕ್ತರು ಗ್ರಾಮದ ಶ್ರೀಬಸವೇಶ್ವರ ದೇವಸ್ಥಾನದಿಂದ ಶ್ರೀದೊಡ್ಡಮ್ಮ ಹಾಗೂ ಚಿಕ್ಕಮ್ಮ ತಾಯಿ ದೇವಸ್ಥಾನದವರೆಗೆ ರಥ ಎಳೆದರು.

ಈ ವೇಳೆ ಡೊಳ್ಳು ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಿದ್ದವು. ರಥೋತ್ಸವ ಅಂಗವಾಗಿ ಇಡೀ ಗ್ರಾಮವೇ ಹಸಿರು ತೋರಣ, ಬಣ್ಣ ಬಣ್ಣದ ದೀಪಾಲಂಕಾರ ಹಾಗೂ ಕೇಸರಿ ಬಾವುಟಗಳು ರಾರಾಜಿಸುತ್ತಿದ್ದವು. ಭಕ್ತರು ಬೆಳಗ್ಗೆಯಿಂದ ರಾತ್ರಿವರೆಗೂ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು.

ಸದ್ಗುರುವಿನ ಕೃಪೆಯಿಂದ ಆತ್ಮ ಸಾಕ್ಷಾತ್ಕಾರ ಸಾಧ್ಯ

ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಅನಂತರಾಮು



ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ ಕೃತಿಯ ಕುರಿತು ಅಧ್ಯಯನ ಶಿಬಿರ ನಡೆಯಿತು.

ನಂಜನಗೂಡು, ಮೇ 24– ಸದ್ಗುರುವಿನ ಕೃಪೆಯಿಂದ ಆತ್ಮ ಸಾಕ್ಷಾತ್ಕಾರ ಸಾಧ್ಯ ಎಂದು ನಿವೃತ್ತ ಪ್ರಾಧ್ಯಾಪಕ ಡಾ.ಕೆ. ಅನಂತರಾಮು ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀವೀರ ಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ ಕೃತಿಯ ಕುರಿತು ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಏರ್ಪಡಿಸಿರುವ ಅಧ್ಯಯನ ಶಿಬಿರದಲ್ಲಿ ಮಾತನಾಡಿದ ಅವರು, ಬಂಧ ಮೋಕ್ಷಗಳ ರಹಸ್ಯವನ್ನು ಗುರುವಿನ ಸಹಾಯದಿಂದ ತಿಳಿಯಬಹುದು. ಮನಸ್ಸಿನ ಏಕಾಗ್ರತೆಯ ಮೂಲಕ ಬ್ರಹ್ಮ ಸ್ಥಿತಿ ಪಡೆಯಬಹುದು. ಭಕ್ತಿ ಮಾರ್ಗದಲ್ಲಿ ನಡೆದು ಆತ್ಮವನ್ನು ಅರಿಯಬೇಕು. ಶರೀರ ನಶ್ವರ, ಆತ್ಮ ಶಾಶ್ವತವಾದುದು. ವಿವೇಕ ಚಿಂತಾಮಣಿಯ ದ್ವಿತೀಯ ಪರಿಚ್ಛೇದದಲ್ಲಿ ಆಗಮಗಳು, ಶೈವ ಸಿದ್ಧಾಂತ ಪ್ರಭೇದಗಳು ಹಾಗೂ ವಿಶೇಷವಾಗಿ ವೀರಶೈವ ಸಿದ್ಧಾಂತ ಕುರಿತು ವಿವರಿಸಿದರು. ಗುರುವಿನಿಂದ ಲಿಂಗ ದೀಕ್ಷೆ ಪಡೆದು ಶ್ರದ್ಧೆಯಿಂದ ಶಿವಧ್ಯಾನ ಮಾಡಬೇಕು. ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲ ಮೆಟ್ಟಿಲುಗಳನ್ನು ಹಂತ ಹಂತವಾಗಿ ಏರಿ ಕೊನೆಗೆ ಶಿವನಲ್ಲಿ ಐಕ್ಯನಾಗಬಹುದು ಎಂದರು.

ಘೋಡಗೇರಿ ಶ್ರೀಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮೀಜಿ ಮಾತನಾಡಿ, ಭಾರತದ ನೆಲ, ಜಲ, ವಾಯು ಅತ್ಯಂತ ಪವಿತ್ರವಾದವು. ಭಕ್ತಿ, ಧ್ಯಾನ ಮತ್ತು ವೈರಾಗ್ಯವಿರುವ ಪುಣ್ಯಭೂಮಿ. ವಿವೇಕ ಚಿಂತಾಮಣಿಯ ಮೃತ್ಯುಲೋಕ ಸ್ಥಿತಿ ವರ್ಣನೆಯಲ್ಲಿ ಸಪ್ತ ದ್ವೀಪಗಳು ಹಾಗೂ ಸಪ್ತ ಸಾಗರಗಳ ವರ್ಣನೆ ಮಾಡಿದ ಅವರು, ಆತ್ಮ ಜ್ಞಾನಿಯಾದವನಿಗೆ ಭೌಗೋಳಿಕ ಸನ್ನಿವೇಶಗಳ ಬಗ್ಗೆ ಅರಿವು ಇರಬೇಕು. ಪ್ರಕೃತಿಯಲ್ಲಿ ಅಪಾರ ಶಕ್ತಿ ಇದೆ. ಇದು ಜೀವಿಗಳ ಉಳಿವಿಗೆ ಕಾರಣವಾಗಿವೆ ಎಂದರು.

ಪ್ರಾಣಿಕ್ ಹೀಲಿಂಗ್ ತಜ್ಞ ಪಿ.ಆರ್. ರಾಹುಲ್ ಶ್ರೀವತ್ಸ ಮಾತನಾಡಿ, ಆತ್ಮವು ಈ ದೇಹಕ್ಕೆ ಚೈತನ್ಯ ನೀಡುತ್ತದೆ. ಮನಸ್ಸು ಮತ್ತು ದೇಹವನ್ನು ಒಂದಾಗಿಸುವುದೇ ಧ್ಯಾನ. ಪ್ರಕೃತಿಯಲ್ಲಿರುವ ಶಕ್ತಿಯನ್ನು ದೇಹದ ಶಕ್ತಿಯೊಂದಿಗೆ ಪರಸ್ಪರ ಸಮ್ಮಿಲನಗೊಳಿಸಬೇಕು. ಆಗ ದೇಹದಲ್ಲಿರುವ ನ್ಯೂನತೆಗಳು ಮತ್ತು ನೋವು ಕಡಿಮೆಯಾಗುತ್ತದೆ ಎಂದರು.

ಸಂಜೆ ಕಪಿಲಾ ನದಿ ತೀರದಲ್ಲಿ ಪ್ರಾರ್ಥನೆ ಹಾಗೂ ಕಪಿಲಾರತಿ ಕಾರ್ಯಕ್ರಮವು ಶ್ರದ್ಧಾ ಭಕ್ತಿಗಳಿಂದ ನೆರವೇರಿತು. ಮಹದೇವ ಪ್ರಸಾದ್ ಅವರು ನದಿಗಳ ಮಹತ್ವಗಳ ಕುರಿತು ಮಾಹಿತಿ ನೀಡಿದರು. ಆಲಮಟ್ಟಿಯ ರುದ್ರಮುನಿ ಸ್ವಾಮೀಜಿ ನದಿಗಳ ಸಂರಕ್ಷಣೆ ಮಾಡುವಂತೆ ಎಲ್ಲರಿಗೂ ಭಗವಂತನ ಹೆಸರಿನಲ್ಲಿ ಪ್ರತಿಜ್ಞಾವಿಧಿ ಬೋಧಿಸಿದರು. ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.

ಅಕ್ರಮ ದಾಸ್ತಾನು: 600 ಮೂಟೆ ಯೂರಿಯಾ ವಶ



ಅಕ್ರಮವಾಗಿ ದಾಸ್ತಾನು ಮಾಡಿದ್ದ ಯೂರಿಯಾ ಮೂಟೆಗಳನ್ನು ವಶಪಡಿಸಿಕೊಳ್ಳಲಾಯಿತು.

ತಿ.ನರಸೀಪುರ: ತಾಲೂಕಿನ ಕೊಡಗಹಳ್ಳಿ ಗ್ರಾಮದ ತೋಟದಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ಸುಮಾರು 600 ಮೂಟೆ ಯೂರಿಯಾವನ್ನು ಕೃಷಿ ಇಲಾಖೆ ಜಾಗೃತ ಜಾರಿದಳದ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ.

ಇದಾಯತ್ ಉಲ್ಲಾ ಬಿನ್ ಶೇಕ್ ಹೈದರ್ ಹುಸೇನ್ ಅವರ ತೋಟದ ಮೇಲೆ ದಾಳಿ ನಡೆಸಿದ ಸಿಬ್ಬಂದಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ಯೂರಿಯಾವನ್ನು ವಶಕ್ಕೆ ಪಡೆದಿದ್ದಾರೆ. ಸದರಿ ಗೊಬ್ಬರವನ್ನು ಕಳ ಸಂತೆಯಲ್ಲಿ ಅಕ್ರಮವಾಗಿ ಸಾಗಿಸಿ ಕೈಗಾರಿಕೆ ಉಪಯೋಗಕ್ಕೆ ಬಳಸಲು ಉದ್ದೇಶಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಸಂಬಂಧ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬನ್ನೂರು ಹೋಬಳಿಯಲ್ಲಿ ಈ ಹಿಂದೆಯೂ ಹಲವು ಬಾರಿ ಅಕ್ರಮವಾಗಿ ರಸಗೊಬ್ಬರಗಳನ್ನು ದಾಸ್ತಾನು, ಲಾರಿಗಳಲ್ಲಿ ಸಾಗಿಸುತ್ತಿದ್ದ ವೇಳೆ ಈ ಭಾಗದ ರೈತರು ಅವುಗಳನ್ನು ಪತ್ತೆ ಮಾಡಿದ್ದರು. ಈ ವೇಳೆ ಪ್ರಕರಣ ದಾಖಲಾಗಿತ್ತು. ಆದರೆ ಆ ಪ್ರಕರಣಗಳ ತನಿಖೆ ಏನಾಯಿತು ಎಂಬುದರ ಬಗ್ಗೆ ಮಾಹಿತಿ ಇಲ್ಲದಂತಾಗಿದೆ.

ಅಕ್ರಮದಲ್ಲಿ ಈ ಭಾಗದ ಕೆಲವು ಪರವಾನಗಿ ಪಡೆದ ರಸಗೊಬ್ಬರ ಮಾರಾಟಗಾರರು ಭಾಗಿಯಾಗಿದ್ದು, ರೈತರಿಗೆ ರಿಯಾಯಿತಿ ದರದಲ್ಲಿ ಸಿಗಬೇಕಾಗಿದ್ದ ಯೂರಿಯಾ ರಸಗೊಬ್ಬರ ಕಾಳಸಂತೆಯಲ್ಲಿ ಕೈಗಾರಿಕಾ ಮತ್ತು ಇತರೆ ಉದ್ದೇಶಗಳಿಗೆ ಅಧಿಕ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಕೃಷಿ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳು ಈ ಸಂಬಂಧ ಸೂಕ್ತ ತನಿಖೆ ನಡೆಸಿ ಅಪರಾಧಿಗಳನ್ನು ಪತ್ತೆ ಮಾಡಿ ಅವರಿಗೆ ನೀಡಿರುವ ಪರವಾನಿಗೆ ರದ್ದುಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಈ ರೀತಿಯ ಅಕ್ರಮಗಳು ನಿರಂತರವಾಗಿ ನಡೆಯುತ್ತವೆ. ಇದರಿಂದ ರೈತರಿಗೆ ಸೂಕ್ತ ಸಮಯದಲ್ಲಿ ರಸಗೊಬ್ಬರ ದೊರೆಯುದೆ ಸಮಸ್ಯೆಯಾಗುತ್ತದೆ. ಅಲ್ಲದೇ ರಸಗೊಬ್ಬರ ಮಾರಾಟ ಗಾರರು ಹೆಚ್ಚಿನ ಬೆಲೆಗೆ ಕಾಳ ಸಂತೆಯಲ್ಲಿ ಮಾರಾಟ ಮಾಡುವ ಮೂಲಕ ರೈತರನ್ನು ಸುಲಿಗೆ ಮಾಡುತ್ತಾರೆ ಎಂದು ರೈತರು, ಸಾರ್ವಜನಿಕರು ಆರೋಪಿಸಿದರು.

ಸಹಾಯಕ ಕೃಷಿ ನಿರ್ದೇಶಕರು, ರೂಪ, ಕೃಷಿ ಅಧಿಕಾರಿ ಬನ್ನೂರು ಹೋಬಳಿ ವಿಶಾಲೂ, ಉಪ ಕೃಷಿ ನಿರ್ದೇಶಕರು ಮೈಸೂರು ರಾಜು, ಜಾರಿದಳ ಜಂಟಿ ಕೃಷಿ ನಿರ್ದೇಶಕರು ಶ್ರೀ ರಾಮಕೃಷ್ಣ, ಉಪ ಕೃಷಿ ನಿರ್ದೇಶಕರು ಮಮತಾ, ಸಹಾಯಕ ಕೃಷಿ ನಿರ್ದೇಶಕರು ಸತೀಶ್, ಸಹಾಯಕ ತಂತ್ರಿಕ ವ್ಯವಸ್ಥಾಪಕರು ಶ್ರೀ ಶಿವರಾಮು ಹಾಜರಿದ್ದರು .

ಕಬಿನಿ ಜಲಾಶಯದಲ್ಲಿ ಕುಸಿದ ನೀರಿನ ಮಟ್ಟ

ಗರಿಷ್ಠ 2284 ಅಡಿ ಸಾಮರ್ಥ್ಯದ ಜಲಾಶಯದಲ್ಲಿ 2253 ಅಡಿ ಸಂಗ್ರಹ



ಬೀಚನಹಳ್ಳಿ ಬಳಿಯ ಕಬಿನಿ ಜಲಾಶಯ.

ಹೆಚ್.ಡಿ.ಕೋಟೆ, ಮೇ 24– ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಹಾಗೂ ರಾಜ್ಯದಲ್ಲೇ ಮೊಟ್ಟ ಮೊದಲು ತುಂಬುವ ಜಲಾಶಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕಬಿನಿ ಜಲಾಶಯದಲ್ಲಿ ನೀರಿನ ಮಟ್ಟ 2253 ಅಡಿಗೆ ಕುಸಿದಿದೆ.

ಜಲಾಶಯದ ಗರಿಷ್ಠ ಮಟ್ಟ 2284 ಅಡಿಗಳಾಗಿದ್ದು, ಪ್ರಸ್ತುತ 2253 ಅಡಿ ನೀರು ಸಂಗ್ರಹವಾಗಿದೆ. ಜಲಾಶಯಕ್ಕೆ 75 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಕುಡಿಯುವ ನೀರಿಗಾಗಿ ಜಲಾಶಯದಿಂದ 700 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಕಳೆದ ವರ್ಷ ಇದೇ ಸಮಯಕ್ಕೆ ಜಲಾಶಯದಲ್ಲಿ 2260 ಅಡಿ ನೀರಿನ ಸಂಗ್ರಹವಿತ್ತು ಎನ್ನಲಾಗಿದೆ.

ನೆರೆಯ ಕೇರಳಂ ರಾಜ್ಯದಲ್ಲಿ ಮೇ 25ರಂದು ಮುಂಗಾರು ಆರಂಭಗೊಳ್ಳಲಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ಕಬಿನಿ ಜಲಾಶಯದ ಅಧಿಕಾರಿಗಳಿಗೆ ತಿಳಿಸಿದ್ದು, ವಾರದ ನಂತರ ಮುಂಗಾರು ಕರ್ನಾಟಕಕ್ಕೆ ಪ್ರವೇಶಿಸಲಿದೆ ಎನ್ನಲಾಗಿದ್ದು, ಮುಂಗಾರು ಮಳೆ ನಿಗದಿತ ಅವಧಿಗೆ ಆಗದಿದ್ದಲ್ಲಿ ಬೆಂಗಳೂರು, ಮೈಸೂರು, ಚಾಮರಾಜನಗರ ಸೇರಿದಂತೆ ಹಲವು ಜಿಲ್ಲೆಗಳಿಗೆ ಕುಡಿಯುವ ನೀರಿನ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ.

ಪ್ರಾಣಿಗಳಿಗೆ ಕುಡಿಯುವ ನೀರಿನ ತೊಂದರೆ ಇಲ್ಲ: ಅಂತರಸಂತೆ ವಲಯ ಅರಣ್ಯ ಅಧಿಕಾರಿ ಸಿದ್ದರಾಜು ಮಾತನಾಡಿ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಹೆಚ್.ಡಿ.ಕೋಟೆ ಅರಣ್ಯ ವ್ಯಾಪ್ತಿಯಲ್ಲಿ 22 ಕೆರೆಗಳಿದ್ದು, ಸೋಲಾರ್ ಪಂಪ್‌ಸೆಟ್ ಮೂಲಕ ಟೈಗರ್ ಟ್ಯಾಂಕ್, ಸೋಮಯ್ಯನ ಕಟ್ಟೆಕೆರೆ, ಶಿವಮಾದನಹಳ್ಳ, ಬೈಸನ್ ಟ್ಯಾಂಕ್ ಕೆರೆಗಳಿಗೆ ಸಂಪೂರ್ಣ ನೀರು ತುಂಬಿಸಲಾಗಿದೆ. ಉಳಿದ 18 ಕೆರೆಗಳಲ್ಲಿ ಅಲ್ಪಸ್ವಲ್ಪ ನೀರಿದೆ. ಕೆಲವು ಪ್ರಾಣಿಗಳು ಕೆರೆಯನ್ನು ಆಶ್ರಯಿಸಿದರೆ ಇನ್ನು ಕೆಲವು ಪ್ರಾಣಿಗಳು ಕಬಿನಿ ಹಿನ್ನೀರನ್ನು ಅವಲಂಬಿಸಿವೆ. ಆದರೆ ಯಾವುದೇ ನೀರಿನ ಸಮಸ್ಯೆ ಕಂಡು ಬಂದಿಲ್ಲ. ಪ್ರಸ್ತುತ ಕಾಡಿನ ಭಾಗದಲ್ಲಿ ಅಲ್ಪ ಪ್ರಮಾಣದಲ್ಲಿ ಮಳೆಯಾಗಿದ್ದು, ಕಾಡು ಹಸಿರಿನಿಂದ ಕೂಡಿದೆ ಎಂದರು.

ಬೃಹತ್ ಉದ್ಯೋಗ ಮೇಳ: 845 ಮಂದಿಗೆ ಉದ್ಯೋಗ



ಉದ್ಯೋಗ ಮೇಳದಲ್ಲಿ ನಿರುದ್ಯೋಗಿಗಳಿಗೆ ಆದೇಶ ಪತ್ರ ವಿತರಿಸಲಾಯಿತು.

ಹುಣಸೂರು, ಮೇ 24– ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ 59ನೇ ಹುಟ್ಟುಹಬ್ಬದ ಅಂಗವಾಗಿ ನಗರದಲ್ಲಿ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳದಲ್ಲಿ 845 ಮಂದಿ ಉದ್ಯೋಗ ಪಡೆದುಕೊಂಡರು.

ನಗರದ ಅಂಬೇಡ್ಕರ್ ಭವನದ ಆವರಣದಲ್ಲಿ ಸ್ನೇಹಜೀವಿ ಗ್ರಾಮೀಣಾಭಿವೃದ್ಧಿಯು ಬೆಂಗಳೂರಿನ ವಿಷನ್ ಅಸ್ತ್ರ ಇವಿ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ರಾಜ್ಯದ ಹುಣಸೂರು ತಾಲೂಕಿನ 507, ಪಿರಿಯಾಪಟ್ಟಣದ 156, ಕೆ.ಆರ್.ನಗರದ 60, ಹೆಚ್.ಡಿ.ಕೋಟೆ ತಾಲೂಕಿನ 35 ಮಂದಿ ಸೇರಿದಂತೆ ಒಟ್ಟು 845 ಮಂದಿ ಕಡಕೊಳದ ಟಿವಿಎಸ್ ಕಂಪನಿ ಉದ್ಯೋಗಿಗಳಾಗಿ ಆಯ್ಕೆಯಾದರು. ಇವರಿಗೆ ಸ್ಥಳದಲ್ಲೇ ನೇಮಕಾತಿ ಪತ್ರಗಳನ್ನು ವಿತರಿಸಲಾಯಿತು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಇಂದು ದೇಶದೆಲ್ಲೆಡೆ ಲಕ್ಷಾಂತರ ಮಂದಿ ನಿರುದ್ಯೋಗಿಗಳು ಇದ್ದಾರೆ. ಎಲ್ಲರೂ ಸರ್ಕಾರಿ ಉದ್ಯೋಗ ಪಡೆಯುವುದು ಕಷ್ಟ, ಹೀಗಾಗಿ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಪಡೆಯುವುದು ಅನಿವಾರ್ಯ. ಈ ನಿಟ್ಟಿನಲ್ಲಿ ಉತ್ತಮ ಸಂಬಳ, ಸೌಲಭ್ಯ, ಸೇವಾಭದ್ರತೆ ನೀಡುವ ಟಿವಿಎಸ್ ಕಂಪನಿಯೊಂದಿಗೆ ವಿಷನ್ ಅಸ್ತ್ರ ಇವಿ ಅಕಾಡೆಮಿ ಮೂಲಕ ಈ ಬೃಹತ್ ಮೇಳ ಆಯೋಜಿಸಿದ್ದು, ಉದ್ಯೋಗ ಪಡೆದಿರುವವರು ಸಂಬಳಕ್ಕೆ ಆದ್ಯತೆ ನೀಡದೆ ಭವಿಷ್ಯ ರೂಪಿಸಿಕೊಳ್ಳಲು ಅವಕಾಶ ಸಿಕ್ಕಿದೆ ಎಂದು ತಿಳಿದು ನಂಬಿಕೆ, ವಿಶ್ವಾಸದಿಂದ ಕೆಲಸ ಮಾಡಿ ಉನ್ನತಿ ಹೊಂದಿರಿ. ಮುಂದೆಯೂ ಇಂತಹ ಮೇಳವನ್ನು ಆಯೋಜಿಸಲಾಗುವುದು ಎಂದರು.

ಈ ವೇಳೆ ವಿಷನ್ ಅಸ್ತ್ರ ಇವಿ ಅಕಾಡೆಮಿ ಚೇರ್‌ಮನ್ ಯಧುಜತವದನ್, ಸಿಇಓ ನಿಖಿಲ್‌ಜೈನ್ ಉದ್ಯೋಗದ ಕುರಿತು ಮಾಹಿತಿ ನೀಡಿದರು. ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ತಾಲೂಕು ಅಧ್ಯಕ್ಷ ರಾಘು, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್, ಸ್ನೇಹಜೀವಿ ಬಳಗದ ಅಧ್ಯಕ್ಷ ಆನಂದ್, ಪ್ರಕಾಶ್, ಗಣೇಶ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ರಾಜ್ಯ ರೈತ ಕಲ್ಯಾಣ ಸಂಘದ ನಾಮಫಲಕ ಉದ್ಘಾಟನೆ



ಸರಗೂರು: ತಾಲೂಕಿನ ಕುನ್ನಪಟ್ಟಣ ಗ್ರಾಮದಲ್ಲಿ ನೂತನ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ನಾಮಫಲಕವನ್ನು ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಚಂದನ ಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮಣ್ಣು ಜೀವಂತವಾಗಿದ್ದರೆ ಕೃಷಿ ಜೀವಂತವಾಗಿರುತ್ತದೆ. ಮಣ್ಣಿನ ಶಕ್ತಿ ನಮ್ಮ ಶಕ್ತಿ. ಅದನ್ನು ಕಾಪಾಡುವ ಹೊಣೆ ನಮ್ಮೆಲ್ಲರದು ಎಂದರು.

ಇದೇ ವೇಳೆ ಗ್ರಾಮಸ್ಥರು ಚಂದನ್‌ಗೌಡ ಅವರನ್ನು ಸನ್ಮಾನಿಸಿದರು. ಪ್ರಗತಿಪರ ರೈತ ಪಿ.ಚಿನ್ನಸ್ವಾಮಿ, ಸಂಘದ ಕುನ್ನಪಟ್ಟಣ ಗ್ರಾಮದ ಅಧ್ಯಕ್ಷ ಪಿ.ಬೆಟ್ಟನಾಯಕ, ಉಪಾಧ್ಯಕ್ಷ ಎಸ್.ಮಂಚನಾಯಕ, ಕಾರ್ಯಾಧ್ಯಕ್ಷ ಡಿ.ರಾಜೇಶ್, ಸದಸ್ಯರಾದ ಡಿ.ರಾಜೇಶ್, ಬಿ.ಬೆಟ್ಟನಾಯಕ, ಎನ್.ಶಿವಕುಮಾರ್, ಸಿ.ಬೆಟ್ಟನಾಯಕ, ಆರ್.ಬೆಟ್ಟನಾಯಕ, ನಿಂಗರಾಜು, ಸಣ್ಣವೀರ ನಾಯಕ, ಈರನಾಯಕ, ಎಂ.ಚನ್ನನಾಯಕ, ಡಿ.ಬೆಟ್ಟ ನಾಯಕ, ಎ.ಬೆಟ್ಟನಾಯಕ, ಕುಮಾರ್ ನಾಯಕ, ಸಿದ್ದಲಿಂಗನಾಯಕ, ನಿಂಗನಾಯಕ, ಐ.ಸಿ.ಲಿಂಗನಾಯಕ, ದೇವನಾಯಕ, ಇನ್ನಿತರರಿದ್ದರು.

ಮೂಗೂರು ದೇವಾಲಯದಲ್ಲಿ ಸರದಿ ಪೂಜೆಗೆ ಅಡ್ಡಿ: ಆರೋಪ



> ತಹಸೀಲ್ದಾರ್ ಅವರನ್ನು ದೇವಾಲಯಕ್ಕೆ ಬರಮಾಡಿಕೊಂಡು ಪರಿಶೀಲಿಸಿ ಅಧಿಕಾರಿಗಳ ಆದೇಶದನ್ವಯ ಸರದಿ ಪೂಜೆಗೆ ಅವಕಾಶ ಕಲ್ಪಿಸಲಾಗುವುದು
>
> – ಎಂ.ಬಿ.ಸಾಗರ್, ದೇವಾಲಯದ ಪಾರುಪತ್ತೇದಾರ.

ಮೂಗೂರು, ಮೇ 24– ನ್ಯಾಯಾಲಯ, ಜಿಲ್ಲಾಧಿಕಾರಿ, ತಾಲೂಕು ಆಡಳಿತ ಆದೇಶ ಹೊರಡಿಸಿದರೂ, ಸರದಿ ಪೂಜೆಗೆ ಅವಕಾಶ ನೀಡಲು ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಅರ್ಚಕರು ತಡೆಯೊಡ್ಡಿದ್ದಾರೆ ಎಂದು ಅರ್ಚಕ ವಂಶಸ್ಥ ಕಳಸಪ್ಪ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಲವು ವರ್ಷಗಳಿಂದ ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಪೂಜೆ ಮಾಡುವ ಸೇವೆಯಿಂದ ವಂಚಿತಗೊಂಡ ನಾನು ಕಾನೂನಾತ್ಮಕವಾಗಿ ಹೋರಾಟ ನಡೆಸಿ ಪೂಜೆ ಮಾಡುವ ಹಕ್ಕನ್ನು ಪಡೆದಿದ್ದರೂ, ಆದೇಶ ಉಲ್ಲಂಘನೆ ಮಾಡಿ ದೇವಾಲಯದಿಂದ ಹೊರಗಟ್ಟಿದ್ದಾರೆ ಎಂದು ದೂರಿದರು.

ಗದ್ದಲ: ಜಿಲ್ಲಾಧಿಕಾರಿ ಆದೇಶ ಹಾಗೂ ದಾಖಲೆಗಳೊಂದಿಗೆ ಶನಿವಾರ ದೇವಾಲಯಕ್ಕೆ ಆಗಮಿಸಿದ ಕಳಸಪ್ಪ ಹಾಗೂ ಅರ್ಚಕರ ನಡುವೆ ವಾಕ್ಸಮರ ಏರ್ಪಟ್ಟಿದ್ದು, ಕೆಲವು ಕಾಲ ಗದ್ದಲದ ವಾತಾವರಣ ನಿರ್ಮಾಣವಾಗಿತ್ತು. ಕಳಸಪ್ಪನವರ ಪತ್ನಿ ಹಾಗೂ ಕುಟುಂಬಸ್ಥರು ದೇಗುಲದ ಬಾಗಿಲ ಬಳಿ ನಮಗೆ ಪೂಜೆ ಮಾಡುವ ಅವಕಾಶ ಕಲ್ಪಿಸಬೇಕು ಎಂದು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಭಕ್ತರು ಕೆಲ ಹೊತ್ತು ಅಮ್ಮನವರ ದರ್ಶನವಿಲ್ಲದೇ ಹೊರಗೆ ಉಳಿಯುವಂತಾಯಿತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ದೇವಾಲಯದ ಪಾರುಪತ್ತೇದಾರ ಎಂ.ಬಿ.ಸಾಗರ್ ಪರಿಸ್ಥಿತಿ ತಿಳಿಗೊಳಿಸಿ ಭಕ್ತರು ಅಮ್ಮನವರ ದರ್ಶನ ಪಡೆಯಲು ಅವಕಾಶ ಕಲ್ಪಿಸಿದರು.

ನೃತ್ಯ ದೇಹ, ಮನಸ್ಸಿನ ಭಾವನೆ ವ್ಯಕ್ತಪಡಿಸುವ ಕಲೆ

ವೃತ್ತ ನಿರೀಕ್ಷಕ ಧನಂಜಯ ಅಭಿಪ್ರಾಯ



ವಾರ್ಷಿಕೋತ್ಸವವನ್ನು ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ್ ಉದ್ಘಾಟಿಸಿದರು.

ತಿ.ನರಸೀಪುರ, ಮೇ 24– ಮನಸ್ಸಿನ ಭಾವನೆ ವ್ಯಕ್ತಪಡಿಸುವ ನೃತ್ಯ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿಭಾ ಪ್ರದರ್ಶನಗಳು ಹೆಚ್ಚು ಪ್ರಸ್ತುತವಾಗಿವೆ ಎಂದು ಪಟ್ಟಣ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಧನಂಜಯ ಅಭಿಪ್ರಾಯಪಟ್ಟರು.

ಪಟ್ಟಣದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ಮೆಗಾಸ್ಟಾರ್ ಡ್ಯಾನ್ಸ್ ಕ್ಲಾಸ್ ವತಿಯಿಂದ ಆಯೋಜಿಸಿದ್ದ 10ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನಾವು ಸಂಭ್ರಮಿಸಿದಾಗ ಅತೀ ಹೆಚ್ಚು ಖುಷಿ ಪಟ್ಟಾಗ ನೃತ್ಯ ಮಾಡುತ್ತೇವೆ. ನೃತ್ಯ ದೇಹ ಮತ್ತು ಮನಸ್ಸಿನ ಭಾವನೆಯನ್ನು ವ್ಯಕ್ತಪಡಿಸುವಂತಹ ಕಲೆ. ರಘುನಂದನ್ ಅವರು ಈ ಕಲೆಯನ್ನು ಕಳೆದ 10 ವರ್ಷಗಳಿಂದ ಪೋಷಿಸಿಕೊಂಡು ಬರುತ್ತಿರುವುದು ಅಭಿನಂದನೀಯ ಎಂದರು.

ಹಾಡಿಗೂ ನೃತ್ಯಕ್ಕೂ ಹೊಂದಾಣಿಕೆ ಇರಬೇಕು: ಹಾಡಿನ ಭಾವನೆ, ತಾಳಕ್ಕೆ ತಕ್ಕಂತೆ ನೃತ್ಯ ಮಾಡಿದಾಗ ಮಾತ್ರ ಕಾರ್ಯಕ್ರಮ ಮನ ಸೆಳೆಯುತ್ತದೆ. ಹೊಂದಿಕೆಯಾಗದ ನೃತ್ಯ ಪ್ರದರ್ಶನ ಸೊಗಸನ್ನು ಕಡಿಮೆ ಮಾಡುತ್ತದೆ. ಆದ್ದರಿಂದ ಹಾಡಿನ ಆಶಯಕ್ಕೆ ತಕ್ಕಂತೆ ಹೆಜ್ಜೆ ಮತ್ತು ಭಾವಭಂಗಿ ಅತ್ಯಂತ ಮುಖ್ಯವಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ನಿವೃತ್ತ ಉಪ ನಿರ್ದೇಶಕ ಮರಿಸ್ವಾಮಿ, ಕಳೆದ 10 ವರ್ಷಗಳಿಂದ ಹಲವು ಮಕ್ಕಳಿಗೆ ವೇದಿಕೆ ಕಲ್ಪಿಸಿ ಪ್ರತಿಭಾ ಅನಾವರಣಕ್ಕೆ ಮೆಗಾ ಸ್ಟಾರ್ ನೃತ್ಯ ಶಾಲೆ ಅವಕಾಶ ನೀಡುತ್ತಿದೆ ರಘುನಂದನ್ ಅವರ ಈ ಸಾಧನೆ ಶ್ಲಾಘನೀಯ ಎಂದರು.

ಈ ವೇಳೆ ರೈತ ಮುಖಂಡ ಕಿರಗಸೂರು ಶಂಕರ್, ತಾಪಂ ಇಓ ರಂಗಸ್ವಾಮಿ ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಮೆಗಾಸ್ಟಾರ್ ಡಾನ್ಸ್ ಕ್ಲಾಸ್ ವತಿಯಿಂದ ಸನ್ಮಾನಿಸಲಾಯಿತು. ಪಿಎಚ್‌ಡಿ ಪಡೆದ ಪೊಲೀಸ್ ಇಲಾಖೆಯ ತಲಕಾಡು ಸುರೇಶ್ ಅವರನ್ನು ಕೂಡ ಅಭಿನಂದಿಸಲಾಯಿತು.

ಜೀ ವಾಹಿನಿಯ ಕಾಮಿಡಿ ಕಿಲಾಡಿಗಳು ಖ್ಯಾತಿಯ ಸೀರುಂಡೆ ರಘು, ಯೋಗೇಶ್, ಹಳ್ಳಿ ಪವರ್ ಖ್ಯಾತಿಯ ಮಹಾ ಸತಿ ಗೌಡ ಹಾಸ್ಯ ನಿರೂಪಣೆ ಕಾರ್ಯಕ್ರಮಕ್ಕೆ ಮೆರಗು ತಂದಿತು. ಕಾರ್ಯಕ್ರಮದಲ್ಲಿ ಅಖಿಲ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್, ಕರಾಟೆ ಮಾಸ್ಟರ್ ಸೋಸಲೆ ಸಿದ್ದರಾಜು, ಕೆಇಬಿ ಸಿದ್ದಲಿಂಗ ಸ್ವಾಮಿ, ಸಮಾಜ ಸೇವಕ ಡಾ.ಎಂ. ಮಾದೇಶ್, ಹರೀಶ್ ಹೋಟೆಲ್ ಸದಾಶಿವ, ಕಿರಗಸೂರು ಪ್ರಸಾದ್ ನಾಯಕ್, ಪತ್ರಕರ್ತ ಎಂ.ಮಹದೇವ್, ಸೋಸಲೆ ಗಿರಿಮಲ್ಲೇಶ್, ಮೂಗೂರು ಕುಮಾರಸ್ವಾಮಿ, ನೃತ್ಯ ನಿರ್ದೇಶಕ ರಘುನಂದನ್, ಶಿಕ್ಷಕರಾದ ಸಿದ್ದರಾಜು, ಮುರುಳೀಧರ್, ಉತ್ತಂಬಳ್ಳಿ ನಾಗರಾಜು, ಜಾಕ್ಸನ್ ಶಿವು ಸೇರಿದಂತೆ ಅನೇಕರಿದ್ದರು.

> ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ನೃತ್ಯ ಕಲೆಯೂ ಸಹಾಯಕವಾಗಿದೆ. ಮೂಗೂರು ಸುಂದರಂ ಅವರ ಪುತ್ರ ನಟ ಪ್ರಭುದೇವ್ ಅವರು ಈ ತಾಲೂಕಿನವರಾಗಿದ್ದಾರೆ. ಇದೇ ಸ್ಥಳದಲ್ಲಿ ರಘುನಂದನ್ ನೃತ್ಯ ಶಾಲೆ ತೆರೆದು ನೃತ್ಯ ಅಭ್ಯಾಸ ಮಾಡಿಸುತ್ತಿರುವುದು ಪ್ರತಿಭಾವಂತ ಮಕ್ಕಳಿಗೆ ಪೂರಕವಾಗಿದೆ. ರಘುನಂದನ್ ಅವರ ಪರಿಶ್ರಮದಿಂದ ನೃತ್ಯ ಅಕಾಡೆಮಿ ನಿರಂತರವಾಗಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ರಾಜ್ಯ ಮಟ್ಟದಲ್ಲಿ ಬೆಳೆಯಲಿ.
>
> – ಡಾ.ವೆಂಕಟರಾಜು, ಆರೋಗ್ಯ ಇಲಾಖೆ ಆಡಳಿತಾಧಿಕಾರಿ.

ನಿಮಗೆ ಮನುಷ್ಯತ್ವ ಇಲ್ವಾ, ನಾವೇಗೆ ಬದುಕೋದು, ನೀವೆ ಬಂದು ನೋಡಿ...

ಮೈಸೂರಿನ ಯಲ್ಲಮ್ಮ ಕಾಲೋನಿಯಲ್ಲಿ ನರಕ ದರ್ಶನ

ಕಂಡ ಕಂಡಲ್ಲಿ ಕಸದ ರಾಶಿ, ಮನೆ ಮುಂದೆ ಮಂಡಿಯುದ್ದ ಕೊಳಚೆ ನೀರು, ಅಧಿಕಾರಿಗಳ ತೀವ್ರ ನಿರ್ಲಕ್ಷ್ಯ

ಮೈಸೂರು, ಮೇ 24(ಎಂಕೆ)– ಪಾಲಿಕೆ ಅಧಿಕಾರಿಗಳೇ ನಿಮಗೆ ಮನುಷ್ಯತ್ವ ಇಲ್ವಾ... ನಾವೇನು ನಿಮಗೆ ಮನುಷ್ಯರಂತೆ ಕಾಣ್ತಾ ಇಲ್ವಾ... ಈ ಗಲೀಜು ನೀರು, ಕಸದ ನಡುವೆ ನಾವೇಗೆ ಬದುಕೋದು... ನೀವೇ ಬಂದು ನೋಡಿ... ಸಾಧ್ಯವಾದರೆ ನಮ್ ಜೊತೆ ಬಂದಿರೀ...!

ಇದು ಸ್ವಚ್ಛ ನಗರಿ ಮೈಸೂರಿನ ವಾರ್ಡ್ ನಂ.8ರ ವ್ಯಾಪ್ತಿಯ ಬನ್ನಿಮಂಟಪ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಯಲ್ಲಮ್ಮ ಕಾಲೋನಿಯಲ್ಲಿ ವಾಸುತ್ತಿರುವ ನಿವಾಸಿಗಳ ನೋವಿನ, ಸಂಕಷ್ಟದ ನುಡಿಗಳು... ಕಂಡ ಕಂಡಲ್ಲಿ ಕಸದ ರಾಶಿ, ಮನೆ ಮುಂದೆಯೇ ಮಂಡಿಯುದ್ದ ನಿಂತಿರುವ ಕೊಳಚೆ ನೀರು ಇಲ್ಲಿನ ಬಡ ನಿವಾಸಿಗಳನ್ನು ಕಂಗೆಡಿಸಿದ್ದು, ಉಸಿರು ಕಟ್ಟುವ ವಾತಾವರಣ ಆವರಿಸಿದೆ.

ಯಲ್ಲಮ್ಮ ಕಾಲೋನಿಯಲ್ಲಿ ನರ್ಮ್ ಯೋಜನೆಯಲ್ಲಿ ನಿರ್ಮಿಸಿರುವ ಬಹುಮಹಡಿ ಕಟ್ಟಡದಲ್ಲಿ ಸುಮಾರು 80ಕ್ಕೂ ಹೆಚ್ಚು ಮನೆಗಳು ಹಾಗೂ 150ಕ್ಕೂ ಹೆಚ್ಚು ಗುಡಿಸಲುಗಳಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಹಾಗೂ ಮುಸ್ಲಿಂ ಸಮುದಾಯದ ಸಾವಿರಕ್ಕೂ ಹೆಚ್ಚು ಮಂದಿ ಹತ್ತಾರು ವರ್ಷಗಳಿಂದ ವಾಸಿಸುತ್ತಿದ್ದಾರೆ.

ಸಣ್ಣ–ಪುಟ್ಟ ವ್ಯಾಪಾರದ ಜೊತೆಗೆ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿರುವ ನಿವಾಸಿಗಳಿಗೆ ನಿತ್ಯವೂ ನರಕ ದರ್ಶನವಾಗಿದೆ. ಕಾಲೋನಿಗೆ ಕಾಲಿಡುತ್ತಿದ್ದಂತೆಯೇ ಕಸದ ತಿಪ್ಪೆ ಸ್ವಾಗತಿಸಿದರೆ, ಕಾಲೋನಿಯಲ್ಲಿ ಹಾದು ಹೋಗಿರುವ ದೊಡ್ಡ ಮೋರಿಯ ಡಕ್ ಹೊಡೆದಿದ್ದು, ಮಳೆ ನೀರಿನ ಜೊತೆಗೆ ಮ್ಯಾನ್‌ಹೋಲ್‌ಗಳಿಂದ ಉಕ್ಕಿ ಹರಿಯುತ್ತಿರುವ ಕೊಳಚೆ ನೀರು ಮನೆಗಳ ಮುಂದೆ ಶೇಖರಣೆಯಾಗುತ್ತಿದೆ.

ಗುಡಿಸಲಲ್ಲಿ ವಾಸಿಸುವ ಜನರ ಸ್ಥಿತಿಯಂತೂ ಚಿಂತಾಜನಕವಾಗಿದೆ. ಕಾಲೋನಿಯ ನಡುವೆಯೇ



ಹೈಟೆನ್ಷನ್ ವೈಯರ್ ಹಾದು ಹೋಗಿದ್ದು, ಕಸ–ಕೊಳಚೆಯ ಜೊತೆಗೆ ಕರೆಂಟ್ ಭಯದಲ್ಲೇ ಬದುಕು ಸಾಗಿಸುವ ಹೀನಾಯ ಪರಿಸ್ಥಿತಿ ಇಲ್ಲಿನ ನಿವಾಸಿಗಳದ್ದಾಗಿದೆ. ಸಮೀಪದ ಸ್ವಚ್ಛಂದ ಯಾದವಗಿರಿ ಹಾಗೂ ಯಲ್ಲಮ್ಮ ಕಾಲೋನಿ ಮೈಸೂರಲ್ಲೇ ಇದ್ದರೂ ಎರಡು ಬಡಾವಣೆಗಳ ನಡುವೆ ಅಜಗಜಾಂತರ ವ್ಯತ್ಯಾಸವಿದೆ ಆದರೆ, ಎರಡು ಕಡೆ ಇರುವುದು ಮನುಷ್ಯರೇ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಮರೆತಂತೆ ವರ್ತಿಸುತ್ತಿರುವುದು ಆಡಳಿತ ವೈಫಲ್ಯ, ಅಸಡ್ಡೆ, ಅಮಾನವಿಯತೆಗೆ ಹಿಡಿದ ಕೈಗನ್ನಡಿಯಾಗಿದೆ.


ಬೇಕಾಬಿಟ್ಟಿ: ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳು, ನಗರಪಾಲಿಕೆ ಅಧಿಕಾರಿ ಮತ್ತು ಸಿಬ್ಬಂದಿಗಳು ವರ್ಷಕ್ಕೊಮ್ಮೆ ಅದೂ ಯಾರಾದರೂ ಜನಪ್ರತಿನಿಧಿಗಳು ಬಂದರೆ ಮಾತ್ರವೇ ಈ ಕಾಲೋನಿಗೆ ಭೇಟಿ ನೀಡಲಿದ್ದು, ಆ ಸಂದರ್ಭಕ್ಕೆ ಮಾತ್ರ ಅದು–ಇದು ಮಾಡುತ್ತಿದ್ದೇವೆ ಎಂದು ಹೇಳಿ ನುಸುಳಿಕೊಳ್ಳುತ್ತಿದ್ದಾರೆಯೇ ಹೊರತು ಇಲ್ಲಿನ ಜನರ ಸಂಕಷ್ಟ ಪರಿಹರಿಸುವ ಕಿಂಚಿತ್ತೂ ಕಾಳಜಿ ತೋರುತ್ತಿಲ್ಲ. ಬೇಕಾಬಿಟ್ಟಿಯಾಗಿ ನಮ್ಮನ್ನು ನೋಡುತ್ತಾರೆ ಎಂದು 'ಮೈಸೂರು ಮಿತ್ರ'ನಲ್ಲಿ ಯಲ್ಲಮ್ಮ ಕಾಲೋನಿಯ ನಿವಾಸಿಗಳು ಅಳಲು ತೋಡಿಕೊಂಡಿದ್ದಾರೆ.

ಏನೂ ಪ್ರಯೋಜನವಾಗಿಲ್ಲ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಭೇಟಿ ಮಾಡಿ ಸ್ಥಳ ಪರಿಶೀಲನೆ ನಡೆಸಿದ್ದು, ಸುದ್ದಿಯಾಯಿತೆ ಹೊರತು ಯಾವುದೇ ಬದಲಾವಣೆಯಾಗಲಿಲ್ಲ. ಸ್ಥಳೀಯ ಶಾಸಕರು, ನಗರ ಪಾಲಿಕೆ ಮಾಜಿ ಸದಸ್ಯರು ಕಂಡು ಸುಮ್ಮನಾಗುತ್ತಿದ್ದಾರೆಯೇ ಹೊರತು ಹೇಗಿದ್ದೀರಿ ಎಂಬ ಒಂದು ಮಾತನ್ನು ಕೇಳಿಲ್ಲ. ಆದ್ರೆ ಚುನಾವಣೆ ಟೈಂ ಮಾತ್ರ ಬಂದು ನಂತರ ಕಣ್ಮರೆಯಾಗುತ್ತಾರೆ ಎಂದು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು.

ನಾವೇನು ಮನುಷ್ಯರಲ್ಲವಾ...!

ಕಳೆದ ಮೂವತ್ತು ವರ್ಷಗಳಿಂದ ಯಲ್ಲಮ್ಮ ಕಾಲೋನಿಯಲ್ಲಿ ವಾಸಿಸುತ್ತಿದ್ದೇವೆ. ಗುಡಿಸಲುಗಳ ಜೊತೆಗೆ ನರ್ಮ್ ಮನೆಗಳು ಬಂದವೇ ಹೊರತು ನಮ್ಮ ಬದುಕಿನಲ್ಲಿ ಯಾವುದೇ ಬದಲಾವಣೆ ಯಾಗಿಲ್ಲ. ಎಲ್ಲೆಲ್ಲಿಂದಲೋ ತಂದು ಇಲ್ಲಿ ಸುರಿಯುವ ಕಸ, ಕೊಳಚೆ ನೀರಿನ ನಡುವೆಯೇ ನಮ್ಮ ದೈನಂದಿನ ಚಟುವಟಿಕೆಗಳು ನಡೆಯುತ್ತಿವೆ. ನಗರಪಾಲಿಕೆ ಮತ್ತು ಕೊಳಗೇರಿ ಮಂಡಳಿ ಅಧಿಕಾರಿಗಳ ಕಣ್ಣಿಗೆ ನಾವು ಮನುಷ್ಯರಂತೆ ಕಾಣುತ್ತಿಲ್ಲ. ಪ್ರಾಣಿಗಳಿಗಿಂತಲೂ ಕೀಳಾಗಿ ನಮ್ಮನ್ನು ಕಾಣುತ್ತಾರೆ. ಸಮಸ್ಯೆ ಹೇಳಿಕೊಂಡರೆ ಕೇಳಿಸದಂತೆ ವರ್ತಿಸುತ್ತಾರೆ. ಸಾಂಸ್ಕೃತಿಕ ನಗರದಲ್ಲಿದ್ದರೂ ನಮ್ಮ ಸ್ಥಿತಿ ಹೀನಾಯವಾಗಿದೆ.

– ಯಲ್ಲಮ್ಮ ಕಾಲೋನಿ ನಿವಾಸಿಗಳು





ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೃಶ್ಯಂ–3 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕರುಪ್ಪು (ತ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ದೃಶ್ಯಂ–3 (ಕ)	4 ಪ್ರದರ್ಶನಗಳು
ಲಿಡೋ	
ಕೋಟಿಗೊಬ್ಬ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ಕಾಂಗ್ರೆಸ್ ಸರ್ಕಾರದಿಂದ ಜನತೆಗೆ ವಿಶ್ವಾಸದ್ರೋಹ; ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಆರೋಪ

ಬೆಂಗಳೂರು: ಕರ್ನಾಟಕದ ಕಾಂಗ್ರೆಸ್ ಸರಕಾರವು ಇಲ್ಲಿನ ಜನರಿಗೆ ಕಳೆದ 3 ವರ್ಷಗಳಿಂದ ವಂಚಿಸುವ ಕೆಲಸ ಮಾಡಿದೆ. ವಿಶ್ವಾಸ ದ್ರೋಹ ಎಸಗಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಭಾನುವಾರ ಟೀಕಿಸಿದ್ದಾರೆ.



ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಭಾನುವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಒಳಜಗಳದಿಂದ ಜನಹಿತದ ಕೆಲಸಗಳನ್ನು ಕಡೆಗಣಿಸಿದ್ದಾರೆ. ಜನಹಿತಕ್ಕೂ ಈ ಸರ್ಕಾರಕ್ಕೂ ಯಾವುದೇ ಸಂಬಂಧ ಇಲ್ಲದಂತಾಗಿದೆ ಎಂದು ಕಿಡಿಕಾರಿದರು.

ಸರ್ಕಾರ ನಡೆಸುತ್ತಿರುವ ನಾಯಕರು ಆಡಳಿತವನ್ನು ಸ್ವ–ಹಿತಾಸಕ್ತಿಗಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಇಲ್ಲಿನ ಸರ್ಕಾರ ದೆಹಲಿ ಕಾಂಗ್ರೆಸ್ಸಿನ ಎಟಿಎಂ ಆಗಿದೆ ಎಂದು ದೂರಿದರು.

ನಮ್ಮ ಪಕ್ಷದ ಜಿಲ್ಲಾ ತರಬೇತಿ ಶಿಬಿರಗಳು ನಡೆಯುತ್ತಿವೆ. ಅದರಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿದೆ. ಕರ್ನಾಟಕದಲ್ಲಿ ಪಕ್ಷದ ಚಟುವಟಿಕೆ, ಸಕ್ರಿಯ ಸಂಘಟನೆ ಬಗ್ಗೆ ತಿಳಿದುಕೊಂಡಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ.ರಾಧಾಮೋಹನ್ ದಾಸ್ ಅಗ್ರವಾಲ್ ಸೇರಿದಂತೆ ಪಕ್ಷದ ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

ಇಸ್ಪೀಟ್ ಅಡ್ಡೆ ಮೇಲೆ ದಾಳಿ

ಮೈಸೂರು, ಮೇ 24(ಪಿಎಂ)– ಇಸ್ಪೀಟ್ ಅಡ್ಡೆ ಮೇಲೆ ದಾಳಿ ನಡೆಸಿರುವ ವರುಣ ಪೊಲೀಸರು, ಐವರ ವಿರುದ್ಧ ಪ್ರಕರಣ ದಾಖಲಿಸಿ, ಪಣಕ್ಕಿಟ್ಟಿದ್ದ ಒಟ್ಟು 4,220 ರೂ. ವಶ ಪಡಿಸಿಕೊಂಡಿದ್ದಾರೆ. ವಾಜಮಂಗಲ ಗ್ರಾಮದ ಮೈನಗರ ಬಡಾವಣೆಯ ಅಡ್ಡಹಳ್ಳದ ಸಮೀಪ ಶನಿವಾರ ಮರದ ಕೆಳಗೆ ಕುಳಿತು ಇಸ್ಪೀಟ್ ಆಡುತ್ತಿದ್ದ ಗುಂಪಿನ ಮೇಲೆ ಪೊಲೀಸರು ದಾಳಿ ನಡೆಸಿದರು.

ಮ್ಯಾಟ್ರಿಮೊನಿಯಲ್‌ನಲ್ಲಿ ವಂಚನೆ ಪ್ರಕರಣ

ಅಜ್ಞಾತ ಸ್ಥಳದಿಂದ ವಿಡಿಯೋ ಬಿಡುಗಡೆ ಮಾಡಿದ ಆರೋಪಿ

ನನ್ನ ಮೇಲೆ ಟೀಕೆ, ಹುಡುಗಿ ಮನೆಯಿಂದಲೇ ಆಮಿಷ ಆರೋಪ

ಮೈಸೂರು, ಮೇ 24(ವಿವಿಹೆಚ್)– ಮ್ಯಾಟ್ರಿಮೊನಿಯಲ್ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಜೆ.ಪ್ರದೀಪ್ ಸೊಲೊಮನ್ ಸದ್ಯ ತಲೆಮರೆಸಿಕೊಂಡಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಅಜ್ಞಾತ ಸ್ಥಳದಿಂದ ವೀಡಿಯೊ ಒಂದನ್ನು ಬಿಡುಗಡೆ ಮಾಡಿದ್ದಾನೆ.



ತನ್ನ ವಿಡಿಯೋದಲ್ಲಿ ಸ್ವಪ್ರತಿಷ್ಠೆಗಾಗಿ ಹಾಗೂ ರಾಜಕೀಯ ಬಲ ಬಳಸಿ ಕೊಂಡು ನನ್ನ ಮೇಲೆ ಟೀಕಾ ಪ್ರಹಾರ ನಡೆಸಿದ್ದಾರೆ ಎಂದು ದೂರಿದ್ದಾನೆ.

ಅವರೇ ತಮ್ಮ ಮಗಳ ಮದುವೆಯಾದಲ್ಲಿ ಚಿನ್ನ, ಕಾರು ಹಾಗೂ ಅಪಾರ್ಟ್‌ಮೆಂಟ್ ನೀಡುವುದಾಗಿ ನಮಗೆ ಆಮಿಷ ತೋರಿದ್ದಾರೆ. ಅವರ ಯಾವುದೇ ಆಮಿಷಗಳಿಗೆ ಬಲಿಯಾಗದೇ, ಕೇವಲ ನಿಮ್ಮ ಹೆಣ್ಣು ಮಗಳನ್ನು ನೀಡಿ, ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಮದುವೆ ಮಾಡಿಕೊಳ್ಳುತ್ತೇವೆ ಎಂದು ಕೇಳಿದ್ದೆವು. ಆದರೆ ಈಗ 10 ಲಕ್ಷಕ್ಕೆ ಬೇಡಿಕೆಯಿಟ್ಟು ಮದುವೆ ನಿಲ್ಲಿಸಲು ಪ್ರಯತ್ನಪಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದಿದ್ದಾನೆ.

ನಾವು ಯಾವುದೇ ವರದಕ್ಷಿಣೆ ಅಥವಾ ಇತರೆ ವಿಚಾರಗಳ ಬಗ್ಗೆ ಮಾತನಾಡಿಯೇ ಇಲ್ಲ. ಎಲ್ಲವನ್ನೂ ಅವರೇ ನೀಡುವುದಾಗಿ ಹೇಳಿ, ಈಗ ನಮ್ಮ ಮೇಲೆ ಹರಿಹಾಯುತ್ತಿದ್ದಾರೆ. ಇಲ್ಲದ ಆರೋಪ ಮಾಡಿ, ವರದಕ್ಷಿಣೆ ಪಡೆದಿದ್ದೇನೆ ಎಂದು ದೂರು ದಾಖಲಿಸಿದ್ದಾರೆ. ಅವರು ನೀಡಿದ ಆಫರ್‌ಗಳನ್ನು ನಾನು ಬೇಡಿಕೆ ಇಟ್ಟಿದ್ದಾಗಿ ಉಲ್ಲೇಖಿಸಿದ್ದಾರೆ ಎಂದು ವಿಡಿಯೊದಲ್ಲಿ ವಿವರಿಸಿ ದ್ದಾನೆ. ಹಾಗೆಯೇ ಈ ಪ್ರಕರಣ ಸಂಬಂಧ ಮೈಸೂರು ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾಗಿಯೂ ತಿಳಿಸಿದ್ದಾನೆ.

ಇನ್ನೂ ಪ್ರದೀಪ್ ಮಾಡಿರುವ ವಿಡಿಯೋ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಬೆಂಗಳೂರಿನ ಉದ್ಯಮಿ, ಪ್ರದೀಪ್ ನಮ್ಮ ಬಳಿ ಏನೇನು ಬೇಡಿಕೆ ಇಟ್ಟಿದ್ದನು ಅದನ್ನು ಎಫ್‌ಐಆರ್‌ನಲ್ಲಿ ಉಲ್ಲೇಖ ಮಾಡಿದ್ದೇವೆ. ಪ್ರದೀಪ್ ಮಾಡುತ್ತಿರುವ ದೂರುಗಳು ನಿರಾಧಾರವಾಗಿದೆ. ಅವನ ಎಲ್ಲಾ ಮೋಸದ ಬಗ್ಗೆ ನಮ್ಮ ಬಳಿ ಮೂಲ ದಾಖಲೆಗಳಿದ್ದು, ಕೋರ್ಟ್‌ನಲ್ಲಿ ಸಲ್ಲಿಸುವುದಾಗಿ, ಕಾನೂನು ಹೋರಾಟದ ಮೂಲಕವೇ ಎಲ್ಲಾ ಪ್ರಶ್ನೆಗಳಿಗೂ ಉತ್ತರ ನೀಡುವುದಾಗಿ ತಿಳಿಸಿದ್ದಾರೆ.

ಹೃದಯ ಶಸ್ತ್ರಚಿಕಿತ್ಸೆಯಲ್ಲಿ ಅರವಳಿಕೆ ತಜ್ಞರ ಪಾತ್ರ ಪ್ರಮುಖ

ಜಯದೇವ ಆಸ್ಪತ್ರೆಯಲ್ಲಿ ಅರವಳಿಕೆ ಶಿಕ್ಷಣ ಕುರಿತ ಸಮ್ಮೇಳನ



ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಭಾನುವಾರ ನಡೆದ 'ಹೃದಯ ಚಿಕಿತ್ಸೆಯಲ್ಲಿ ಅರವಳಿಕೆಯಲ್ಲಿ ನಿರಂತರ ವೈದ್ಯಕೀಯ ಶಿಕ್ಷಣ ಕುರಿತ ಸಮ್ಮೇಳನ'ವನ್ನು ಜಯದೇವ ಮತ್ತು ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಬಿ.ದಿನೇಶ್ ಉದ್ಘಾಟಿಸಿದರು.

ಮೈಸೂರು,ಮೇ 24(ಎಂಟಿವೈ)– ಎಲೆಮರೆ ಕಾಯಿಯಂತೆ ಕೆಲಸ ಮಾಡುವ ಅರವಳಿಕೆ ತಜ್ಞರು ಹೃದಯದ ಶಸ್ತ್ರಚಿಕಿತ್ಸೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಲಿದ್ದಾರೆ ಎಂದು ಜಯದೇವ ಮತ್ತು ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಬಿ.ದಿನೇಶ್ ತಿಳಿಸಿದರು.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಕರ್ನಾಟಕ ಚಾಪ್ಟರ್ ಆಫ್ ಐಎಸಿಎ ಮತ್ತು ಗ್ಲೋಬಲ್ ಹಾರ್ಟ್‌ಕೇರ್ ಫೌಂಡೇಷನ್ ವತಿಯಿಂದ ಭಾನುವಾರ ನಡೆದ ಹೃದಯ ಅರವಳಿಕೆಯಲ್ಲಿ ನಿರಂತರ ವೈದ್ಯಕೀಯ ಶಿಕ್ಷಣ ಕುರಿತ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಅರವಳಿಕೆ ತಜ್ಞರು ಶಸ್ತ್ರಚಿಕಿತ್ಸೆ ಮಾಡುವಾಗ ಸರ್ಜನ್, ನರ್ಸ್, ಓಟಿ ಟೆಕ್ನೀಷಿಯನ್‌ಗಳ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಸಮನ್ವಯತೆಯಿಂದ ಕೆಲಸ ಮಾಡಬೇಕಾಗುತ್ತದೆ. ಗಂಟೆಗಟ್ಟಲೆ ಕಾಯಬೇಕಾಗುತ್ತದೆ. ರೋಗಿ ಸಮಸ್ಯೆಯಿಂದ ಹೊರಬಂದು ಗುಣಮುಖರಾಗುವವರೆಗೆ ಅಲ್ಲೇ ಇರಬೇಕಾಗುತ್ತದೆ. ಆಧುನಿಕ ತಂತ್ರಜ್ಞಾನದಲ್ಲಿ ಎಐ ಬಳಸಿಕೊಂಡು ನಿಖರವಾಗಿ ರೋಗಿಯು ಗುಣಮುಖವಾಗುವುದನ್ನು ತಿಳಿಯಬಹುದಾಗಿದೆ ಎಂದರು.

ಪ್ರಸ್ತುತ ಸಂದರ್ಭದಲ್ಲಿ ದೇಶದಲ್ಲಿ ಅರವಳಿಕೆ ತಜ್ಞರ ಕೊರತೆ ಎದ್ದು ಕಾಣುತ್ತಿದೆ. ಜಯದೇವ ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದ್ದು, 38 ಜನ ಡಿಎಂ ಅರವಳಿಕೆ ತಜ್ಞರಿದ್ದಾರೆ. 8 ಮಂದಿ ಅರವಳಿಕೆ ತಜ್ಞರನ್ನು ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಇಂತಹ ಸಮ್ಮೇಳನಗಳು ಪ್ರತಿವರ್ಷ ನಡೆಯಬೇಕು. ಜಯದೇವ ಆಸ್ಪತ್ರೆ ವತಿಯಿಂದ ಎಲ್ಲಾ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಸಮ್ಮೇಳನದಲ್ಲಿ ಡಾ.ರಂಜಿತ್ ಕಾರ್ತಿಕೇಯನ್, ಡಾ.ಮುರಳೀಧರ್, ಡಾ.ಮಂಜುನಾಥ್, ಡಾ.ಪರಿಮಳ, ಡಾ. ಪ್ರಭಾಕರ್, ಡಾ. ಮಂಜುಳ, ಸಂಘಟನಾ ಕಾರ್ಯದರ್ಶಿ ಡಾ. ಕೆ.ಎಸ್. ಭಾರತಿ, ಡಾ. ನಂಜಪ್ಪ, ಡಾ. ಹರ್ಷಬಸಪ್ಪ, ಡಾ.ರಜಿತ್, ಡಾ. ಜಯಶೀಲನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಟಿ.ಎಸ್.ಶ್ರೀವತ್ಸರಿಗೆ ಧನ್ಯವಾದ ಅರ್ಪಿಸಿದ ಊಟಿ ಬಿಜೆಪಿ ಶಾಸಕ...



ತಮಿಳುನಾಡು ಊಟಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಭೋಜರಾಜನ್ ಅವರು ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸರ ಕಚೇರಿಗೆ ಇಂದು ಕುಟುಂಬ ಸಮೇತರಾಗಿ ಆಗಮಿಸಿ ಊಟಿ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ಪರವಾಗಿ ಪ್ರಚಾರದಲ್ಲಿ ಭಾಗವಹಿಸಿ ತಮ್ಮ ಗೆಲುವಿಗೆ ಶ್ರಮಿಸಿದಕ್ಕೆ ಅವರಿಗೆ ಧನ್ಯವಾದಗಳನ್ನು ತಿಳಿಸಿದರು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸರವರು ಭೋಜರಾಜನ್ ಅವರನ್ನು ಅಭಿನಂದಿಸಿದರು. ಭೋಜರಾಜನ್ ಅವರ ಶ್ರೀಮತಿ ಹಾಗೂ ಅವರ ಪುತ್ರ ರಾಜೇಶ್, ಬಿಜೆಪಿ ಮುಖಂಡರಾದ ಕೇಬಲ್ ಮಹೇಶ್, ಪ್ರದೀಪ್ ಕುಮಾರ್, ದೇವರಾಜ್, ಕಿಶೋರ್, ಸತೀಶ್ ಉಪಸ್ಥಿತರಿದ್ದರು.

ನೇಮಕ



ಮೈಸೂರು: ಮೈಸೂರು ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನೂತನ ಉಪನಿರ್ದೇಶಕರಾಗಿ ಆರ್.ನಾಗರಾಜು ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹಿಂದೆ ಉಪನಿರ್ದೇಶಕರಾಗಿದ್ದ ಬಸವರಾಜು ಅವರನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕರಾಗಿ ನಿಯೋಜಿಸಿ ವರ್ಗಾವಣೆ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ತೆರವಾದ ಸ್ಥಳಕ್ಕೆ ಆರ್.ನಾಗರಾಜು ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು.

ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ 84ನೇ ಜನ್ಮ ದಿನೋತ್ಸವ

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಜ್ಞಾನ-ವಿಜ್ಞಾನದ ಸಮ್ಮಿಲನವಿದೆ



ಮೈಸೂರಿನ ಅವಧೂತ ದತ್ತಪೀಠದ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 84ನೇ ಜನ್ಮ ದಿನೋತ್ಸವ ಕಾರ್ಯಕ್ರಮವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಮೈಸೂರು, ಮೇ 24(ಎಂಟಿವೈ)– ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಜಗತ್ತಿಗೆ ಲಭ್ಯವಾಗುವಂತೆ ಇರುವ ಜ್ಞಾನ ಮತ್ತು ವಿಜ್ಞಾನದ ಸಮ್ಮಿಲನವಿದೆ ಎಂದು ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಣ್ಣಿಸಿದ್ದಾರೆ.

ಮೈಸೂರಿನ ಅವಧೂತ ದತ್ತಪೀಠದ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 84ನೇ ಜನ್ಮ ದಿನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಜಿ ಅವರು ಗಣಪತಿ ಸಚ್ಚಿದಾನಂದ ಆಶ್ರಮವನ್ನು ಜಗತ್ತಿಗೆ ಲಭ್ಯವಾಗುವಂತೆ ಮಾಡಿದ್ದಾರೆ ಎಂದರು.

ಕರ್ನಾಟಕ, ಆಂಧ್ರ, ತಮಿಳುನಾಡು ಮಾತ್ರವಲ್ಲದೆ, ವಿದೇಶದಲ್ಲಿ ಆಶ್ರಮವನ್ನು ಸ್ಥಾಪಿಸಿದ್ದಾರೆ. ಅಪಾರ ಭಕ್ತವೃಂದವನ್ನು ಎಲ್ಲೆಡೆ ಹೊಂದಿದ್ದಾರೆ. ಒಮ್ಮೆ ನಾನು ಅಮೇರಿಕಾಗೆ ಹೋಗಿದ್ದಾಗ ಕಾವಿ ಲಾಂಛನ ಧರಿಸಿದ್ದ ನನ್ನನ್ನು ನೋಡಿ ವ್ಯಕ್ತಿಯೊಬ್ಬರು ನನ್ನ ಬಳಿ ಬಂದು ಮಾತನಾಡಿ, 'ನಮ್ಮ ತಾಯಿ ಪ್ರತಿ ವರ್ಷ ಅಮೇರಿಕದಿಂದ ಇಂಡಿಯಾಕ್ಕೆ ಬರುತ್ತಾರೆ. ಅಮೆರಿಕದ ಮನೆಯಿಂದ ನೇರವಾಗಿ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಬರುತ್ತಾರೆ. ಅಲ್ಲಿ ಶ್ರೀಗಳಿಂದ ಆಶೀರ್ವಾದ ಪಡೆದು ಬೇರೆಲ್ಲೂ ಹೋಗದೆ ನೇರವಾಗಿ ಅಮೆರಿಕದ ಮನೆಗೆ ಬರುತ್ತಾರೆ. ಭಾರತದಲ್ಲಿ ಆಶ್ರಮ ಹೊರತುಪಡಿಸಿದರೆ ಬೇರೆ ಯಾವ ಸ್ಥಳ ನೀಡುವ ಆಸಕ್ತಿ ಅವರಿಗಿಲ್ಲ ಎಂದರು. ಆ ವ್ಯಕ್ತಿಯ ಮಾತು ಕೇಳಿದ ಬಳಿಕ ಗಣಪತಿ ಶ್ರೀಗಳು ವಿದೇಶದಲ್ಲೂ ಎಷ್ಟರ ಮಟ್ಟಿಗೆ ಪ್ರಸಿದ್ಧಿಯಾಗಿದ್ದಾರೆ ಎಂದು ಊಹಿಸಬಹುದು ಎಂದು ತಿಳಿಸಿದರು.

ಭಾರತ ದೇಶ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದು, ಭಾರತೀಯ ಋಷಿಮುನಿಗಳು ಈ ಹಿಂದೆಯೇ ಸಂಶೋಧನೆ ಹಾಗೂ ಆವಿಷ್ಕಾರಗಳನ್ನು ತಮ್ಮ ದಿವ್ಯ ಜ್ಞಾನದಿಂದ ತಿಳಿದು ಜಗತ್ತಿಗೆ ಅಪೂರ್ವವಾದ ಕೊಡುಗೆ ನೀಡಿದ್ದಾರೆ. ಇದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡಬೇಕಾದ ಸಂಗತಿ ಎಂದರು.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿರುವಂತೆ ಜಗತ್ತಿಗೆ ಅಗತ್ಯವಾದಾಗಲೆಲ್ಲಾ ಮಹಾಪುರುಷರು ಅವತರಿಸುತ್ತಾ ಬಂದಿದ್ದಾರೆ. ಸ್ವಾಮಿ ವಿವೇಕಾನಂದರು ಹೇಳಿರುವಂತೆ ದೇಶ ಎಲ್ಲಿಯವರಗೆ ಸುಭಿಕ್ಷವಾಗಿರುತ್ತದೆ ಎಂದರೆ, ಅದು ಎಲ್ಲಿಯ ತನಕ ಸಾಧು ಸಂತರು ತಮ್ಮ ಅನುಷ್ಠಾನದಿಂದ, ತಪಸ್ಸಿನಿಂದ ಸಿದ್ಧಿಯನ್ನು ಸಮಾಜಕ್ಕೆ ಧಾರೆ ಎರೆಯುತ್ತಾ ಇರುತ್ತಾರೋ, ಅಲ್ಲಿಯವರೆಗೂ ನಮ್ಮ ದೇಶ ಸುಭಿಕ್ಷವಾಗಿರುತ್ತದೆ ಎಂದರು.

ಸುತ್ತೂರು ಕ್ಷೇತ್ರದ ಹಿರಿಯ ಶ್ರೀಗಳಾದ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೂ ಗಣಪತಿ ಸಚ್ಚಿದಾನಂದ ಸ್ವಾಮಿಗಳವರಿಗೂ ಅನನ್ಯವಾದ ಸಂಬಂಧವಿತ್ತು. ಅವರಿಬ್ಬರೂ ಅಂತರಂಗದ ಆಂತರಿಕವಾದ ಬಾಂಧವ್ಯವನ್ನು ಹೊಂದಿ ದ್ದಂತವರು. ಅಷ್ಟೇ ಆತ್ಮೀಯತೆಯನ್ನು ಹೊಂದಿದ್ದಂತವರು. ಪೂಜ್ಯರು ಈ ದಿನಮಾನದವರೆಗೂ ಪೂಜ್ಯರ ಬಗ್ಗೆ ಇಟ್ಟಿದ್ದ ಅಭಿಮಾನವನ್ನೇ ಇವತ್ತಿಗೂ ಶ್ರೀಮಠದ ಬಗ್ಗೆ ಇಟ್ಟುಕೊಂಡಿದ್ದಾರೆ ಎನ್ನುವುದು ಸಂತೋಷದ ಸಂಗತಿ. ಕಿರಿಯ ಶ್ರೀಗಳವರು ಪೂಜ್ಯರ ಮಗನಂತೆ, ಪಾಲಕರಾಗಿ ಶ್ರೀಗಳು ತೋರಿಸಿದ್ದನ್ನು ಶಿರಸಾವಹಿಸಿ ನೆರವೇರಿಸಿ ಆಶ್ರಮದ ಎಲ್ಲಾ ಕಾರ್ಯ ಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವುದು ಸಂತೋಷದ ಸಂಗತಿ ಎಂದು ಶ್ಲಾಘಿಸಿದರು.

ಕೃತಿಗಳ ಬಿಡುಗಡೆ: ಇದೇ ಸಂದರ್ಭದಲ್ಲಿ ಅಶ್ವತ್ಥನಾರಾಯಣ ಅವರ 'ದತ್ತಾವತಾರಿ ಮುಕ್ತಕ ಪಿಯೂಷ' ಮತ್ತು ಸ್ವಾಮೀಜಿಯವರ ಸೀಕ್ರೆಟ್ ಫಾರ್ ಸಕ್ಸಸ್ ಇಂಗ್ಲಿಷ್ ಪುಸ್ತಕದ ತಮಿಳು ಅನುವಾದ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಆಶ್ರಮದ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಭಾಗವಹಿಸಿದ್ದರು.

ಅಂಡರ್ 16 ಜ್ಯೂನಿಯರ್ ರ‍್ಯಾಂಕಿಂಗ್ ಟೆನಿಸ್ ಟೂರ್ನ್‌ಮೆಂಟ್

ಸಿಂಗಲ್ಸ್, ಡಬಲ್ಸ್‌ನಲ್ಲಿ ಮೈಸೂರಿನ ಪದ್ಮಪ್ರಿಯಾ ಚಾಂಪಿಯನ್

ಮೈಸೂರು,ಮೇ 24(ಎಂಟಿವೈ)– ತ್ರಿಪುರಾದ ಅಗರ್ತಲದಲ್ಲಿ ನಡೆದ ಏಷ್ಯನ್ ಟೆನಿಸ್ ಫೆಡರೇಷನ್ ಅಂಡರ್ 16 ಜ್ಯೂನಿಯರ್ ರ‍್ಯಾಂಕಿಂಗ್ ಟೆನಿಸ್ ಟೂರ್ನಮೆಂಟ್‌ನಲ್ಲಿ ಮೈಸೂರಿನ ಪದ್ಮಪ್ರಿಯಾ ರಮೇಶ್‌ಕುಮಾರ್ ಅವರು ಸಿಂಗಲ್ಸ್ ಮತ್ತು ಡಬಲ್ಸ್ ಗೆಲ್ಲುವ ಮೂಲಕ ಭಾರತ (ನಂ–1) ಅಗ್ರಶ್ರೇಣಿಯ ಟೆನಿಸ್ ಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಏಷ್ಯನ್ ಟೆನಿಸ್ ಫೆಡರೇಷನ್ (ಎಟಿಎಫ್) ಹಾಗೂ ಆಲ್ ಇಂಡಿಯಾ ಟೆನಿಸ್ ಅಸೋಸಿಯೇಷನ್(ಎಐಟಿಎ) ವತಿಯಿಂದ ಅಗರ್ತಲದಲ್ಲಿ ನಡೆದ ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯಾ ಗೆಲುವಿನ ಸರಣಿಯನ್ನು ಮುಂದುವರೆಸಿದ್ದು, ಸಿಂಗಲ್ಸ್ ಮತ್ತು ಡಬಲ್ಸ್ ಪಂದ್ಯಾವಳಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಎರಡೂ ವಿಭಾಗದ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಪದ್ಮಪ್ರಿಯಾ ಅವರು ನಂ–1 ಶ್ರೇಯಾಂಕದ ತೆಲಂಗಾಣದ ನಿಶಾ ಎಂಜಾ ಅವರನ್ನು 6–4: 6–4 ಸೆಟ್ ಅಂತರದಿಂದ ಸೋಲಿಸಿ, ಸಿಂಗಲ್ಸ್ ವಿಭಾಗದ ಚಾಂಪಿಯನ್ ಆಗಿ ಹೊರ ಹೊಮ್ಮಿದರು.

ಇದಕ್ಕೂ ಮುನ್ನ ಪದ್ಮಪ್ರಿಯಾ ಅವರು ಸೆಮಿಫೈನಲ್‌ನಲ್ಲಿ 7ನೇ ಶ್ರೇಯಾಂಕದ ಆಟಗಾರ್ತಿ ಪಂಜಾಬ್‌ನ ಜಪ್ಜಿ ಕೌರ್ ಬದೋಹಲ್ ಅವರನ್ನು 6–2: 6–1 ಸೆಟ್‌ನಿಂದ, ಕ್ವಾರ್ಟರ್ ಫೈನಲ್‌ನಲ್ಲಿ, 6ನೇ ಶ್ರೇಯಾಂಕದ ಆಟಗಾರ್ತಿ ಮಹಾರಾಷ್ಟ್ರದ ಪ್ರಿಶಾ ನಿತಿನ್ ಪಾಟೀಲ್ ಅವರನ್ನು 6–2, 6–0 ಸೆಟ್ ಅಂತರದಿಂದ ಸೋಲಿಸಿ ಫೈನಲ್ ಪ್ರವೇಶಿಸಿದ್ದರು.



ತ್ರಿಪುರಾದ ಅಗರ್ತಲದಲ್ಲಿ ನಡೆದ ಏಷ್ಯನ್ ಟೆನಿಸ್ ಫೆಡರೇಷನ್ ಅಂಡರ್ 16 ಜ್ಯೂನಿಯರ್ ರ‍್ಯಾಂಕಿಂಗ್ ಟೆನಿಸ್ ಟೂರ್ನಮೆಂಟ್‌ನಲ್ಲಿ ಮೈಸೂರಿನ ಪದ್ಮಪ್ರಿಯಾ ರಮೇಶ್‌ಕುಮಾರ್ ಮತ್ತು ಅಸ್ಸಾಂನ ಅರ್ನವಿ ದೇಬನಾಥ್ ಜೋಡಿ ಡಬಲ್ಸ್ ಪ್ರಶಸ್ತಿ ತನ್ನದಾಗಿಸಿಕೊಂಡರು.

ಡಬಲ್ಸ್ ಫೈನಲ್ಸ್: ಮೈಸೂರಿನ ಪದ್ಮಪ್ರಿಯಾ ಹಾಗೂ ಅಸ್ಸಾಂನ ಅರ್ನವಿ ದೇಬನಾಥ್ ಜೋಡಿ ಡಬಲ್ಸ್ ಫೈನಲ್ ಪಂದ್ಯದಲ್ಲಿ ಅವ್ನಿ ಪುನಗಂಟಿ ಹಾಗೂ ವೈದೇಹಿ ಶಿಂಧೆ ಜೋಡಿಯನ್ನು 6–1, 6–2 ಸೆಟ್ ಅಂತರದಲ್ಲಿ ಸೋಲಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಈ ಜೋಡಿ ಸೆಮಿಫೈನಲ್‌ನಲ್ಲಿ ಕೃಷಿಕಾ ಗೌತಮ್ ಹಾಗೂ ಅಭಿಪ್ಸಾ ಗೊಗೊಯ್ ವಿರುದ್ಧ 6–1, 6–3 ಅಂತರದಿಂದ ಗೆಲುವು ಸಾಧಿಸಿದರೆ, ಕ್ವಾರ್ಟರ್ ಫೈನಲ್‌ನಲ್ಲಿ ಮೊದಲ ಶ್ರೇಯಾಂಕದ ಆಟಗಾರ್ತಿ ನಿಶಾ ಎಂಜಾ ಹಾಗೂ ಭಾವಿಷ್ಯ ಕ್ರಾಂತಿ ಬುಕ್ಕಾಪುರಂ ಜೋಡಿ ವಿರುದ್ಧ 6–0, 6–3 ಸೆಟ್ ಅಂತರದಿಂದ ಮಣಿಸಿ ಫೈನಲ್ ಪ್ರವೇಶಿಸಿದ್ದರು.

ಈ ಪಂದ್ಯಾವಳಿಯ ಪ್ರದರ್ಶಿಸಿದ ಉತ್ತಮ ಪ್ರದರ್ಶನದಿಂದಾಗಿ ಪದ್ಮಪ್ರಿಯ ರಮೇಶ್ ಕುಮಾರ್ ಅವರು ಭಾರತ ನಂಬರ್–1 (ಎಐಟಿಎ ಶ್ರೇಯಾಂಕ) ಮತ್ತು 14 ವರ್ಷದೊಳಗಿನವರ ವಿಭಾಗದಲ್ಲಿ ಏಷ್ಯಾ ನಂ.2 (ಎಟಿಎಫ್ ಶ್ರೇಯಾಂಕ) ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಹುಲಿ ಯೋಜನೆಯ ನಿರ್ದೇಶಕ ಡಾ.ಪಿ. ರಮೇಶ್‌ಕುಮಾರ್ ಹಾಗೂ ಚಾಮರಾಜನಗರ ವೃತ್ತದ ಸಿಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯಾಗಿದ್ದಾರೆ. ಈಕೆ ಟಿಜಿಇ ಕೋಚ್ ರಘುವೀರ್ ಪೊನ್ನುಸಾಮಿ, ಫಿಟ್ನೆಸ್ ಕೋಚ್ ಸಾಗರ್ ಮತ್ತು ದಿನಕರ್ ಅವರಿಂದ ತರಬೇತಿ ಪಡೆದಿದ್ದಾರೆ.

ಯುದ್ಧ ನಿಲ್ಲಿಸುವ ಶಕ್ತಿ ತಾಯಿ ಪ್ರೀತಿಗಿದೆ

'ಆದರ್ಶ ಅಮ್ಮ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಭಿಪ್ರಾಯ

ಮೈಸೂರು,ಮೇ24(ವಿವಿಹೆಚ್)–ಪ್ರೀತಿ, ಮಮತೆ, ತ್ಯಾಗದ ಪ್ರತೀಕವೇ ತಾಯಿ. ತಾಯಿ ಎಂದರೆ ದೇವರಿಗೆ ಸಮಾನವಾದವರು ಎಂದರ್ಥ ಎಂದ ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಪಂಚದಾದ್ಯಂತ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸುವ ಶಕ್ತಿ ತಾಯಂದಿರಿಗೆ ಮಾತ್ರ ಎಂದರು.

ನಗರದ ಸರಸ್ವತಿಪುರಂನ ವಿಜಯ ವಿಠ್ಠಲ ಶಾಲೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ನೇಹ ಸಿಂಚನ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ ವಿಶ್ವ ತಾಯಂದಿರ ದಿನಾಚರಣೆಯ ಪ್ರಯುಕ್ತ 'ಆದರ್ಶ ಅಮ್ಮ ಪ್ರಶಸ್ತಿ', ಕವಿ–ಕಾವ್ಯ–ಗಾಯನದ ಸಮರ್ಪಣಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ಮೈಸೂರಿನ ವಿಜಯ ವಿಠ್ಠಲ ಶಾಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿ.ರುಕ್ಮಿಣಿ, ಡಾ.ಕೆ.ವಿ.ಲಕ್ಷ್ಮಿದೇವಿ, ಅಂಜನ ಪ್ರಕಾಶ್ ಹಾಗೂ ಪಾರ್ವತಮ್ಮ ಅವರಿಗೆ ಭಾನುವಾರ 'ಆದರ್ಶ ಅಮ್ಮ' ಪ್ರಶಸ್ತಿ ನೀಡಿ, ಗೌರವಿಸಲಾಯಿತು.


ಇಂದಿನ ಪಾಶ್ಚಿಮಾತ್ಯ ದೇಶಗಳು ಸೇರಿದಂತೆ ಪ್ರಪಂಚದಾದ್ಯಂತ ಯುದ್ಧದ ಕರಿನೆರಳು ಎಲ್ಲರನ್ನು ಬೆಚ್ಚಿ ಬೀಳಿಸುತ್ತಿದೆ. ಈ ಯುದ್ಧವನ್ನು ನಿಲ್ಲಿಸುವಂತೆ ಯಾವುದೇ ಧರ್ಮದ ಧರ್ಮಾಧಿಕಾರಿಗಳು ಅಥವಾ ಪ್ರಭಾವಿ ವ್ಯಕ್ತಿಗಳು ಕರೆ ನೀಡುತ್ತಿಲ್ಲ. ಇವರನ್ನೆಲ್ಲಾ ಮೌನವಾಗಿಸುವ ಕೆಲಸ ಮಾಡಲಾಗುತ್ತಿದೆ. ಆದರೆ ಈ ಯುದ್ಧವನ್ನು ನಿಲ್ಲಿಸುವ ಶಕ್ತಿ ಎಲ್ಲರ ತಾಯಂದರಿಗಿದೆ. ಪ್ರತಿಯೊಬ್ಬ ತಾಯಿಯು, ಯುದ್ಧ ನಿಲ್ಲಿಸದೇ ಹೋದಲ್ಲಿ ಊಟ, ನಿದ್ದೆ ಮಾಡುವುದಿಲ್ಲ ಎಂದು ಹಠ ಹಿಡಿದರೇ ಈ ಕಾರ್ಯ ಸಫಲವಾಗಲಿದೆ. ಇದು ತಾಯಿ ಪ್ರೀತಿಗಿರುವ ಶಕ್ತಿ ಎಂದರು.

ಹೆಣ್ಣು ಒಂದು ಜೀವಕ್ಕೆ ತನ್ನ ದೇಹವನ್ನು ನೀಡಿ, ಒಂಭತ್ತು ತಿಂಗಳು ಸಲಹಿ, ಅದಕ್ಕೆ ಜೀವನವನ್ನೆ ತೇದು ಅದರ ಉಜ್ವಲ ಭವಿಷ್ಯಕ್ಕಾಗಿ ಸದಾ ಮರಗುತ್ತಾಳೆ. ಅವಳನ್ನೇ ನಾವು ತಾಯಿ ಎನ್ನುತ್ತೇವೆ. ಮಕ್ಕಳಾದವರು ತಾಯಿಯ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ಸಮಾಜದಲ್ಲಿ ಗೌರವದಿಂದ ಬಾಳುವಂತೆ ಮಾಡಬೇಕು. ಇದರಿಂದ ಆಕೆಯ ಋಣವನ್ನು ಕಿಂಚಿತ್ತಾದರೂ ತೀರಿಸಿದ ಆತ್ಮತೃಪ್ತಿ ಸಿಗಲಿದೆ ಎಂದು ಮಡ್ಡೀಕೆರೆ ಗೋಪಾಲ್ ತಿಳಿ ಹೇಳಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ಡಾ.ನಾಗರಾಜ ವಿ.ಭೈರಿ ಮಾತನಾಡಿ, ಹಿಂದಿನ ಕಾಲದಲ್ಲಿ ಶಿಕ್ಷಣ ವಂಚಿತರಾಗಿದ್ದ ಮಹಿಳೆಯರ ಪೈಕಿ, ಕಂದಾಚಾರವನ್ನು ಮೆಟ್ಟಿನಿಂತು ಉನ್ನತ ಶಿಕ್ಷಣ ಪಡೆದು ಮಹಿಳಾ ಸಬಲೀಕರಣಕ್ಕೆ ಮತ್ತು ಸಮಾಜಕ್ಕೆ ಉತ್ತಮ ಕೆಲಸ ಮಾಡಿದ ಮಹಿಳೆಯರನ್ನು ಗುರುತಿಸಿ, ಸನ್ಮಾನಿಸುತ್ತಿರುವುದು ಮೆಚ್ಚುಗೆಯ ಸಂಗತಿ ಎಂದರು. ಈ ವೇಳೆ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿದ ವಿ.ರುಕ್ಮಿಣಿ, ಡಾ.ಕೆ.ವಿ.ಲಕ್ಷ್ಮಿದೇವಿ, ಅಂಜನ ಪ್ರಕಾಶ್ ಹಾಗೂ ಪಾರ್ವತಮ್ಮ ಅವರಿಗೆ 'ಆದರ್ಶ ಅಮ್ಮ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಮಾಜ ಸೇವಕರಾದ ಡಾ.ಕೆ.ರಘುರಾಮ್ ವಾಜಪೇಯಿ, ಡಾ.ಪುಷ್ಪ ಅಯ್ಯಂಗಾರ್, ಸತ್ಸಂಗ ಪ್ರಚಾರಕಿ ಸುಮತಿ ಸುಬ್ರಮಣ್ಯ, ಸ್ನೇಹ ಸಿಂಚನ ಟ್ರಸ್ಟ್ ಅಧ್ಯಕ್ಷೆ ಮ.ನ. ಲತಾಮೋಹನ್ ಇನ್ನಿತರರು ಉಪಸ್ಥಿತರಿದ್ದರು.

ಲೀಗ್ ಪಂದ್ಯದ ವೇಳೆ ಹೃದಯಾಘಾತದಿಂದ ಕ್ರಿಕೆಟಿಗ ನಿಧನ

ಬೆಂಗಳೂರು: ಕರ್ನಾಟಕದ ಮಾಜಿ ಪ್ರಥಮ ದರ್ಜೆ ಕ್ರಿಕೆಟಿಗ ಸಂತೇಬೆನ್ನೂರು ಲೋಕೇಶ್ ಅಕ್ಷಯ್(39), ಭಾನುವಾರ ಬೆಂಗಳೂರಿನಲ್ಲಿ ಡಿವಿಷನ್ 3 ಪಂದ್ಯ ಆಡುವಾಗ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಎಸ್‌ಎಲ್ ಅಕ್ಷಯ್ 2014–15ರಲ್ಲಿ ರಣಜಿ ಟ್ರೋಫಿ ಗೆದ್ದ ಕರ್ನಾಟಕ ತಂಡದ ಭಾಗವಾಗಿದ್ದರು. ಆದರೂ ಅವರು ಆ ಋತುವಿನಲ್ಲಿ ಒಂದು ಪಂದ್ಯವನ್ನು ಆಡಲಿಲ್ಲ. ಅವರು 2019ರಲ್ಲಿ ಕರ್ನಾಟಕ ಪ್ರೀಮಿಯರ್ ಲೀಗ್ ಸಮಯದಲ್ಲಿ ತಮ್ಮ ಕೊನೆಯ ವೃತ್ತಿಪರ ಪಂದ್ಯವನ್ನು ಆಡಿದ್ದರು. ಅಲ್ಲದೆ ಬಳ್ಳಾರಿ ಟಸ್ಕರ್ಸ್ ವಿರುದ್ಧ ಬಿಜಾಪುರ ಬುಲ್ಸ್ ಅನ್ನು ಪ್ರತಿನಿಧಿಸಿದ್ದರು.



ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಗುಂಪು ಹಂತದ ಪಂದ್ಯದಲ್ಲಿ ಅವರು ಸೌರಾಷ್ಟ್ರ ವಿರುದ್ಧ ರಣಜಿಗೆ ಪಾದಾರ್ಪಣೆ ಮಾಡಿದರು. ಅವರ ವೃತ್ತಿಜೀವನದಲ್ಲಿ, ಅವರು ಕರ್ನಾಟಕಕ್ಕಾಗಿ ಒಟ್ಟು ಆರು ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. ಕರ್ನಾಟಕವನ್ನು ವೈಟ್–ಬಾಲ್ ಸ್ವರೂಪಗಳಲ್ಲಿ ಪ್ರತಿನಿಧಿಸಿದ್ದರು. ಮೂರು ಏಕದಿನ ಮತ್ತು 9 ಟಿ20 ಪಂದ್ಯಗಳನ್ನು ಆಡಿದ್ದರು. ಅವರು ತಮ್ಮ ವೃತ್ತಿಪರ ವೃತ್ತಿಜೀವನದಲ್ಲಿ 32 ವಿಕೆಟ್‌ಗಳನ್ನು ಕಬಳಿಸಿದ್ದರು.

ಶಿವಮೊಗ್ಗದಲ್ಲಿ ಜನಿಸಿದ ಅವರು ಕರ್ನಾಟಕ ಪರ ಕೊನೆಯ ಬಾರಿಗೆ ಕಾಣಿಸಿಕೊಂಡಿದ್ದು 2013ರ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಲೀಗ್‌ನ 2012–13 ಋತುವಿನಲ್ಲಿ ಬರೋಡಾ ವಿರುದ್ಧ. ಅಲ್ಲಿ ಅವರು ಏಳು ಎಸೆತಗಳಲ್ಲಿ 10 ರನ್‌ಗಳನ್ನು ಮತ್ತು ಇಂದೋರ್‌ನಲ್ಲಿ 3.5 ಓವರ್‌ಗಳಲ್ಲಿ 39 ರನ್‌ಗಳಿಗೆ ಎರಡು ವಿಕೆಟ್‌ಗಳನ್ನು ಕಬಳಿಸಿದ್ದರು.

ಪಶ್ಚಿಮ ಬಂಗಾಳದ ಫಾಲ್ಟಾ ಕ್ಷೇತ್ರದ ಫಲಿತಾಂಶ ಪ್ರಕಟ

ಬಿಜೆಪಿ ಅಭ್ಯರ್ಥಿ ದೇಭಾಂಶು ಪಾಂಡಾಗೆ ಲಕ್ಷಕ್ಕೂ ಅಧಿಕ ಮತಗಳ ಅಂತರದ ಗೆಲುವು

ಫಾಲ್ಟಾ: ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ದೇಭಾಂಶು ಪಾಂಡಾ 1 ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಜಯ ಸಾಧಿಸಿದ್ದಾರೆ.

ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಚುನಾವಣಾ ಅಕ್ರಮಗಳು ನಡೆದಿವೆ ಎಂಬ ಆರೋಪದ ಹಿನ್ನೆಲೆಯಲ್ಲಿ ಫಾಲ್ಟಾ ಕ್ಷೇತ್ರಕ್ಕೆ ಮೇ 21ರಂದು ನಡೆದಿದ್ದ ಮರುಮತದಾನದಲ್ಲಿ ಶೇ.88ರಷ್ಟು ಮಂದಿ ಹಕ್ಕು ಚಲಾಯಿಸಿದ್ದರು. ಭಾನುವಾರ ಮತ ಎಣಿಕೆ ನಡೆದಿದ್ದು, ಪಾಂಡಾ 1,09,021 ಮತಗಳ ಅಂತದರಿಂದ ಗೆಲುವು ಸಾಧಿಸಿದ್ದಾರೆ. ಅವರಿಗೆ ಒಟ್ಟು 1,49,666 ಮತಗಳು ಲಭಿಸಿವೆ. ಅವರ ಸಮೀಪದ ಸ್ಪರ್ಧಿಯಾಗಿದ್ದ ಸಿಪಿಐ(ಎಂ)ನ ಶಂಭುನಾಥ್ ಕುರ್ಮಿ 40,645 ಮತಗಳನ್ನು ಪಡೆದಿದ್ದಾರೆ. ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ ಅಬ್ದುರ್ ರಜಾಕ್ ಮೊಲ್ಲಾ, 10,084 ಮತಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.



ಪಶ್ಚಿಮ ಬಂಗಾಳ ವಿಧಾನಸಭೆಗೆ ಇತ್ತೀಚೆಗೆ ಎರಡು ಹಂತಗಳಲ್ಲಿ ನಡೆದಿತ್ತು. 152 ಕ್ಷೇತ್ರಗಳಿಗೆ ಏಪ್ರಿಲ್ 23ರಂದು ಮೊದಲ ಹಂತ ಹಾಗೂ ಫಾಲ್ಟಾ ಸೇರಿದಂತೆ ಉಳಿದ 142 ಕ್ಷೇತ್ರಗಳಿಗೆ ಏಪ್ರಿಲ್ 29ರಂದು ಎರಡನೇ ಹಂತದ ಮತದಾನವಾಗಿತ್ತು. 'ಫಾಲ್ಟಾದಲ್ಲಿ ಏಪ್ರಿಲ್ 29ರಂದು ನಡೆದ ಮತದಾನದ ವೇಳೆ ಚುನಾವಣಾ ಅಕ್ರಮಗಳು ನಡೆದಿವೆ' ಎಂಬ ಕಾರಣ ನೀಡಿ ಚುನಾವಣಾ ಆಯೋಗವು ಮರು ಚುನಾವಣೆ ಘೋಷಿಸಿತ್ತು. ಆದರೆ, ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಜಹಾಂಗೀರ್ ಖಾನ್ ಮರುಮತದಾನಕ್ಕೆ ಇನ್ನು 2 ದಿನಗಳು ಬಾಕಿ ಇದ್ದಾಗ ಕಣದಿಂದ ಹಿಂದೆ ಸರಿದಿದ್ದರು. ಆದಾಗ್ಯೂ ಅವರಿಗೆ 7,783 ಜನರು ಮತ ನೀಡಿದ್ದಾರೆ.

ಬಿಜೆಪಿ ಬಲ 208ಕ್ಕೆ: 294 ಸದಸ್ಯ ಬಲದ ಪಶ್ಚಿಮ ಬಂಗಾಳ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 207 ಕ್ಷೇತ್ರಗಳಲ್ಲಿ ಜಯ ಸಾಧಿಸುವ ಮೂಲಕ ಭಾರಿ ಬಹುಮತ ಗಳಿಸಿದ್ದ ಬಿಜೆಪಿ, ಇದೇ ಮೊದಲ ಬಾರಿಗೆ ಬಂಗಾಳದಲ್ಲಿ ಸರ್ಕಾರ ರಚಿಸಿದೆ. ಇದೀಗ ಫಾಲ್ಟಾದಲ್ಲಿ ಗೆಲ್ಲುವುದರೊಂದಿಗೆ ಸಂಖ್ಯಾಬಲ 208ಕ್ಕೆ ಏರಿದೆ. 2021ರಲ್ಲಿ 215 ಕ್ಷೇತ್ರಗಳಲ್ಲಿ ಗೆದ್ದು ಸತತ 3ನೇ ಅವಧಿಗೆ ಅಧಿಕಾರ ಹಿಡಿದಿದ್ದ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಪಕ್ಷ ಈ ಬಾರಿ 80 ಸ್ಥಾನಗಳಿಗೆ ಕುಸಿದಿದೆ.

ಸಂಜೀವಮೂರ್ತಿಗೆ ಪಿಹೆಚ್.ಡಿ ಪದವಿ

ಮೈಸೂರು, ಮೇ 24–ಸಂಜೀವ ಮೂರ್ತಿ ಹೆಚ್ ಅವರು ಡಾ. ಸುರೇಶ್.ಎಂ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ ಸಮಾಜಕಾರ್ಯ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.



4ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿದೆ

ದುಃಖತಪ್ತರು: ಪತ್ನಿ- ಶ್ರೀಮತಿ ರತ್ನ, ಮಕ್ಕಳಾದ ಪ್ರದೀಪ್ ಗೌಡ, ಕಿರಣ್ ಗೌಡ,ಸೊಸೆ - ಸಿಂಧು, ಮೊಮ್ಮಗ -ರಿತ್ವಿಕ್ ಗೌಡ, ಮಾನ್ಯ ಹಾಗೂ ಲಕ್ಕಣ್ಣನ ಕುಳ್ಳೇಗೌಡರ ಕುಟುಂಬ ವರ್ಗ ಕುಂಬಾರ ಕೊಪ್ಪಲು.

ಶ್ರೀ ಲಕ್ಕೇಗೌಡರು (ಲಾರಿ)

ಮೈಸೂರು ಮಿತ್ರ 47


ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಎಬೋಲಾ ಭೀತಿ: ಡಿಆರ್‌ಸಿ, ಉಗಾಂಡಾ, ದಕ್ಷಿಣ ಸುಡಾನ್‌ಗೆ ಅನಗತ್ಯ ಪ್ರಯಾಣ ತಪ್ಪಿಸಲು ಕೇಂದ್ರ ಸರ್ಕಾರ ಮನವಿ

ನವದೆಹಲಿ: ಆಫ್ರಿಕಾದ ಪ್ರಮುಖ ದೇಶಗಳಲ್ಲಿ ಮಾರಕ ಎಬೋಲಾ ವೈರಸ್ ತೀವ್ರವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಆರೋಗ್ಯ ಸಚಿವಾಲಯವು ಭಾರತೀಯ ನಾಗರಿಕರಿಗೆ ಕಟ್ಟುನಿಟ್ಟಿನ ಪ್ರಯಾಣ ಮಾರ್ಗಸೂಚಿಯನ್ನು ಹೊರಡಿಸಿದೆ.





ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ, ಉಗಾಂಡಾ ಮತ್ತು ದಕ್ಷಿಣ ಸುಡಾನ್ ದೇಶಗಳಿಗೆ ಅನಗತ್ಯ ಪ್ರಯಾಣ ಮಾಡಬೇಡಿ ಎಂದು ತಿಳಿಸಿದೆ. ವಿಶ್ವ ಆರೋಗ್ಯ ಸಂಸ್ಥೆಯು, ಈ ದೇಶಗಳಲ್ಲಿನ ಎಬೋಲಾ ಪರಿಸ್ಥಿತಿಯನ್ನು ಜಾಗತಿಕ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ ಎಂದು ಘೋಷಿಸಿದ ಬೆನ್ನಲ್ಲೇ ಭಾರತ ಸರ್ಕಾರ ಈ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ.

ಸದ್ಯ ಆಫ್ರಿಕಾದಲ್ಲಿ ಹರಡುತ್ತಿರುವ ಬುಂಡಿಬುಗ್ಯೋ ಹೆಸರಿನ ಎಬೋಲಾ ವೈರಸ್ ತಳಿಗೆ ಯಾವುದೇ ನಿರ್ದಿಷ್ಟ ಲಸಿಕೆ ಇಲ್ಲದಿರುವುದು ಆತಂಕಕ್ಕೆ ಕಾರಣವಾಗಿದೆ. ಎಬೋಲಾ ಪೀಡಿತ ದೇಶಗಳಿಂದ ಭಾರತಕ್ಕೆ ಬರುವ ಅಥವಾ ಆ ದೇಶಗಳ ಮೂಲಕ ಪ್ರಯಾಣ ಬೆಳೆಸಿ ಬರುವ ಎಲ್ಲಾ ಪ್ರಯಾಣಿಕರಿಗೆ ದೇಶದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಕಡ್ಡಾಯವಾಗಿ ಥರ್ಮಲ್ ಸ್ಕ್ರೀನಿಂಗ್ ಮತ್ತು ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ.

ಒಂದು ವೇಳೆ ಯಾರಾದರೂ ಸೋಂಕಿತರ ನೇರ ಸಂಪರ್ಕಕ್ಕೆ ಬಂದಿದ್ದರೆ, ಅವರು ಇಮಿಗ್ರೇಷನ್ ಕ್ಲಿಯರೆನ್ಸ್‌ಗೂ ಮುನ್ನವೇ ವಿಮಾನ ನಿಲ್ದಾಣದ ಹೆಲ್ಪ್‌ಡೆಸ್ಕ್‌ಗೆ ಮಾಹಿತಿ ನೀಡುವುದನ್ನು ಕಡ್ಡಾಯ ಗೊಳಿಸಲಾಗಿದೆ. ಬಾಧಿತ ದೇಶಗಳಿಂದ ಮರಳಿದ 21 ದಿನಗಳ ಒಳಗಾಗಿ ಪ್ರಯಾಣಿಕರಲ್ಲಿ ಜ್ವರ, ತಲೆನೋವು, ವಾಂತಿ, ಭೇದಿ ಅಥವಾ ಅಸಹಜ ರಕ್ತಸ್ರಾವದಂತಹ ಲಕ್ಷಣಗಳು ಕಂಡುಬಂದಲ್ಲಿ, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ ತಮ್ಮ ಪ್ರವಾಸದ ಇತಿಹಾಸವನ್ನು ತಿಳಿಸುವಂತೆ ಸೂಚಿಸಲಾಗಿದೆ. ಭಾರತದಲ್ಲಿ ಇದೂವರೆಗೆ ಈ ತಳಿಯ ಎಬೋಲಾದ ಯಾವುದೇ ಪ್ರಕರಣಗಳು ವರದಿಯಾಗಿಲ್ಲ. ಆದಾಗ್ಯೂ, ಮುನ್ನೆಚ್ಚರಿಕೆ ಕ್ರಮವಾಗಿ ದೆಹಲಿಯಲ್ಲಿ ನಡೆಯಬೇಕಾಗಿದ್ದ ಭಾರತ–ಆಫ್ರಿಕಾ ಒಕ್ಕೂಟ ಶೃಂಗಸಭೆಯನ್ನು ಮುಂದೂಡಲಾಗಿದೆ. ದೇಶದ ಎಲ್ಲಾ ರಾಜ್ಯಗಳಿಗೆ ಕ್ವಾರಂಟೈನ್ ಮತ್ತು ಐಸೊಲೇಶನ್ ವಾರ್ಡ್‌ಗಳನ್ನು ಸಜ್ಜುಗೊಳಿಸಲು ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಾರ, ಡಿಆರ್‌ಸಿಯ ಮೂರು ಪ್ರಾಂತ್ಯಗಳಲ್ಲಿ 867 ಶಂಕಿತ ಪ್ರಕರಣಗಳಲ್ಲಿ 204 ಮಂದಿ ಮೃತಪಟ್ಟಿದ್ದಾರೆ. ಆದರೆ, ವಿಶ್ವ ಆರೋಗ್ಯ ಸಂಸ್ಥೆಯ ಇತ್ತೀಚಿನ ಅಂಕಿಅಂಶಗಳ ಪ್ರಕಾರ 750 ಶಂಕಿತ ಪ್ರಕರಣಗಳಲ್ಲಿ 177 ಸಾವುಗಳು ದಾಖಲಾಗಿವೆ.

ಎಬೋಲಾ ತಡೆಗೆ ಸರ್ಕಾರ ಸಜ್ಜು: ಆತಂಕ ಬೇಡ, ವದಂತಿಗಳಿಗೆ ಕಿವಿಗೊಡಬೇಡಿ

ಸಚಿವ ದಿನೇಶ್ ಗುಂಡೂರಾವ್ ಮನವಿ

ಬೆಂಗಳೂರು: ಆಫ್ರಿಕಾ ದೇಶಗಳಲ್ಲಿ ಎಬೋಲಾ ಸೋಂಕು ಹರಡುತ್ತಿರುವ ಹಿನ್ನೆಲೆ ಕರ್ನಾಟಕದಲ್ಲಿ ಆತಂಕ ಪಡುವ ಅಗತ್ಯವಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಜನರಿಗೆ ಭರವಸೆ ನೀಡಿದ್ದಾರೆ. ರಾಜ್ಯದಲ್ಲಿ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಪರಿಸ್ಥಿತಿಯನ್ನು ಆರೋಗ್ಯ ಇಲಾಖೆ ನಿಕಟವಾಗಿ ಗಮನಿಸುತ್ತಿದೆ ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತದಲ್ಲಿ ಇದೂವರೆಗೆ ಯಾವುದೇ ಎಬೋಲಾ ಪ್ರಕರಣ ವರದಿಯಾಗಿಲ್ಲ. ರಾಜ್ಯ ಆರೋಗ್ಯ ಇಲಾಖೆ ಕೇಂದ್ರ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಬೆಳವಣಿಗೆಗಳ ಮೇಲೆ ಕಣ್ಣಿಟ್ಟಿದೆ ಎಂದರು.



ಉಗಾಂಡಾ, ಕಾಂಗೋ ಸೇರಿದಂತೆ ಎಬೋಲಾ ಸೋಂಕು ಕಾಣಿಸಿಕೊಂಡಿರುವ ಆಫ್ರಿಕಾ ದೇಶಗಳಿಂದ ರಾಜ್ಯಕ್ಕೆ ಬರುವ ಪ್ರಯಾಣಿಕರನ್ನು 21 ದಿನಗಳ ಕಾಲ ನಿಗಾದಲ್ಲಿಡಲಾಗುತ್ತದೆ. ಯಾವುದೇ ಲಕ್ಷಣಗಳು ಕಂಡುಬಂದ ಕೂಡಲೇ ತಕ್ಷಣ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈ ಸಂಬಂಧ ಈಗಾಗಲೇ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಜನರು ಅನಗತ್ಯ ಆತಂಕಕ್ಕೊಳಗಾಗದೇ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸಬೇಕು ಎಂದು ಮನವಿ ಮಾಡಿದರು.

5ನೇ ವರ್ಷದ ಪುಣ್ಯಸ್ಮರಣೆ



ರುಕ್ಮಿಣಿ (ಅಕ್ಕ) ನಿಧನ 25.05.2021 — ಎಂ.ಹೆಚ್.ಕೃಷ್ಣಪ್ಪ (ತಮ್ಮ) ನಿಧನ 24.05.2021

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖತಪ್ತರು: ಕುಟುಂಬವರ್ಗದವರು ಹಾಗೂ ಹಿತೈಷಿಗಳು

6ನೇ ವರ್ಷದ ಸವಿನೆನಪು



ಶ್ರೀಮತಿ ಸಾವಿತ್ರಿ

ನಿಧನ: 25.05.2020

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಪತಿ ಚೆಲುವಯ್ಯ ಹಾಗೂ ಕುಟುಂಬವರ್ಗದವರು, ಕೆ.ಆರ್. ಪೇಟೆ

ಕೋರ್ಟ್ ಹಾಲ್‌ನಲ್ಲಿ ಮಹಿಳೆ ಆತ್ಮಹತ್ಯೆಗೆ ಯತ್ನ; ವಿಚಾರಣೆಗೆ ಅಡ್ಡಿ ಆರೋಪ: ಪ್ರಕರಣ ದಾಖಲು

ಬೆಂಗಳೂರು: ವರದಕ್ಷಿಣೆ ಕಿರುಕುಳ ಪ್ರಕರಣದ ವಿಚಾರಣೆಗೆ ಹಾಜರಾಗಿದ್ದ ಮಹಿಳೆಯೊಬ್ಬರು ನ್ಯಾಯಾಧೀಶರ ಸಮ್ಮುಖದಲ್ಲೇ ಆತ್ಮಹತ್ಯೆಗೆ ಯತ್ನಿಸಿದ ಘಟನೆ ರಾಮನಗರ ನ್ಯಾಯಾಲಯದಲ್ಲಿ ನಡೆದಿದ್ದು, ಈ ಘಟನೆಯಿಂದ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಸಿತ್ತು.



ಅಸ್ವಸ್ಥಗೊಂಡ ಮಹಿಳೆಯನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇದೀಗ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ರಾಮನಗರ ಪಟ್ಟಣದ ಟಿಪ್ಪು ಸರ್ಕಲ್ ಸಮೀಪದ ನಿವಾಸಿ 32 ವರ್ಷದ ಅಮ್ರೀನ್ ಎಂಬ ಮಹಿಳೆ, ಇವರು ತಮ್ಮ ಪತಿ ಅಲೀಮ್ ಪಾಷಾ ಹಾಗೂ ಇತರರ ವಿರುದ್ಧ ವರದಕ್ಷಿಣೆ ಕಿರುಕುಳದ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದ ವಿಚಾರಣೆ ವೇಳೆ ಅಮ್ರೀನ್ ನ್ಯಾಯಾಲಯದಲ್ಲೇ ವಿಷ ಸೇವಿಸಿ ಅಸ್ವಸ್ಥಗೊಂಡು ಕುಸಿದು ಬಿದ್ದಿದ್ದಾರೆ.

ಘಟನೆಯ ಸಮಯದಲ್ಲಿ ನ್ಯಾಯಾಧೀಶರು, ನ್ಯಾಯಾಲಯ ಸಿಬ್ಬಂದಿ, ಪೊಲೀಸರು, ಅಮ್ರೀನ್ ಅವರ ತಂದೆ ಮುನವರ್ ಪಾಷಾ ಹಾಗೂ ಇತರರು ನ್ಯಾಯಾಲಯದಲ್ಲಿದ್ದರು. ವಿಚಾರಣೆ ವೇಳೆ ಮಹಿಳೆ ಕುರ್ಚಿಯಿಂದ ಏಕಾಏಕಿ ಕುಸಿದು ಬಿದ್ದಿದ್ದು, ಬಳಿಕ ಸಿಬ್ಬಂದಿ ಮತ್ತು ಪೊಲೀಸರು ಅವರನ್ನು ರಾಮನಗರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ನ್ಯಾಯಾಲಯದ ಹಿರಿಯ ಶಿರಸ್ತೇದಾರ್ ಶ್ರೀನಿವಾಸ್ ನೀಡಿದ ದೂರಿನ ಆಧಾರದಲ್ಲಿ ರಾಮನಗರ ಟೌನ್ ಪೊಲೀಸ್ ಠಾಣೆಯಲ್ಲಿ ಅಮ್ರೀನ್ ವಿರುದ್ಧ ನ್ಯಾಯಾಲಯದ ಕಾರ್ಯಾಚರಣೆಗೆ ಅಡ್ಡಿಪಡಿಸುವ ಉದ್ದೇಶದಿಂದ ಆತ್ಮಹತ್ಯೆಗೆ ಯತ್ನಿಸಿದ ಆರೋಪದಡಿ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 226 ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಅಮ್ರೀನ್ ಇದೀಗ ಪ್ರಾಣಾಪಾಯದಿಂದ ಪಾರಾಗಿದ್ದು, ಆಸ್ಪತ್ರೆಯಿಂದ ಬಿಡುಗಡೆಯಾದ ಬಳಿಕ ವಿಚಾರಣಾಧಿಕಾರಿಗಳ ಮುಂದೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಕಳೆದ ಮಾರ್ಚ್ 29ರಂದು ಅಮ್ರೀನ್ ತಮ್ಮ ಪತಿ ಅಲೀಂ ಪಾಷಾ ಹಾಗೂ ಇತರ ಆರು ಮಂದಿ ವಿರುದ್ಧ ರಾಮನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಿದ್ದರು. ಅಮ್ರೀನ್ ಅವರಿಗೆ ಇದು ಎರಡನೇ ವಿವಾಹವಾಗಿದ್ದು, ಅವರ ಮೊದಲ ಪತಿ ಮೃತಪಟ್ಟಿದ್ದರು. ಅಲೀಂ ಪಾಷಾ ಅವರ ಮೊದಲ ಪತ್ನಿಯೂ ಮೃತಪಟ್ಟಿದ್ದಾಳೆ ಎಂದು ತಿಳಿದುಬಂದಿದೆ.

ಪೊಲೀಸ್ ಕ್ವಾಟ್ರರ್ಸ್‌ನಲ್ಲಿ ಮಹಿಳೆ ಆತ್ಮಹತ್ಯೆ: ಪತಿ ಮನೆಯವರ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು: ಪೊಲೀಸ್ ಸಿಬ್ಬಂದಿಯೊಬ್ಬರ ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಕೆಆರ್ ಪುರಂ ಪೊಲೀಸ್ ಕ್ವಾಟ್ರರ್ಸ್‌ನಲ್ಲಿ ನಡೆದಿದೆ. ಬೆಂಗಳೂರು ಪೊಲೀಸ್ ಕಮಿಷನರೇಟ್‌ನ ಹೆಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಕಾನ್ಸ್ಟೇಬಲ್ ರಾಜೇಶ್ ಆರಾಧ್ಯ ಅವರ ಪತ್ನಿ ಲಕ್ಷ್ಮೀ ಪ್ರಿಯ(26) ಆತ್ಮಹತ್ಯೆಗೆ ಮಾಡಿಕೊಂಡಿದ್ದು, ಪತಿ ಹಾಗೂ ಅತ್ತೆ–ಮಾವರಿಂದ ವರದಕ್ಷಿಣೆ ಕಿರುಕುಳ ಮತ್ತು ಮಾನಸಿಕ ಹಿಂಸೆ ಎದುರಿಸುತ್ತಿದ್ದರು ಎಂದು ಲಕ್ಷ್ಮೀ ಪ್ರಿಯಾ ಅವರ ಪೋಷಕರು ಆರೋಪಿಸಿದ್ದಾರೆ.

ಘಟನೆಗೂ ಮೊದಲು ಲಕ್ಷ್ಮೀ ಪ್ರಿಯಾ ತಮ್ಮ ಮೊಬೈಲ್ ಪಾಸ್‌ವರ್ಡ್ ಅನ್ನು ಸಹೋದರಿ ಜಯಶ್ರೀಗೆ ವಾಟ್ಸಾಪ್ ಮೂಲಕ ಕಳುಹಿಸಿದ್ದರು ಎನ್ನಲಾಗಿದೆ. ಸಂದೇಹಗೊಂಡ ಸಹೋದರಿ ಕರೆ ಮಾಡಿದರೂ ಪ್ರತಿಕ್ರಿಯೆ ಸಿಗದ ಹಿನ್ನೆಲೆಯಲ್ಲಿ ಪತಿ ರಾಜೇಶ್ ಅವರನ್ನು ಸಂಪರ್ಕಿಸಿದಾಗ ಆತ್ಮಹತ್ಯೆ ವಿಷಯ ಬೆಳಕಿಗೆ ಬಂದಿದೆ. ದಂಪತಿಗೆ ಎಂಟು ತಿಂಗಳ ಹೆಣ್ಣು ಮಗು ಇದೆ. ಈ ಸಂಬಂಧ ಕೆಆರ್ ಪುರಂ ಪೊಲೀಸರು ರಾಜೇಶ್ ಹಾಗೂ ಅವರ ಪೋಷಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

